ನಾನು ಮೊದಲೇ ಹೇಳಿದಹಾಗೆ ಆರ್ಥಿಕಾಭಿವೃದ್ಧಿಗಾಗಿ ನಾವೇನು ಯೋಜನೆಮಾಡಿದ್ದೇವೆಯೋ ಆ ಎಲ್ಲಾ ಯೋಜನೆಗಳನ್ನೂ ದೇಶಾಭಿವೃದ್ಧಿ, ಕೈಗಾರಿಕಾಭಿವೃದ್ಧಿ, ವಿದ್ಯಾಭಿವೃದ್ಧಿ—ಈ ಮೂರು ದೃಷ್ಟಿಯಿಂದಲೇ ಯೋಚನೆ ಮಾಡಬೇಕಾಗಿರುವುದರಿಂದ ಈ ಮೂರು ವಿಚಾರಗಳಲ್ಲಿ ಸರ್ವೇ ಸಾಧಾರಣವಾಗಿ ಪ್ರಾವೀಣ್ಯತೆ ಪಡೆದಿರುವವರಿಂದ ಒಡಗೂಡಿದ ಒಂದೇ ಒಂದು ಪ್ಲಾನಿಂಗ್ ಸಮಿತಿಯಿದ್ದರೆ ಸಾಕು. ಈ ದೃಷ್ಟಿಯಿಂದಲೇ ಕೇಂದ್ರ ಸರ್ಕಾರದವರು ಒಂದು ಸಮಿತಿಯನ್ನು ಏರ್ಪಾಡು ಮಾಡಿದ್ದಾರೆ. ಅದೇ ಮಾರ್ಗದಲ್ಲಿ ಅವರು ಉಪಯೋಗಿಸಿಕೊಂಡಿರತಕ್ಕ ಒಂದು ರೀತಿಯಲ್ಲೇ ನಮ್ಮ ಸಂಸ್ಥಾನಕ್ಕನುಗುಣವಾಗಿ ಒಂದು ಸಮಿತಿಯನ್ನು ನಾವು ಕೂಡಲೇ ರಚಿಸಿದರೆ ಬಹಳ ಮಟ್ಟಿಗೆ ನಮ್ಮ ದೇಶದ ಅಭಿವೃದ್ಧಿಗೆ ಸಾಧಕವಾಗುತ್ತದೆಂದು ನಾನು ಭಾವಿಸುತ್ತೇನೆ.

ಈಗಿರತಕ್ಕಂಥ ರೀತಿಯಲ್ಲಿ ಎಕನಾಮಿಕ್ ಕಾನ್ಫರೆನ್ಸ್ ಒಳಗೊಂಡಿರುವ ನಾನಾ ರೀತಿಯ ಕಾರ್ಯ ಸಮಿತಿಗಳಿರುವುದಾದರೆ ಅನೇಕ ಸಂದರ್ಭದಲ್ಲಿ ಒಬ್ಬರಿಗೊಬ್ಬರಿಗೆ, ಒಂದು ಸಮಿತಿಗೂ ಮತ್ತು ಇನ್ನೊಂದು ಸಮಿತಿಗೂ ನೇರವಾದ ಒಂದು ಸಂಬಂಧ ಕಲ್ಪನೆಯಾಗದೆ ತನ್ಮೂಲಕ ಪ್ರಗತಿಗೆ ಬಹಳಮಟ್ಟಿಗೆ ಅನಾನುಕೂಲವಾಗಬಹುದು. ಆದ್ದರಿಂದ ಒಂದೇ ಒಂದು ಸಮಿತಿಯು ಆವಶ್ಯಕ. ಹೆಚ್ಚು ಸದಸ್ಯರ ಪ್ರಕೃತವೂ ಇಲ್ಲ. ಈಗಿನ ಪರಿಸ್ಥಿತಿಗನುಗುಣವಾಗಿ ಅನುಕೂಲವಾದ ರೀತಿಯಲ್ಲಿ ಆರ್ಥಿಕಾಭಿವೃದ್ಧಿಯನ್ನು ದೇಶದಲ್ಲಿ ಸಾಧಿಸಬೇಕೆಂಬ ದೃಷ್ಟಿಯಿಂದ ಇಂತಹ ಒಂದು ಎಕನಾಮಿಕ್ ಪ್ಲಾನಿಂಗ್ ಸಮಿತಿಯನ್ನು ಸರ್ಕಾರದವರು ಕೂಡಲೇ ನೇಮಿಸಿ ಇದುವರೆಗೆ ಕೆಲಸ ಮಾಡಿರುವ ಎಕನಾಮಿಕ್ ಕಾನ್ಫರೆನ್ಸ್ ಸಮಿತಿಯನ್ನೂ ಮತ್ತು ಅದಕ್ಕೆ ಸಂಬಂಧವಾದ ಸಮಿತಿಗಳೇನಿವೆಯೋ ಅವುಗಳನ್ನೆಲ್ಲಾ ವಜಾ ಮಾಡಬೇಕಾದ್ದು ಅಗತ್ಯ

ಎಂದು ಅಭಿಪ್ರಾಯಪಟ್ಟು ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved :

"That this Assembly is of the opinion that a standing committee for planning consisting of not more than 15 members should be constituted by the Government of Mysore to plan and recommend to them the various development projects helpful to the economic prosperity of the State, in place of the several committees functioning under the present Economic Conference."

Sri L. SIDDAPPA (Shimoga District—General).—I rise to a point of order. The object of this resolution is to set up a planning committee. But from a perusal of the speech made by the Hon'ble Finance Minister in introducing the Budget before the House, it is clear—he has made a definite statement to the effect—that Government are contemplating the constitution of a committee on the lines envisaged in this resolution and that steps would be taken to that effect immediately. In the face of that statement I submit that this resolution would be superfluous serving no purpose.

Sri K. CHENGALARAYA REDDY (Leader of the House).—Does the Hon'ble Member refer to the Estimates Committee that the Hon'ble Finance Minister referred to in his speech ?

Sri L. SIDDAPPA.—Not the Estimates Committee. He has made reference to the National Planning Commission constituted by the Centre and a committee to work in co-ordination with the Central National Planning Committee.

Sri K. CHENGALARAYA REDDY.—Am I to understand, Sir, that the Hon'ble Member's contention is that whatever has been referred to in Rajpramukh's Address or the speech of the Hon'ble Finance Minister need not again be discussed on the floor of this House and opinion expressed by Hon'ble Members, whether by cut motion or a resolution or some such thing ?

Sri L. SIDDAPPA.—That would be unnecessary.

Mr. SPEAKER.—On the other hand it will strengthen the hands of the Government. Is it not ?

Sri K. CHENGALARAYA REDDY.—I will keep the suggestion in mind.

Sri L. SIDDAPPA.—You should have kept it in mind when you raised an objection on the previous resolution.

Sri M. GOVINDA REDDY (Chitaldrug District-General).—I give my full support to this resolution. In the new set-up, when new duties have devolved upon the people, it is necessary that whatever the State may do in the matter of developing the economic strength of the population it must be a planned one. We all know that this country has been exploited for nearly a century and a half by people who had no relation with the population here. This is one of the poorest countries in the world. If the nation-building activities are to develop, we have to give some foundation for the economic status of the society here. We have to improve the national wealth of the country. For that, industries have to be developed, agricultural avocation must be developed and the social habits of the people also must be developed. For all these a planned attempt will succeed better than a haphazard attempt. At present there is the Economic Conference which attends not to the basic matters but to matters on the surface. My view-point is that we have to lay the foundation from the very bottom. We have to change the entire social outlook of the people. In marriages, religious ceremonies, in fairs and festivals, etc., on account of habits, much national wealth is being wasted. All that will have to be saved and utilised for the economic betterment of the people. There is a lot for such a planning committee to do in order to educate the people in social habits and in the habits of saving. Such a thing is very necessary in the matter of production also. It is very necessary to change the outlook of the people. Sir, on the production side, it is a sad fact to notice that production is at a level which is not reflecting to the credit of the country. In order to step up production, both in the field of agriculture and in the field of manufacture, it is very necessary that the people must be impressed of the fact that their welfare depends on the measure of production. The more we produce, more national wealth will be

increased. The more national wealth the State has, the better will be the welfare of the people. So, Sir, it is necessary to inculcate habits of saving and industry in the people and give them an idea of what national wealth consists in, in order that the people may co-operate in the production and increase of national wealth. We will be saving a lot of expenditure if we co-ordinate all the activities of the Government in the field of economic development. There are several departments, as was pointed out by the Hon'ble Mover of this resolution, which are working almost incoherently. Their activities must be co-ordinated if we have to carry on this economic upliftment to a successful conclusion. Therefore, I feel that a planning committee is necessary to do all this work in order to change and promote the outlook of the people and in order to co-ordinate all the attempts that are being made to promote the economic upliftment of the people.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಈಗ ಶ್ರೀಮಾನ್ ಮಾದಯ್ಯಗೌಡರು ತಂದಿರತಕ್ಕ ನಿರ್ಣಯದ ಕೊನೆಯ ಭಾಗದಲ್ಲಿ "in place of the several committees functioning under the present Economic Conference" ಎಂದು ಹೇಳಿದ್ದಾರೆ. ಇದಕ್ಕೆ ಬದಲು 'in addition to the several committees' ಎಂದು ಹೇಳಿದ್ದರೆ ಚೆನ್ನಾಗಿತ್ತು. ಈ ಸಮಿತಿಗಳನ್ನೆಲ್ಲಾ ತೆಗೆದು ಇವಕ್ಕೆ ಬದಲಾಗಿ ಒಂದೇ ಒಂದು ಪ್ಲಾನಿಂಗ್ ಸಮಿತಿ ಮಾಡಿ ಎಂದು ಹೇಳುವುದು ಅಷ್ಟು ಸೂಕ್ತವಾಗಿ ಕಾಣುವುದಿಲ್ಲ. ಒಂದು ಪ್ಲಾನಿಂಗ್ ಸಮಿತಿಯನ್ನಿಟ್ಟುಕೊಂಡರೂ ಕೂಡ research. ಎಂದರೆ, ಸಂಶೋಧನಾ ಕಾರ್ಯ ನಡೆಸಬೇಕಾದ ವಿಷಯದಲ್ಲಿ, ಉದಾಹರಣೆಗೆ ವಿದ್ಯಾಭ್ಯಾಸದ ಅಭಿವೃದ್ಧಿಯ ಸಂಬಂಧವಾಗಿ ಒಂದು ಸಮಿತಿ, ವ್ಯವಸಾಯಾಭಿವೃದ್ಧಿ ಸಂಬಂಧವಾಗಿ ಒಂದು ಸಮಿತಿ ಮತ್ತು ಇತರ ಬೇರೆ ಬೇರೆ ವಿಷಯಗಳಿಗೆ ಒಂದೊಂದು ಸಮಿತಿ ಹಾಗೆ ಉಪಸಮಿತಿಗಳಿರಬೇಕಾಗುತ್ತದೆ. ಹಾಗೆ ಈ ಎಲ್ಲ ಸಮಿತಿಗಳೂ ಮಾಡುವ ಕೆಲಸವನ್ನು co-ordinate ಮಾಡಲು ಒಂದು ಸಮಿತಿ ಇರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಹಾಗಿಲ್ಲದೆ ಒಂದೇ ಸಮಿತಿ ಕುಳಿತು ಎಲ್ಲಾ ವಿಷಯಗಳಲ್ಲಿಯೂ research ಮಾಡಿ ಅನೇಕ ಕೆಲಸಗಳನ್ನು ಮಾಡುವುದು ಕಷ್ಟ. ಇಲ್ಲಿ ಸೂಚಿಸಿರುವಂತೆ ಒಂದು ಪ್ಲಾನಿಂಗ್ ಸಮಿತಿಯನ್ನು ಮಾಡಿ ಅದನ್ನು ಕೇಂದ್ರ ಸಮಿತಿಯೆಂದಿಟ್ಟುಕೊಳ್ಳಬಹುದು. ಇದರಲ್ಲಿ ಏನು ವಿಶೇಷವೆಂದರೆ, ಇತರ ಸಮಿತಿಗಳು ಮಾಡುವುದನ್ನೆಲ್ಲಾ ಈ ಸಮಿತಿ ಪರಿಶೀಲನೆ ಮಾಡಬಹುದು. ಈಗ ಸರ್ಕಾರದಲ್ಲಿರುವ ಎಲ್ಲ ಇಲಾಖೆಗಳನ್ನೂ ನೋಡಿದರೆ, ಒಂದು ಇಲಾಖೆ ಕೆಲಸಕ್ಕೂ ಇನ್ನೊಂದು ಇಲಾಖೆ ಕೆಲಸಕ್ಕೂ ಸಂಬಂಧವಿಲ್ಲ. ಆದುದರಿಂದ ಒಂದು ಇಲಾಖೆ ಮಾಡುವ ಕೆಲಸ ಇನ್ನೊಂದು ಇಲಾಖೆಗೆ ಗೊತ್ತಾಗುವುದಿಲ್ಲ. ಆದುದರಿಂದ ಇಂತಹ ಒಂದು ಪ್ಲಾನಿಂಗ್ ಸಮಿತಿಯು ಅವಶ್ಯಕತೆಯಿದೆ. ಇತರ ಸಮಿತಿಗಳ ಅವಶ್ಯಕತೆಯೂ ಇದೆ. ಉದಾಹರಣೆಗೆ ಮ್ಯುನಿಸಿಪಲ್ ಕೌನ್ಸಿಲ್ ಇದೆ. ಇದರಲ್ಲಿ ಫೈನಾನ್ಷಿಯಲ್ ಸಮಿತಿಯಿದೆ, ಟೌನ್ ಪ್ಲಾನಿಂಗ್ ಸಮಿತಿಯಿದೆ, ಹೆಲ್ತ್ ಸಮಿತಿಯಿದೆ. ಇವೆಲ್ಲ ಸಮಿತಿಗಳು ಮಾಡುವ ಕೆಲಸಗಳೂ ಮ್ಯುನಿಸಿಪಲ್ ಕೌನ್ಸಿಲ್ಲಿನ ಮುಂದೆ ಬರುತ್ತವೆ. ಅದೇ ರೀತಿ ಇಲ್ಲಿಯೂ ಇರಬೇಕು. ಅದರಿಂದ 'in place of' ಎನ್ನುವುದಕ್ಕೆ ಬದಲು 'in addition to' ಎಂದಿದ್ದರೆ ಒಳ್ಳೆಯದು.

Mr. SPEAKER.—There is no amendment to that effect.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಒಂದು ಪ್ಲಾನಿಂಗ್ ಸಮಿತಿಯನ್ನು ಮಾಡುವ ಹಾಗಿದ್ದಲ್ಲಿ ಅದರಲ್ಲಿ ಇಷ್ಟೇ ಜನರಿರಬೇಕೆಂಬುದನ್ನು ಈಗ ಗೊತ್ತುಮಾಡುವ ಅವಶ್ಯಕತೆಯಿಲ್ಲ. ಆ ಸಮಿತಿಯನ್ನು ಮಾಡುವಾಗ ಯಾವ ಯಾವ ವಿಷಯಕ್ಕೆ ಎಷ್ಟೆಷ್ಟು ಸದಸ್ಯರಿರಬೇಕೆಂಬುದನ್ನು ಯೋಚನೆ ಮಾಡಬೇಕಾಗಿ ಬರುತ್ತದೆ. ಉದಾಹರಣೆಗೆ ವಿದ್ಯಾಭ್ಯಾಸವನ್ನು ತೆಗೆದುಕೊಳ್ಳೋಣ. ಈಗ ಬೇಸಿಕ್ ಎಜ್ಯುಕೇಷನ್ ಬೇಕೆಂದು ಹೇಳುತ್ತಿದ್ದಾರೆ. ಇದಕ್ಕೆ ಪಠ್ಯಪುಸ್ತಕಗಳೂ, ಶಿಕ್ಷಣ ಪಡೆದ ಉಪಾಧ್ಯಾಯರೂ ಬೇಕೆಂದು ಹೇಳುತ್ತಿದ್ದಾರೆ. ಹೀಗೆ ಒಂದೊಂದು ವಿಷಯದಲ್ಲಿಯೂ ಅನುಭವ ಪಡೆದಿರುವ ಎಷ್ಟು ಜನರು ಇರಬೇಕೆಂಬುದನ್ನು ಈಗ ಹೇಳಲು ಸಾಧ್ಯವಿಲ್ಲ. ಒಟ್ಟಿನಲ್ಲಿ ಇತರ ಸಮಿತಿಗಳೂ ಇದ್ದುಕೊಂಡು ಜೊತೆಗೆ ಪ್ಲಾನಿಂಗ್ ಸಮಿತಿ ಇರಬೇಕೆಂಬುದು ನನ್ನ ಅಭಿಪ್ರಾಯ.

*ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಅಧ್ಯಕ್ಷರೆ, ಮಾನ್ಯ ಸದಸ್ಯರು ತಂದಿರುವ ಈ ನಿರ್ಣಯ ಸಾಧುವಾಗಿದೆ. ಆದರೂ ಕೆಲವು ವಿಷಯಗಳನ್ನು ನಾನು ಹೇಳಲು ಇಷ್ಟಪಡುತ್ತೇನೆ.

ಅಧ್ಯಕ್ಷರು.—ಆದರೂ ಎಂದರೆ, ವ್ಯತಿರಿಕ್ತವಾಗಿ ಹೇಳುತ್ತೀರಾ ?

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಇಲ್ಲ, ಪರವಾಗಿ. ನಮಗೆ ಸ್ವಾತಂತ್ರ್ಯ ಬಂದಮೇಲೆ ನಮ್ಮ ದೇಶದಲ್ಲಿ ಕೆಲಸ ಮಾಡುವುದಕ್ಕಿಂತ ಪ್ಲಾನ್ ಹಾಕುವುದು ಹೆಚ್ಚಾಗಿದೆ. ಪ್ಲಾನಿಂಗ್ ಸಮಿತಿಗಳೇನೋ ಬೇಕು, ಇವೆ. ಈಗಿರತಕ್ಕ ಪ್ಲಾನಿಂಗ್ ಸಮಿತಿಗಳು ಹೆಚ್ಚಾಗಿವೆ. ಈ ಸಮಿತಿಗಳಲ್ಲಿ, ಇಲ್ಲಿಯೂ ಇಂಡಿಯಾ ದೇಶದ ಇತರಕಡೆಗಳಲ್ಲಿಯೂ, ಹೆಚ್ಚಿನ ಅನುಭವವಿರತಕ್ಕವರು ಇರುವುದು ಬಹಳ ಕಡಿಮೆ ಎಂದು ನನಗನ್ನಿಸುತ್ತದೆ. ಈಗಾಗಲೇ ಕೆಲವು ಪತ್ರಿಕೆಗಳಲ್ಲಿ ಸಮಿತಿಗಳು ಸಮ್ಮೇಳನಗಳಲ್ಲೇ ಕಾಲ ಕಳೆಯುತ್ತಿದ್ದೇವೆ, ಕೆಲಸ ನಡೆಯುವುದು ಕಡಿಮೆ ಎಂಬ ಅಭಿಪ್ರಾಯ ಬರುತ್ತಿದೆ. ಹೀಗಾಗಬಾರದು.

ಈ ನಿರ್ಣಯದಲ್ಲಿ "in place of the several committees functioning under the present Economic Conference" ಎಂಬುದನ್ನು ಬಿಟ್ಟಿದ್ದರೆ ಚೆನ್ನಾಗಿತ್ತು. ಈ ಸಮಿತಿಯಲ್ಲಿ ಹೆಚ್ಚು ಅನುಭವ ಪಡೆದಿರುವವರು ಇರಬೇಕಾಗುತ್ತದೆ. ವ್ಯವಸಾಯ, ವಿದ್ಯಾಭ್ಯಾಸ ಮುಂತಾದ ವಿಷಯಗಳಲ್ಲಿ ಸಲಹೆ ಕೊಡಲು ಈ ಒಂದೊಂದು ವಿಷಯದಲ್ಲೂ ಪಾರಂಗತರಾಗಿರುವವರು ಬೇಕಾಗುತ್ತಾರೆ. ಈ ಎಲ್ಲ

ವನ್ನೂ ಪರಿಶೀಲನೆ ಮಾಡಬೇಕಾಗುತ್ತದೆ. ಆದಕಾರಣ "in addition to" ಎಂದಿದ್ದರೆ ಚೆನ್ನಾಗಿತ್ತು.

Sri L. SIDDAPPA.—How about financial considerations?

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಮೂರನೇ ತರಗತಿ ಗಾಡಿಯಲ್ಲಿ ಬರುತ್ತೇವೆಂದು ಸದಸ್ಯರು ಒಪ್ಪಿದರೆ ಸುಲಭವಾಗಿರುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಮೂರನೇ ತರಗತಿ ಗಾಡಿಯಲ್ಲಿ ಬರುವವರನ್ನು ಸದಸ್ಯರನ್ನಾಗಿ ಮಾಡಿದರೆ ಸರಿಯಾಗಿ ಕೆಲಸ ಆಗುವುದಿಲ್ಲ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ದೇಶದಲ್ಲಿ ಎಲ್ಲರೂ ಆ ರೀತಿ ಇರುವುದಿಲ್ಲ. ಇದಕ್ಕೆ ಒಪ್ಪಿಕೊಳ್ಳುವವರೂ ಇದ್ದಾರೆ. ಆದುದರಿಂದ ಇದನ್ನು ಗಮನದಲ್ಲಿಟ್ಟುಕೊಂಡು ಸಮಿತಿಯನ್ನು ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಟಿ. ಮಾದಯ್ಯಗೌಡರು.—ಸ್ವಾಮಿ, ಈ ನಿರ್ಣಯದ ವಿಚಾರದಲ್ಲಿ ಭಿನ್ನಾಭಿಪ್ರಾಯವೇ ಇಲ್ಲ.........

ಅಧ್ಯಕ್ಷರು.—ಸ್ವಲ್ಪ ವಿನಾ.

*ಶ್ರೀ ಟಿ. ಮಾದಯ್ಯಗೌಡರು.—ಆದರೆ ಎಕನಾಮಿಕ್ ಕಾನ್ಫರೆನ್ಸಿಗೆ ಸಂಬಂಧಪಟ್ಟ ಸಮಿತಿಗಳು ಯಾವುವು ಇವೆಯೋ ಅವನ್ನು ಉಳಿಸಿಕೊಂಡು ಪ್ಲಾನಿಂಗ್ ಸಮಿತಿಯೆಂದು ಇನ್ನೊಂದು ಸಮಿತಿಯನ್ನು ಮಾಡಬೇಕೆಂಬುದು ಕೆಲವರ ಅಭಿಪ್ರಾಯ. ಆದರೆ ಹೆಚ್ಚು ಸಮಿತಿಗಳಿದ್ದರೆ ಸಮಿತಿಗಳು ಕೆಲಸ ಮಾಡುತ್ತವೆಯೇ ವಿನಾ ಕಾರ್ಯರೂಪದಲ್ಲಿ ಕೆಲಸ ನಡೆಯುತ್ತದೆಯೇ ಎಂದು ಅಭಿಪ್ರಾಯಪಡುವವರಿಗೆ, ಈ ರೀತಿ ಹೆಚ್ಚು ಸಮಿತಿಗಳಿರಬೇಕು ಎಂಬ ವಾದದಲ್ಲಿ ಭಿನ್ನಾಭಿಪ್ರಾಯ ಬರಬಹುದು. ಬೇರೆ ಬೇರೆ ಸಮಿತಿಗಳಿರಬೇಕಾದುದು ನ್ಯಾಯವಾದರೂ ಕೇವಲ ಕಡಿಮೆ ಸಂಖ್ಯೆಯಲ್ಲಿ ಸಮಿತಿಗಳಿದ್ದು, ಸಾಧ್ಯವಾದರೆ ಒಂದೇ ಒಂದು ಸಮಿತಿಯಿದ್ದು ಆ ಸಮಿತಿ ಸಜೀವವಾದ ಒಂದು ಸಮಿತಿಯಾಗಿ ಕೆಲಸ ಮಾಡಬೇಕು. ಹಾಗೆ ಮಾಡಿ ಆಗಿಂದಾಗ್ಗೆ ವರದಿಯನ್ನು ತಯಾರಿಸಿ ಸರ್ಕಾರದ ಮುಂದಿಟ್ಟರೆ ಅವರು ಅದನ್ನು ಜಾಗ್ರತೆ ಒಪ್ಪಿಕೊಂಡು ಕೆಲಸಗಳನ್ನು ಮುಂದುವರಿಸಿದರೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ಈ ಒಂದೇ ಒಂದು ಪ್ಲಾನಿಂಗ್ ಸಮಿತಿಯನ್ನು ನಾನು ಸಲಹೆ ಮಾಡುತ್ತೇನೆ.

ಈಗ ನಮ್ಮ ಅನುಭವದಲ್ಲಿ, ಅಂದರೆ ಕಳೆದ 30–35 ವರ್ಷಗಳ ಅನುಭವದಲ್ಲಿ, ಹಿಂದಿದ್ದ ಎಕನಾಮಿಕ್ ಕಾನ್ಫರೆನ್ಸಿಗೆ ಸಂಬಂಧಪಟ್ಟ ಸಮಿತಿಗಳು ಬೇಕಾದಷ್ಟು ಕೆಲಸಮಾಡಿ ಅನೇಕ ವರದಿಗಳನ್ನು ತಯಾರುಮಾಡಿವೆ. ಆ ವರದಿಗಳಿವೆ. ಆ ಸಮಿತಿಗಳ ಸದಸ್ಯರು ಹೆಚ್ಚು ಕಡಿಮೆ ಎಲ್ಲರೂ ಪ್ರವೀಣರು, ಬಹಳ ವಿಷಯಗಳನ್ನು ತಿಳಿದವರು. ಆದರೆ ಆ ಎಲ್ಲ ವಿಚಾರಗಳನ್ನೂ ಕಾರ್ಯರಂಗಕ್ಕಿಳಿಸುವುದಕ್ಕೆ ಸಾಧ್ಯವಾಗಲಿಲ್ಲ. ಆಗುವುದೂ ಇಲ್ಲ. ಹೀಗೆ ಸಮಿತಿಗಳು ಜಾಸ್ತಿ ಇರಲಿ, ಆ ಸಮಿತಿಗಳಲ್ಲಿ ಉತ್ಪನ್ನವಾದ ವರದಿಗಳ ಮೇಲೆ ಕೆಲಸ ಮಾಡುವುದಕ್ಕೆ ಆಗಲ ಆಗದೇ ಇರಲಿ ಎನ್ನುವುದಾದರೆ ಈಗಿರತಕ್ಕ ಎಲ್ಲಾ ಸಮಿತಿಗಳನ್ನೂ ಇಟ್ಟುಕೊಂಡು ಇನ್ನೂ ಸಮಿತಿಗಳನ್ನು ರಚನೆ ಮಾಡಬಹುದೇ ವಿನಾ ಸಮಿತಿ ಕೂಲಂಕಷವಾಗಿ ಪರಿಶೀಲಿಸಿ ಮಾಡತಕ್ಕ ವರದಿ ಕಾರ್ಯರೂಪಕ್ಕೆ ಬರಲಿ ಎನ್ನುವುದಾದರೆ ಒಂದೇ ಒಂದು ಸಮಿತಿ ಸಾಕೆಂದು ನನ್ನ ಅಭಿಪ್ರಾಯ.

ಒಂದೇ ಒಂದು ಸಮಿತಿ ಇದ್ದು ಅದರಲ್ಲಿ ಕೆಲವರು ಸದಸ್ಯರು ಇದ್ದರೆ ಹೆಚ್ಚು ಜನಗಳ ಅಭಿಪ್ರಾಯ ದೊರೆಯದೇ ಹೋಗಬಹುದು ಎಂಬ ವಾದಕ್ಕೆ ನಾನಾದರೂ ಹೇಳುವುದಿಷ್ಟೆ. ಪ್ರತಿಯೊಂದು ವಿಷಯದಲ್ಲೂ ಪ್ರಾವೀಣ್ಯತೆಯನ್ನು ಪಡೆದು, ವಿಷಯಗಳನ್ನು ಚರ್ಚೆಮಾಡಿ ಒಂದು ರೂಪಕ್ಕೆ ತರತಕ್ಕ ಮಹನೀಯರುಗಳು ಬಹಳ ಕಡಿಮೆ. ಅನೇಕ ಜನರು ಅನೇಕ ವಿಚಾರಗಳಲ್ಲಿ ವಿಷಯಗಳನ್ನು ಗ್ರಹಣ ಮಾಡಿದ್ದಾರೆ. ತಿಳಿದುಕೊಂಡಿದ್ದಾರೆ. ಅಂಥವರು ನಮ್ಮ ದೇಶದಲ್ಲೂ ಇದ್ದಾರೆ. ಅಂಥವರು ಒಂದೇ ಒಂದು ಸಮಿತಿಯಲ್ಲಿದ್ದರೆ ದೇಶಾಭಿವೃದ್ಧಿ, ಕೈಗಾರಿಕಾಭಿವೃದ್ಧಿ ಇನ್ನು ಯಾವ ಅಭಿವೃದ್ಧಿಗಾದರೂ ಸಲಹೆ ಕೊಡತಕ್ಕ ಸಾಮರ್ಥ್ಯ ಅವರಿಗೆ ಇರುತ್ತದೆ. ಬೇರೆ ಬೇರೆ ಸಮಿತಿಗಳೊಳಗೆ ಇರಬೇಕೆಂದು ಹೇಳುವುದಾದರೆ ಒಂದು ಅನಾನುಕೂಲವಾಗುತ್ತದೆ. ಒಂದು ಸಮಿತಿಯವರು ಪಟ್ಟ ಅಭಿಪ್ರಾಯವನ್ನು ಬಹುಶಃ ಮತ್ತೊಂದು ಸಮಿತಿಯವರು ಪಡದೇ ಇದ್ದರೆ ಪುನಃ ಅದರಿಂದ ಪ್ರಯೋಜನವಾಗುವುದಿಲ್ಲ. ಒಂದು ವೇಳೆ ಹೆಚ್ಚು ಅನುಭವ ಪಡೆದಿರತಕ್ಕವರು ಅಗತ್ಯವಾಗಿರುವ ಪಕ್ಷದಲ್ಲಿ ಯಾವ ಒಂದು ಸ್ಟ್ಯಾಂಡಿಂಗ್ ಮಾಡುತ್ತೆವೆಯೋ ಅಂಥ ಸಮಿತಿಯವರ ಅನುಭವ ಪಡೆದುಕೊಳ್ಳುವುದಕ್ಕೆ ಕರೆಸಿ ಅವರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬಾರದೆಂದೇನೂ ಇಲ್ಲ. ಈಗ ಕೆಲಕೆಲವು ವಿಚಾರಗಳಿಗೆ ಉಪ ಸಮಿತಿಗಳಿದ್ದರೆ ಸಾಕೆಂದು ನನ್ನ ಮಿತ್ರರಾದ ಶ್ರೀಮಾನ್ ಡಬ್ಲ್ಯು. ಎಚ್. ಹನುಮಂತಪ್ಪನವರು ಸಲಹೆ ಕೊಟ್ಟರು. ಎಕನಾಮಿಕ್ ಪ್ಲಾನಿಂಗ್ ಸಮಿತಿ ಇದ್ದರೂ, ಉಪಸಮಿತಿ ಮಾಡುವುದರೊಳಗೆ ಭಿನ್ನಾಭಿಪ್ರಾಯವಿಲ್ಲ. ಉಪ ಸಮಿತಿ ಮಾಡಬಹುದು. ಹೊರಗೆ ಇರತಕ್ಕ ಅನುಭವಶಾಲಿಗಳನ್ನೂ, ಪ್ರವೀಣರನ್ನೂ ಕರೆಸಿ ಅವರ ಅನುಭವವನ್ನೂ ಪಾಂಡಿತ್ಯವನ್ನೂ ಉಪಯೋಗಪಡಿಸಿಕೊಳ್ಳಬಹುದು. ಆದರೆ ಕೆಲವು ಸದಸ್ಯರು ಸೂಚನೆ ಕೊಟ್ಟ ಹಾಗೆ ಹೆಚ್ಚು ಸಮಿತಿಗಳು ಸೇರಿ ಅಥವಾ ಹೆಚ್ಚು ಹಣ ವ್ಯಯ ಆಗಿ ಹೆಚ್ಚುಕಾಲ ಕಳೆದು ಕೆಲಸವಾಗುವುದಕ್ಕಿಂತಲೂ ಒಂದೇ ಒಂದು ಸಮಿತಿ ಇದ್ದು ಅವರು ದೀರ್ಘವಾಗಿ ಕೂಲಂಕಷವಾಗಿ ಆಲೋಚನೆ ಮಾಡಿ, ಅವರು ಮಾಡಿದ ಒಂದು ಶಿಫಾರಸು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ಬಂದು ದೇಶಾಭಿವೃದ್ಧಿಗೆ ಅನುಕೂಲವಾಗುವುದು ಸೂಕ್ತವೆಂದು ನಾನೂ ಅಭಿಪ್ರಾಯಪಡುತ್ತೇನೆ. ಆ ದೃಷ್ಟಿಯಿಂದಲೂ ನಾನು ತಿಳಿದುಕೊಂಡಿರುವುದು ಈಗ ಕೇಂದ್ರದಲ್ಲಿ ಅವರು ಪ್ಲಾನಿಂಗ್ ಸಮಿತಿ ಏನು ಮಾಡಿದ್ದಾರೋ ಅದಕ್ಕೂ ಸಹ ಉಪಸಮಿತಿ ಮಾಡಿ ವರದಿಗಳನ್ನು ಕಳುಹಿಸಿ ಕೊಡಿ ಎಂದು ಏನೂ ಏರ್ಪಾಡು ಮಾಡಿಲ್ಲ. ಈಗಿನ ಕಾಲಕ್ಕೆ ತಕ್ಕಂತೆ ಒಂದೇ ಸಮಿತಿ ಸಾಕು. ನಮ್ಮ ಒಂದು ದೇಶದ ಆರ್ಥಿಕಾಭಿವೃದ್ಧಿಯನ್ನು ಸಾಧನೆ ಮಾಡಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಅವರ ಅಭಿಪ್ರಾಯವನ್ನು ನಾವೂ ಅನುಮೋದಿಸಬೇಕು. ಈ ನಿರ್ಣಯ ಯಾವ ರೀತಿಯಲ್ಲಿದೆಯೋ ಅದನ್ನು ಸರ್ಕಾರದವರು ಒಪ್ಪಿಕೊಂಡು ಆದಷ್ಟು ಜಾಗ್ರತೆ ಜಾರಿಗೆ ತರುತ್ತೀರೆಂದು ನಾನು ಪೂರ್ಣ ಭರವಸೆಯುಳ್ಳವನಾಗಿದ್ದೇನೆ.

Sri K. CHENGALARAYA REDDY.—Mr. Speaker, Sir, the resolution which has been moved by the Hon'ble Member recommends that "a standing committee for planning consisting of not more than 15 members should be constituted by the Government of Mysore to plan and recommend to them the various development projects

helpful to the economic prosperity of the State, in place of the several committees functioning under the present Economic Conference." In other words, this resolution is tantamount to making a recommendation that the present Economic Conference as it is constituted may be scrapped.

The Economic Conference has had a historic past. This Conference came into existence in the year 1911 owing to the initiative of Sir M. Visvesvaraya. From 1911 it functioned till about the year 1931—for more or less an unbroken period of twenty years. The Economic Conference and its constituent committees—I think there were three of them to begin with—did a good deal of spade work in regard to the economic re-organisation of our country. In the year 1931 the Economic Conference went out of existence and it was not till the year 1943 that it was revived by Sri N. Madhava Rau. The three Policy Committees were expanded to seven Policy Committees and the work was taken up again. This re-organisation was in pursuance of a resolution or decision arrived at by the Government of India dividing the various subjects to about 18 or 19 categories to which attention had to be given by these various committees. Since 1943 up to 1946 these committees were functioning more or less vigorously. There was also the Finance and Co-ordination Committee, a special committee that was in existence in order to coordinate the various recommendations made by the various Policy Committees. I had the opportunity of serving in that Committee and I know the valuable work that Committee did. That Committee went into various recommendations made by the various Policy Committees and recommended to the Government to take up nearly 200 of the post-war schemes during the next five years. It also pointed out the ways and means position. It thoroughly considered the financial position of the Government. The report of that Committee presided over by the late Sir Albion Rajkumar Banerji was a thorough one. After that Committee's report was submitted to the Government the then Ministry and subsequently the Ministry that followed have been trying to implement those recommendations to the maximum extent possible. Various post-war schemes recommended by the Committee have been sanctioned and they are at various stages of progress. My Hon'ble friend Sri Siddappa has given notice of an interpellation to which he is anxiously looking forward for a reply. The other day he was making a complaint that a question notice of which had been given in the previous Representative Assembly has been repeated and no answer has been forthcoming till now. I may inform him that so far as the Government are concerned, answer has been forwarded and I hope the answer will be in his hands before the session adjourns. I am making this long preface to show that the Economic Conference as it has been constituted in our State has served a definite purpose and has planned to a great extent. Now we are in the stage of implementing those various recommendations made by the Economic Conference. Since 1946 or 1947 there was not much necessity felt to do this planning business on a very active basis because we had enough planning as one Hon'ble Member pointed out. We were more particular to implement the recommendations made by the Economic Conference. So I wanted to make use of this occasion to say a complimentary word regarding the activities of the Economic Conference in our State till now. But the time has come when the Conference has got to be reorganized. I am inclined to agree with the suggestion involved in this resolution, *viz.*, that the Economic Conference on the present basis may be scrapped altogether. This matter has been engaging the attention of the Government for the last two or three months.

[*At this stage there was a pause as there was a lot of noise outside the Assembly Hall.*]

I was saying that the question of the reorganization of this Economic Conference has been engaging the

attention of the Government for the last two or three months in an active manner. The Government of India constituted an Advisory Planning Board in the year 1946 and they made certain definite recommendations. One of the main recommendations that they made was to the effect that a Central Planning Commission be constituted with a strength of not more than five persons and a Consultative Committee comprising about 25 or 30 persons also must be constituted, the Consultative Committee to include the members of the Planning Commission also. They made a similar recommendation regarding the States and Provinces as well. They recommended that Planning Committees should be constituted in the States also. As the House is aware, the Government of India have already taken action in regard to this matter. They have constituted a Central Planning Commission comprising of only five members and I expect that they will be constituting the Consultative Committee in the very near future. So in accordance with the recommendations made by that Advisory Planning Board in 1946, the States have to follow suit now to constitute their respective Planning Committees and it is obvious enough that these various Planning Committees to be constituted in the States should work in close harmony and should be integrated with the Central Planning Commission as well. This Government has received a communication from the Government of India in regard to this matter. They have made certain specific proposals and they have also called for information from us as to what we intend to do in regard to this vital aspect, and it is in that connection also that I said that we are giving our active consideration to this very important subject. The House is also aware that the Congress Organization has also set up an Economic Planning Sub-Committee. They are also active at the task of evolving a suitable plan for the economic development of the country. It is called, I believe, the Sarvodaya Planning Committee and the President of the Indian National Congress has convened a conference of the Chief Ministers of all the States at Delhi on the 25th and 26th of this month in order to go into this question. So on one side an organisation like the Congress has taken up the question in right earnest and is trying to evolve a plan for the country. On the other hand, the Government of India officially have taken up this question and they have also constituted a Central Planning Commission. I presume that there will be co-ordination between these two bodies—one a non-official committee and the other an official committee—and with regard to both of these, the Mysore Government has been called upon to evolve suitable plans in the State with a view to work in harmony with the Central Planning Commission and the other agency to which I have referred. In these circumstances, Sir, I am not in a position to definitely say anything with regard to this matter except that the whole matter is under consideration and a very early decision, possibly within the next fortnight or thereabouts, will be arrived at by Government.

This resolution which has now been moved, says that a committee be constituted with a strength of about 15 members. I should think that for Mysore State the Planning Commission should not consist of more than 5 or 7 members at the most. The Central Planning Commission also consisst of that number and there is a definite recommendation to us that the strength of the Planning Commission here need not be above 5 or 7. An Advisory Consultative Committee may be constituted which may comprise of the number that is asked in this resolution. One thing that we have got to bear in mind, whatever the agency we might make, is this. So far as long-range planning is concerned, there has been enough of it. As I have already indicated, several schemes have already been recommended to the Government and the Government have taken up the implementation of those schemes. The

progress has been strictly proportionate to the finance, the man power and the machinery available to us from time to time. We have now to concentrate on a short-range programme. We have to take up such schemes that will give immediate result. Take for example food. We have been saying that we have got to improve the standard of living of the common man and food, cloth and shelter are the three important ones with regard to which we have got to take immediate steps. We have to give the highest priority to these things and so the Government of India have now invited the specific attention of the Provincial Governments also to concentrate on short-range programmes in preference to long-range programmes so that the Central Planning Commission constituted by the Government of India and the Planning Committees that are going to be constituted in the respective States will have to concentrate on the short-range programmes rather than on the long-range programmes.

In view of the fact that the Government intend to reorganize the whole structure of the Economic Conference and in view of the fact that the necessity for a Planning Commission is felt, I think the mover will agree to leave the details to the Government in regard to this very important matter. Decisions have to be taken to some extent in consultation with the Government of India and in a way which will be harmonious with what the Government of India have done in regard to this important aspect. I assure the Hon'ble House that very early steps will be taken in this behalf and I hope with this assurance the Hon'ble Mover will be pleased to withdraw the resolution.

Sri T. MADIAH GOWDA.—With the permission of the House, I withdraw the Resolution.

(*The resolution was, by leave of the Assembly, withdrawn.*)

Resolutions No. 11 and 12 were not taken up as the movers were absent when called.

RESOLUTION No. 13.

Enhancing the rate of Depressed Class Scholarships

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಅಧ್ಯಕ್ಷರೇ, ನನ್ನ ನಿರ್ಣಯ ಈ ರೀತಿ ಇದೆ.

"This Assembly is of the opinion that steps should be taken by the Government of Mysore to increase the rate of the Depressed Class scholarships awarded to students studying in the University institutions from Rs. 15 to Rs. 30 per mensem for the Degree Classes and from Rs. 10 to Rs. 20 per mensem for Intermediate and other classes in the University institutions"

ಸ್ವಾಮಿ, ನಿಮ್ನ ತರಗತಿಯವರ ವಿದ್ಯಾಭ್ಯಾಸದ ವಿಚಾರದಲ್ಲಿ ಒಂದೇ ವಿಧವಾಗಿ ಬೇಡಿಕೆಗಳು ಆಗಿಂದಾಗ್ಗೆ ಬರುವುದಕ್ಕೆ ಅವಕಾಶ ಕೊಟ್ಟಿರುವುದಕ್ಕೆ ನಾನು ವ್ಯಸನವನ್ನು ವ್ಯಕ್ತಪಡಿಸಬೇಕಾಗಿದೆ. ಪ್ರಾಯಶಃ ಈ ವಿಧವಾದ ಬೇಡಿಕೆಗಳು ಕಳೆದ ಹತ್ತು ವರುಷಗಳಿಂದಲೂ ಸಹ ಆಗಾಗ್ಗೆ ಬರುತ್ತಿವೆಯೆಂದು ಹೇಳಬಹುದು. ನನಗಾದರೂ ಅನ್ನಿಸುತ್ತದೆ, ಇಂಥ ಮಾನ್ಯ ಸಭೆಯು ಮುಂದಿಟ್ಟು ಮಾನ್ಯ ಸದಸ್ಯರುಗಳ ಬೆಂಬಲದಿಂದ ಒತ್ತಾಯಪಡಿಸಿದಾಗ ಏನಾದರೂ ಇಂಥಾ ವಿಚಾರಗಳನ್ನು ಪರಿಶೀಲನೆ ಮಾಡುತ್ತಾರೆಯೇ ಎಂದು. ನಾನು ಕೇಳುವುದೇನೆಂದರೆ, ಯಾವುದಾದರೂ ದೇಶದ ಆಡಳಿತಕ್ಕೆ ಸಂಬಂಧಪಟ್ಟ ಒಂದು ವಿಚಾರ ಇಂಥಾ ಮಾನ್ಯ ಸಭೆಯ ಮುಂದೆ ಬಂದು ಮಾನ್ಯ ಸದಸ್ಯರುಗಳು ಖೋತಾ ಸೂಚನೆಯ ಮೂಲಕವೇ ಆಗಲೀ ಅಥವಾ ನಿರ್ಣಯದ ಮೂಲಕವೇ ಆಗಲಿ ಏನಾದರೂ ಅಭಿಪ್ರಾಯಗಳನ್ನು ಹೇಳಿದರೆ ಆ ವಿಷಯ ಏನಾಗಿದೆ, ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಸದಸ್ಯರ ಒಟ್ಟು ಅಭಿಪ್ರಾಯಕ್ಕನುಸಾರವಾಗಿ ಅದಷ್ಟು ಮಟ್ಟಿಗೇ ಸರಿಪಡಿಸಿ ಮತ್ತೆ ಆ ವಿಷಯ ಇಂಥಾ ಸಭೆಗಳಲ್ಲಿ ಬರದಂತೆ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ನಿಮ್ನ ತರಗತಿಯವರಿಗೆ ಹಾಸ್ಟಲ್ ಸೌಕರ್ಯಗಳೂ, ವೇತನ ಸೌಲಭ್ಯಗಳೂ ಸಾಲದೆಂದು ಪ್ರತಿಸಾರಿಯೂ ಒಂದಲ್ಲ ಒಂದು ವಿಧವಾದ ಪಲ್ಲವಿಯನ್ನು ನಾವು ಹಾಡುತ್ತಿದ್ದೇವೆ. ನೀವು ಇದುವರೆಗೂ ಏನೇನು ಕೊಟ್ಟಿದ್ದೀರೋ ಅಥವಾ ಕೊಡುತ್ತಿದ್ದೀರೋ ಅದಕ್ಕೆಲ್ಲಾ ನಿಮ್ನ ತರಗತಿಯವರು ಕೃತಜ್ಞರಾಗಿದ್ದಾರೆ. ನಾವು ಕೇಳುವುದು ನಮ್ಮ ಆ ಜನ್ಮಸಿದ್ಧವಾದ ಹಕ್ಕು, ಭಿಕ್ಷೆಯಲ್ಲವೆಂಬುದನ್ನು ನಾವು ತಿಳಿದುಕೊಂಡಿದ್ದರೂ ನಮ್ಮ ಬೇಡಿಕೆಗಳನ್ನು ಇಷ್ಟು ಮಟ್ಟಿಗಾದರೂ ಕೊಡುತ್ತಿರುವುದಕ್ಕೆ ನಮ್ಮ ಕೃತಜ್ಞತೆಯನ್ನು ತೋರಿಸಬೇಕಾಗಿದೆ. ಆ ವಿಷಯದಲ್ಲಿ ನಾವು ಕೃತಘ್ನರಲ್ಲ.

Sri M. GOVINDA REDDY (Chitaldurg District—General).—Is it your fundamental right?

Sri M. MADIAH.—In a way, we are the back-bone of the country. I claim as if it is my fundamental right. I represent the common man in the State and in particular the Depressed Classes when I make this statement. I have already ventilated what I have to say with regard to this on some other occasion.

ಆದ್ದರಿಂದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಈ ಸ್ಕಾಲರ್‌ಷಿಪ್‌ಗಳು ಸಾಲದು. ನೀವು ಸರ್ಕಾರದ ಇತರ ಬಾಬುಗಳಿಗೆ ಎಷ್ಟೋ ಸಾವಿರ ರೂಪಾಯಿಗಳನ್ನು, ಎಷ್ಟೋ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಅಂಥಾದ್ದರಲ್ಲಿ ಈ ಸ್ಕಾಲರ್‌ಷಿಪ್‌ಗಾಗಿ ಕೆಲವು ಸಾವಿರ ರೂಪಾಯಿಗಳನ್ನು ಹೆಚ್ಚಿಸಿ ಬರುತ್ತಿರುವ ಸಾಡೇತೀನ್ ಕೆಲವು ಮಂದಿ ಹುಡುಗರಿಗೆ ಸ್ವಲ್ಪ ಸ್ಕಾಲರ್‌ಷಿಪ್ಪುಗಳನ್ನು ಹೆಚ್ಚಿಸಿ ಅನುಕೂಲ ಮಾಡಿ ಕೊಡಿ ಎಂದು ಹೇಳಿದರೆ ಇದುವರೆಗೂ ಏನೂ ಮಾಡದಿರುವುದು ಬಹಳ ವಿಷಾದಕರ. ಕಳೆದ ನ್ಯಾಯವಿಧಾಯಕ ಸಭೆಯ ಬಡ್ಜೆಟ್ ಅಧಿವೇಶನದಲ್ಲಿ ಇದೇ ರೀತಿ ನಿಮ್ಮ ತರಗತಿಯ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೌಕರ್ಯಗಳನ್ನೂ ಸ್ಕಾಲರ್‌ಷಿಪ್ಪುಗಳನ್ನೂ ಕೊಡಬೇಕೆಂಬ ಪ್ರಶ್ನೆ ಬಂದಾಗ ಆಗಿದ್ದ ಮಾನ್ಯ ಮಂತ್ರಿಗಳು ಈ ವಿಷಯವನ್ನು ಪರಿಶೀಲಿಸಿ ಹೆಚ್ಚಿಸುತ್ತೇವೆಂದು ಹೇಳಿ ಒಂದು ನಂಬಬಹುದಾದ ಉತ್ತರವನ್ನು ಕೊಟ್ಟರು. ಅದರೆ, ಇತ್ತೀಚೆಗೆ ಅದನ್ನು ಯಾವ ರೀತಿ ಪರಿಶೀಲನೆ ಮಾಡಿದಿರೋ, ಎಲ್ಲಿ ಆ ವಿಷಯ ಕೈಬಿಟ್ಟು ಹೋಯಿತೋ ಗೊತ್ತಿಲ್ಲ. ನ್ಯಾಯವಾದ ಈ ಬೇಡಿಕೆಯೇನಿದೆಯೋ ಅದನ್ನು ಯಾವ ಸರ್ಕಾರವೇ ಆದರೂ ಮುಂದೆ ಒಂದು ಮಾಡುವುದು ಅವರ ಧರ್ಮ. ನಾವು ಕೇಳಿರುವುದು, ಇಂಟರ್‌ಮೀಡಿಯೆಟ್ ಕ್ಲಾಸಿನಲ್ಲೂ, ಡಿಗ್ರೀ ಕ್ಲಾಸಿನಲ್ಲೂ ಇರತಕ್ಕ ನಿಮ್ಮ ತರಗತಿಯವರ ಮಕ್ಕಳಿಗೆ ಅವರ ಊಟ ವಸತಿ ಬಟ್ಟೆ ಬರೆಗಳಿಗೆ ಸಾಕಾದಷ್ಟುಮಟ್ಟಿಗಾದರೂ ವೇತನವನ್ನು ಹೆಚ್ಚಿಸಿಕೊಡಿ ಎಂದು. ಇದರಲ್ಲಿ ನ್ಯಾಯವಿದ್ದರೆ ಒಪ್ಪಿ, ಇಲ್ಲದಿದ್ದರೆ ದುರಾಶೆಯೆಂದು ಹೇಳಿ. ಹಳ್ಳಿಗಳಿಂದ ತಾಲ್ಲೂಕುಗಳಿಗೆ ಬಂದು ಹೈಸ್ಕೂಲು ವ್ಯಾಸಂಗ ಮಾಡಬಹುದು. ಆದರೆ ಬೆಂಗಳೂರು ಮೈಸೂರು ಸಿಟಿಗಳಿಗೆ ಬಂದು ಕಾಲೇಜು ವ್ಯಾಸಂಗ ಮಾಡುವುದು ಎಷ್ಟು ಕಷ್ಟವೆಂಬುದು ತಮಗೇ ಗೊತ್ತಿದೆ. ಇತರ ಜನಾಂಗಗಳವರು ಮಾಡುತ್ತಿಲ್ಲವೇ ಎಂದು ತಾವು ಕೇಳಬಹುದು. ಆದರೆ ಅವರ ವಿಷಯವೇ ಬೇರೆ. ಅವರಿಗೆ ಬೇರೆ ಹೋಟಲುಗಳ ಮತ್ತು ಇತರ ವಸತಿ ಸೌಕರ್ಯಗಳ ಅನುಕೂಲ ಸಿಕ್ಕುತ್ತದೆ. ಇವರುಗಳಿಗಾದರೋ ಹಾಸ್ಟಲುಗಳ ಅನುಕೂಲ ಸಿಕ್ಕಿದರೆ ಬರಬೇಕೇ ಹೊರತು ಇಲ್ಲದಿದ್ದರೆ ಇಲ್ಲ. ಅವರಿಗೆ ಬಟ್ಟೆಗಿಲ್ಲ, ಊಟಕ್ಕಿಲ್ಲ. ಯಾವುದಕ್ಕೂ ಗತಿಯಿಲ್ಲದವರು! ಹೀಗಿರುವಾಗ ತಾವೊಂದು ಉದಾರ ನೀತಿಯನ್ನನುಸರಿಸಿ ಬರತಕ್ಕ ಮಕ್ಕಳಿಗೆ ಸಾಕಾದಷ್ಟು ಸ್ಕಾಲರ್‌ಷಿಪ್ಪುಗಳನ್ನು ಕೊಡದೆ ಹೋದರೆ ಬಹಳ ವ್ಯಥೆಯಾಗುತ್ತದೆ. ಈಗಿನ ಹೊಸ ರಾಜ್ಯಾಂಗ ಶಾಸನದಂತೆ ಭಾರತದ ಅಧ್ಯಕ್ಷರು, ನಮಗಾಗಿ ಒಬ್ಬ ಸ್ಪೆಷಲ್ ಆಫೀಸರನ್ನು ನೇಮಕಮಾಡುತ್ತಾರೆಂದೂ, ಅವರು ಪ್ರತಿಯೊಂದು ದೇಶಕ್ಕೂ ಬಂದು ನಮಗೆ ಏನೇನು ಕಷ್ಟಗಳಿವೆಯೆಂದು ವಿಚಾರ ಮಾಡುತ್ತಾರೆಂದೂ ಹೇಳಿದ್ದಾರೆ. ಅವರು ಯಾವಾಗ ಬರುತ್ತಾರೋ ಏನೋ, ಅಥವಾ ಅದಕ್ಕೆ ನಾವು ಏನು ಹೇಳಬೇಕು ಏನು ಎಂಬುದನ್ನು ಸರ್ಕಾರದವರು ಹೇಳಬೇಕು. ಆದ್ದರಿಂದ ನಾನು ಹೇಳುವುದೇನೆಂದರೆ, ತಾವು ಮುಖ್ಯವಾಗಿ ನಮ್ಮ ಬೇಡಿಕೆಗಳನ್ನು ಕೇಳಬೇಕು ಎಂದು. ಈಗ ಇಂಟರ್‌ಮೀಡಿಯೆಟ್ ಕಾಲೇಜಿನ ಹುಡುಗರಿಗೆ ತಿಂಗಳಿಗೆ 10 ರೂಪಾಯಿಗಳಂತೆ 100 ರೂಪಾಯಿಗಳನ್ನು ಕೊಡುತ್ತಿದ್ದೀರಿ. ಕಾಲೇಜಿನ ಡಿಗ್ರಿ ಕ್ಲಾಸುಗಳ ವಿದ್ಯಾರ್ಥಿಗಳಿಗೆ ತಿಂಗಳಿಗೆ 15 ರೂಪಾಯಿನಂತೆ 150 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇಷ್ಟನ್ನು ತೆಗೆದುಕೊಂಡು ಯಾವ ರೀತಿ ವ್ಯಾಸಂಗ ಮಾಡಬಹುದೆಂಬುದನ್ನು ನೀವೇ ಯೋಚನೆ ಮಾಡಿ! ಹೋದ ಅಧಿವೇಶನದಲ್ಲಿ ನಿಮ್ಮ ತರಗತಿಯವರ ವಿದ್ಯಾಭಿವೃದ್ಧಿ ಹೇಗಿದೆಯೆಂಬ ವಿಷಯದಲ್ಲಿ ಒಂದು ಪ್ರಶ್ನೆ ಹಾಕಿ ಉತ್ತರ ತರಿಸಿದ್ದೇನೆ. ಅದರಲ್ಲಿರುವ ಒಂದಂಶವನ್ನು ಮಾನ್ಯ ವಿದ್ಯಾ ಮಂತ್ರಿಗಳು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕಳೆದ ಹತ್ತು ವರುಷಗಳಿಂದ ನಿಮ್ಮ ತರಗತಿಯವರಲ್ಲಿ ವಿದ್ಯಾಭಿವೃದ್ಧಿಯೂ ಇತರೆಯವರಲ್ಲಿ ವಿದ್ಯಾಭಿವೃದ್ಧಿಯೂ ಯಾವ ರೀತಿ ಆಗುತ್ತಿದೆಯೆಂದು ಕೇಳಿರುವುದಕ್ಕೆ ಉತ್ತರವಾಗಿ ಸರ್ಕಾರದವರು ಒದಗಿಸಿರುವ ಒಂದು ಸ್ಟೇಟ್‌ಮೆಂಟಿನಲ್ಲಿ ಕೊಟ್ಟಿರುವುದನ್ನು ನೋಡಿದರೆ ಇತರ ಪಂಗಡದವರಲ್ಲಿ ವಿದ್ಯಾಭಿವೃದ್ಧಿ ಒಂದೇ ರೀತಿಯಾಗಿ ಮೇಲಕ್ಕೇರುತ್ತಿದ್ದರೆ ನಿಮ್ಮ ತರಗತಿಯವರದು ಇತರರಿಗೆ ಹೋಲಿಸಿದರೆ ಅದೇ ರೀತಿ ಏರುತ್ತಿಲ್ಲ. ಬಹಳ ಕೆಳಮಟ್ಟದಲ್ಲಿದೆ.

Sri H. SIDDAVEERAPPA (Chitaldrug District–General).–Is that word "ಸಾಡೇತೀನ್" parliamentary, Sir?

Sri M. MADIAH.—As compared with the students of other classes.

Sri T. SIDDALINGIAH (Minister for Education).—Not correct

Sri M. MADIAH.—Percentage of literacy among the Depressed Classes as compared with the other classes is not steadily rising up.

Sri L. SIDDAPPA.—My friend says that it is not going up in proportion with the percentage rise in respect of other classes.

Sri M. MADIAH.—I have made it very clear, Sir. As compared with the percentage of the other classes, I said.

ಏಕೆಂದರೆ ಇತರೇ ಕೋಮಿನವರಲ್ಲಿ 6%, 7%, 8% ಎಂದು ವರ್ಷ ವರ್ಷವೂ ಹೆಚ್ಚುತ್ತಿದ್ದರೆ, ನಿಮ್ಮ ತರಗತಿಯವರಲ್ಲಿ 1%, 2%. 3% ಈ ರೀತಿಯಾಗಿಯೇ ಇದೆ. ಅಂದರೆ ಒಂದು ವರ್ಷ ಇತರೇ ಪಂಗಡದವರು 5 0 ಜನರಿದ್ದರೆ ಮೂರನೆಯ ವರ್ಷ ಅವರ ಸಂಖ್ಯೆ 1000ಕ್ಕೆ ಏರಿರುವುದು ಕಾಣಬರುತ್ತಿದೆ. ನಿಮ್ಮ ತರಗತಿಯವರಲ್ಲಿ ಹಾಗಿಲ್ಲ. ಇತರರಲ್ಲಿ ವಿದ್ಯಾಭ್ಯಾಸದ ಪ್ರಗತಿ ಕಾರಿನ ಓಟದಲ್ಲಿದ್ದರೆ ನಿಮ್ಮ ತರಗತಿಯವರಲ್ಲಿ ಕಪ್ಪೆಯಂತೆ ತೆವಳುತ್ತಿದೆ!

ರಾಜಮಂತ್ರಪ್ರವೀಣ ಎಚ್. ಬಿ ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಅಷ್ಟೇ ಹೊರತು, ಇಳಿಯುತ್ತಿಲ್ಲ!

ಶ್ರೀ ಎಂ. ಮಾದಯ್ಯನವರು.—ಈ ಮಟ್ಟವನ್ನು ಸರಿದೂಗಿಸುವುದು ಎಲ್ಲರ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಹರಿಜನರಲ್ಲೇ ಅಲ್ಲದೆ ಇತರ ಪಂಗಡದವರಲ್ಲೂ ಬಡವರಿದ್ದಾರೆಂದರೆ ತಪ್ಪಾಗಲಾರದು. ನಿಮ್ಮ ವರ್ಗದವರಲ್ಲಿ ಬಡವರ ಸ್ಥಿತಿ ಹೇಗಿದೆ ಎಂಬುದಕ್ಕೆ ಮೊನ್ನೆ ತಾನೆ ಮಾನ್ಯ ಡಾ॥ ಸಿ. ಆರ್. ರೆಡ್ಡಿಯವರು ಒಂದು ವರದಿಯನ್ನೊಪ್ಪಿಸಿದ್ದಾರೆ. ಆದರೆ ಅದರಲ್ಲಿ ಏನು ಪರಿಹಾರ ಕಂಡುಹಿಡಿಯಬೇಕೆಂದು ಹೇಳಿದ್ದಾರೋ ಗೊತ್ತಿಲ್ಲ.

ಅಧ್ಯಕ್ಷರು.—ತಾವು ಸಾಮಾನ್ಯವಾಗಿ ವಿದ್ಯಾಭಿವೃದ್ಧಿಯ ವಿಚಾರವನ್ನು ಹೇಳುತ್ತಿದ್ದೀರಿ.

ಶ್ರೀ ಎಂ. ಮಾದಯ್ಯನವರು.—ಹರಿಜನರು ಅಥವಾ ಇತರ ಹಿಂದುಳಿದವರು ಮುಂದೆ ಬರಬೇಕಾದರೆ ವಿದ್ಯಾರ್ಥಿ ವೇತನ ಯಾವ ರೀತಿ ಕೊಡಬೇಕೆಂಬುದನ್ನು ಸರ್ಕಾರದವರು ಪರಿಶೀಲಿಸಬೇಕು. ಮುಂದಾದರೂ ಡಾ॥ ರೆಡ್ಡಿಯವರು ಇದನ್ನು ಸರಿಪಡಿಸುತ್ತಾರೆಂದು ನಂಬಿದ್ದೇನೆ. ಈಗಿನ ಪರಿಸ್ಥಿತಿಯನ್ನು ಪರಿಶೀಲಿಸಿ ಮಕ್ಕಳು ವಿದ್ಯೆಗಾಗಿ ಮುಂದೆ ಬಂದರೆ ಸಾಕಾದಷ್ಟು ಪ್ರೋತ್ಸಾಹ ಪಡಿಸಿ ಅವರ ವಿದ್ಯಾಭ್ಯಾಸವು ಉನ್ನತ ಮಟ್ಟಕ್ಕೇರುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಏಕೆಂದರೆ ಅನೇಕರು ಸಾಧಾರಣವಾಗಿ ಹೈಸ್ಕೂಲು ವ್ಯಾಸಾಂಗ ಮುಗಿಸಿ ಸರ್ಕಾರದವರು ಕೊಡುವ 10 ರೂಪಾಯಿಗಳ ಜೊತೆಗೆ ಮೇಲೆ 20 ರೂಪಾಯಿಗಳನ್ನು ಹಾಕಿಕೊಂಡು ವಿದ್ಯಾಭ್ಯಾಸ ಮಾಡುವುದಕ್ಕೆ ಶಕ್ತಿ ಸಾಲದೆ ಗುಮಾಸ್ತೆಯಾಗಿ ಹೋಗುತ್ತಾರೆ, ಇಲ್ಲದಿದ್ದರೆ ಅಟೆಂಡರ್ ಆಗುತ್ತಾರೆ. ಹಾಗೆ ಮಾಡದೇ ಹೋದರೆ ಅವರಿಗೆ ಜೀವನಕ್ಕೇ ಅವಕಾಶವಿಲ್ಲ. ಇದನ್ನು ಉತ್ತಮ ಪಡಿಸಬೇಕಾದರೆ ಸರ್ಕಾರದವರು ಸಾಕಷ್ಟು ಪರಿಹಾರ ಕೊಡಬೇಕು. ಹಾಗೆ ಮಾಡಬೇಕಾದರೆ 'ವಿದ್ಯಾರ್ಥಿ ವೇತನವನ್ನು ಹೆಚ್ಚಿಸಬೇಕು. ಇಲ್ಲದಿದ್ದರೆ ಉಚಿತ ವಿದ್ಯಾರ್ಥಿನಿಲಯಗಳನ್ನಾದರೂ ಏರ್ಪಡಿಸಬೇಕು. ವಿದ್ಯಾರ್ಥಿವೇತನವಿಲ್ಲದಿದ್ದರೂ ಪರವಾಗಿಲ್ಲ. ಊಟ ಹಾಕಿ, ಬಟ್ಟೆ ಪುಸ್ತಕಗಳನ್ನು ಕೊಟ್ಟರೆ ಸಾಕಾಗಿದೆ. ಇದಕ್ಕಿಂತ ಹೆಚ್ಚಾಗಿ ಬೇಕಾಗಿಲ್ಲ. ಹಾಗೆ ಮಾಡುವುದಾದರೆ ಅವರ ವಿದ್ಯಾಭ್ಯಾಸವು ಬಹಳವಾಗಿ ಮುಂದುವರಿಯುತ್ತದೆ. ಭಾರತ ರಾಜ್ಯಾಂಗದಲ್ಲಿ ನಮೂದಿಸಿರುವ ಪ್ರಕಾರ ಹೆಚ್ಚು ನಿಗಾ ಕೊಟ್ಟು ತಕ್ಕ ಸೌಲಭ್ಯಗಳನ್ನು ಒದಗಿಸಿ ಉತ್ತೇಜನವೀಯಬೇಕೆಂದು ಒತ್ತಾಯ ಪಡಿಸಿ ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Resolution moved:

"That this Assembly is of the opinion that steps should be taken by the Government of Mysore to increase the rate of the Depressed Class scholarships awarded to students studying in the University institutions from Rs. 15 to Rs. 30 per mensem for the Degree Classes and from Rs. 10 to Rs. 20 per mensem for Intermediate and other classes in the University Institutions.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಶ್ರೀ ಮಾದಯ್ಯನವರು ತಂದಿರುವ ನಿರ್ಣಯವನ್ನು ಸಮರ್ಥನೆ ಮಾಡುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಸರ್ಕಾರದವರು ಇಂಟರ್‌ಮೀಡಿಯೆಟ್ ವಿದ್ಯಾರ್ಥಿಗಳಿಗೆ ವರ್ಷಕ್ಕೆ 120 ರೂಪಾಯಿಗಳನ್ನೂ, ಗ್ರ್ಯಾಜುಯೇಟು ವಿದ್ಯಾರ್ಥಿಗಳಿಗೆ 150 ರೂಪಾಯಿಗಳನ್ನೂ ಗೊತ್ತುಮಾಡಿರುವುದು ಸುಮಾರು 20 ವರ್ಷಗಳ ಹಿಂದೆ. ಈಚೆಗೆ ಪ್ರತಿಯೊಂದು ಇಲಾಖೆಗೂ ಕೂಡ ಹಣವನ್ನು ಹೆಚ್ಚಿಸುತ್ತಿದ್ದಾರೆ ಮತ್ತು ತುಟ್ಟಿ ಭತ್ಯವನ್ನೂ ಕೊಡುತ್ತಿದ್ದಾರೆ. ಆದರೆ ಈ ಹಿಂದುಳಿದ ವಿದ್ಯಾರ್ಥಿಗಳಿಗೆ ಎಷ್ಟು ತೊಂದರೆಯಿದೆ, ಅವರ ಆರ್ಥಿಕಸ್ಥಿತಿ ಎಷ್ಟು ಹೀನಸ್ಥಿತಿಯಲ್ಲಿದೆ ಎಂಬುದನ್ನು ಸರ್ಕಾರದವರು ಗಮನಿಸಿದ್ದಾರೆಯೇ ಎಂದು ಕೇಳಬೇಕಾಗಿದೆ. ಸುಮಾರು ಈ ವರ್ಷದಲ್ಲಿ 50 ಸಾವಿರ ರೂಪಾಯಿಗಳ ವಿದ್ಯಾರ್ಥಿ ವೇತನ ಕೊಟ್ಟಿದ್ದೀರಿ. ಇತರ ಜಾತಿಯವರಿಗೆ 1½ ಲಕ್ಷ ರೂಪಾಯಿಗಳು ವಿದ್ಯಾರ್ಥಿ ವೇತನವನ್ನು ನಿಗದಿ ಮಾಡಿದ್ದೀರಿ. ಸರ್ಕಾರದಲ್ಲಿ ಇನ್ನೊಂದು ಪ್ರಾರ್ಥನೆ ಮಾಡುತ್ತೇನೆ. ಕಾಲೇಜು ವಿದ್ಯಾಭ್ಯಾಸಕ್ಕಾಗಿ ಸುಮಾರು ಅರ್ಧಕೋಟಿ ರೂಪಾಯಿಗಳಿಗಿಂತ ಹೆಚ್ಚಾಗಿ ಖರ್ಚು ಮಾಡುತ್ತಿದ್ದೀರಿ. ಆದರೆ ನಿಮ್ಮ ವರ್ಗದವರ ಕಡೆಗೆ, ದೇಶದಲ್ಲಿ ಸುಮಾರು ⅓ ಭಾಗವಿರುವ ಜನಾಂಗದ ಕಡೆಗೆ ತಮ್ಮ ಗಮನವನ್ನು ಸೆಳೆಯಲಿಚ್ಛಿಸುತ್ತೇನೆ. ಇಷ್ಟು ಹೆಚ್ಚಿನ ಜನಸಂಖ್ಯೆಗಾಗಿ ಸುಮಾರು 50 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದು ಬಹು ಕಡಮೆಯೆಂದು ಹೇಳಬೇಕಾಗಿದೆ. ಏಕೆಂದರೆ ದೇಶದಲ್ಲಿರುವ ಪ್ರತಿಯೊಬ್ಬ ಹರಿಜನ ಪಂಗಡದವರಿಗೂ ವಿದ್ಯಾಭ್ಯಾಸ ಕೊಡಬೇಕು, ಪ್ರತಿಯೊಬ್ಬರಿಗೂ ಜ್ಞಾನದ ಮಟ್ಟ ಹೆಚ್ಚಬೇಕು ಎಂದು ಸರ್ಕಾರದ ಅಭಿಮತವಿರುವಾಗ ಈಗ ಖರ್ಚು ಮಾಡುವುದು ಸಾಲದು. ಈಗಿನ ಉತ್ತೇಜನದಿಂದ ದೇಶದಲ್ಲಿರುವ ಬಹು ಜನರು ವಿದ್ಯಾವಂತರಾಗಲು ಅನುಕೂಲವಿಲ್ಲದೆ ಬಹು ಜನ ವಿದ್ಯಾವಂತರು ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾದ ಪ್ರಸಂಗ ಬರುತ್ತದೆ. ಏಕೆಂದರೆ ಚಿಕ್ಕವಯಸ್ಸಿನಲ್ಲಿ ಪ್ರೈಮರಿಸ್ಕೂಲು, ಮಿಡ್ಲ್‌ಸ್ಕೂಲು ಮತ್ತು ಹೈಸ್ಕೂಲುಗಳಲ್ಲಿ ವಿದ್ಯಾಭ್ಯಾಸ ಮಾಡುವಾಗ ಗ್ರಾಮಾಂತರಗಳಲ್ಲೇ ಸಾಮಾನ್ಯವಾಗಿ ವ್ಯಾಸಂಗ ಮಾಡುತ್ತಾರೆ. ಆದರೆ ದೊಡ್ಡ ದೊಡ್ಡ ಪಟ್ಟಣಗಳಿಗೆ ಬಂದು ಕಾಲೇಜು ವಿದ್ಯಾಭ್ಯಾಸ ಮಾಡಬೇಕೆಂದರೆ ಅನೇಕರಿಗೆ ಸಾಕಷ್ಟು ಹಣವಿರುವುದಿಲ್ಲ; ಆರ್ಥಿಕಸ್ಥಿತಿಯಲ್ಲಿ ಬಹಳ ಕೆಳಮಟ್ಟದಲ್ಲಿರುತ್ತಾರೆ. ಆದ್ದರಿಂದ ಹಣವಂತರು ಮಾತ್ರ ಕಾಲೇಜು ವಿದ್ಯಾಭ್ಯಾಸದಲ್ಲಿ ಮುಂದುವರಿಯುತ್ತಾರೆ. ಬಡವರಾದ ಹರಿಜನರ ಕೈಲಿ ಹಣವಿಲ್ಲದೇ ಇರುವುದರಿಂದ ಅವರ ವಿದ್ಯಾಭ್ಯಾಸವು ಸುಸೂತ್ರವಾಗಿ ನಡೆಯದೆ ಅವರು ಅನೇಕವಾಗಿ ತೊಂದರೆಗೀಡಾಗಿ ಗ್ರ್ಯಾಜುಯೇಟ್ ಆಗುವುದಕ್ಕೆ ಅವಕಾಶವಿಲ್ಲದೆ ಅರ್ಧ ವಿದ್ಯಾಭ್ಯಾಸ ಮಾಡಬೇಕಾಗಿದೆ. ಆದ್ದರಿಂದ ಸರ್ಕಾರದವರು ಯಾವ ಉದ್ದೇಶದಿಂದ 3 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದಾರೋ ಆ ಹಣವು ಸದ್ವಿನಿಯೋಗವಾಗುವಂತೆ ಮಾಡಿ ಎಲ್ಲಾ ಪ್ರಜೆಗಳಿಗೂ ಸರಿಯಾಗಿ ಹಂಚುವಂತೆ ಏರ್ಪಡಿಸಬೇಕೆಂದು ಮನವಿ ಮಾಡುತ್ತೇನೆ.

ಇಷ್ಟೇ ಅಲ್ಲದೆ ಬೆಂಗಳೂರಿನಲ್ಲಿ ಸುಮಾರು ಒಂದೆರಡು ವರ್ಷದ ಕೆಳಗೆ 'ಲಾ' ಕಾಲೇಜನ್ನು ಪ್ರಾರಂಭಮಾಡಿದರು. ಆದರೆ ಅನೇಕ ವಿದ್ಯಾರ್ಥಿಗಳು ನಿಮ್ಮ ವರ್ಗಕ್ಕೆ ಸೇರಿದವರು ಅಲ್ಲಿ ಸೇರಬೇಕೆಂದು ಆಸೆಯಿಂದ ಹೋದರೆ ಅವರಿಗೆ ವಿದ್ಯಾರ್ಥಿ ವೇತನವೇ ಸಿಕ್ಕಲಿಲ್ಲ. ಹಾಗೆ ಹೋದ ಅನೇಕ ಮಂದಿ ವಾಪಸು ಬಂದರು. ಅದಕ್ಕೆ ಕಾರಣ ದುಡ್ಡಿನ ಅಭಾವ. ಮದ್ರಾಸಿನಲ್ಲಾದರೋ 'ಲಾ' ಕಾಲೇಜಿನಲ್ಲಿ ಓದುವವರಿಗೆ ವಿದ್ಯಾರ್ಥಿ ವೇತನ ಕೊಟ್ಟರು. ಆದರೆ ಏಕೆ ನಿಮ್ಮ ವರ್ಗದವರಿಗೆ ಕೊಡಬೇಕೆಂದು ಕೇಳಬಹುದು. ರಾಜ್ಯಾಂಗದಲ್ಲಿ ಸುಮಾರು ಹತ್ತು ವರ್ಷಗಳವರೆಗೆ ಇವರಿಗೆ ರಿಯಾಯಿತಿ ತೋರಿಸಬೇಕೆಂದಿರುವಾಗ ಸಾಧಾರಣವಾಗಿ ಆ ಅವಕಾಶವನ್ನು ಉಪಯೋಗಿಸಿಕೊಂಡು ನಿಮ್ಮ ವರ್ಗದವರಲ್ಲಿ 'ಲಾ' ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳಿಗೆ ಸಹಾಯ ನೀಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ನಿಮ್ಮ ವರ್ಗದ ವಿದ್ಯಾರ್ಥಿಗಳು 'ಲಾ' ಕಾಲೇಜಿಗೆ ಹೋದರೆ ಬುದ್ಧಿವಂತರಾಗಬಹುದು.

ಅಧ್ಯಕ್ಷರು.—ಆ ವಿಷಯ ಈ ನಿರ್ಣಯಕ್ಕೆ ಹೇಗೆ ಸಂಬಂಧಪಡುತ್ತದೆ?

ಶ್ರೀ ಟಿ. ಹನುಮಯ್ಯನವರು.—ನಿಮ್ಮ ವರ್ಗದಲ್ಲಿ ಲಾಯರುಗಳು ಒಬ್ಬಿಬ್ಬರು ಮಾತ್ರ ಇರುವುದರಿಂದ ನೂರಾರು ಜನರು ಆ ಪದವಿಗೆ ಬರಲು ಅವಕಾಶ ಕೊಡ

ಬೇಕು. ಏಕೆಂದರೆ ಒಂದೊಂದು ಜಿಲ್ಲೆಗೆ ಒಬ್ಬ ಲಾಯರಾದರೂ ಆ ಪಂಗಡದಲ್ಲಿಲ್ಲ.

ಅಧ್ಯಕ್ಷರು.—ಪುನಃ ತಾವು ಬೇರೆ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ನಿರ್ಣಯದಲ್ಲಿ, ಈಗ ಕೊಡುತ್ತಿರುವ ವಿದ್ಯಾರ್ಥಿ ವೇತನವನ್ನು ನಿಮ್ಮ ವರ್ಗದವರಿಗೆ ಹೆಚ್ಚಿಸಬೇಕೆಂದು ಮಾತ್ರ ಹೇಳಿದ್ದಾರೆ. 15 ರೂಪಾಯಿಗಳಿಂದ 30ಕ್ಕೂ, 10ರಿಂದ 20ಕ್ಕೂ ಹೆಚ್ಚಿಸಬೇಕೆಂದು ಹೇಳಿದ್ದಾರೆಯೇ ಹೊರತು ಇಲ್ಲದೇ ಇರುವವರಿಗೆ ಕೊಡಬೇಕೆಂದು ಹೇಳಿಲ್ಲ.

ಶ್ರೀ ಟಿ. ಹನುಮಯ್ಯನವರು.—'ಲಾ' ಕಾಲೇಜಿನಲ್ಲಿ ವೇತನಗಳನ್ನು ಕೊಡುತ್ತಿಲ್ಲ.

ಅಧ್ಯಕ್ಷರು.—ಈಗ ಯಾವ ಯಾವ ಕಾಲೇಜು ತರಗತಿಗಳಲ್ಲಿ ಎಷ್ಟೆಷ್ಟು ಕೊಡುತ್ತಿದ್ದಾರೋ ಅದನ್ನು ಎರಡರಷ್ಟು ಮಾಡಬೇಕೆಂದು ಈ ನಿರ್ಣಯದಲ್ಲಿ ಕೇಳಿದ್ದಾರೆ.

ಶ್ರೀ ಟಿ. ಹನುಮಯ್ಯನವರು.—ವೇತನವನ್ನು ಹೆಚ್ಚು ಮಾಡುವುದರಿಂದ ಹೆಚ್ಚು ವಿದ್ಯಾರ್ಥಿಗಳು ಬಂದು ವ್ಯಾಸಂಗ ಮಾಡಬಹುದು. ಈಗ ಅನೇಕ ವಿದ್ಯಾರ್ಥಿಗಳು ಓದುವುದನ್ನು ಬಿಟ್ಟು ಹೋಗುತ್ತಿದ್ದಾರೆ. ಚಿತ್ರದುರ್ಗದಲ್ಲಿ ಚಂದಾ ಎತ್ತಿ ಸಹಾಯಕೊಡಲು ಪ್ರಯತ್ನ ಮಾಡಿದೆವು. ಆದರೂ ಹಣವಿಲ್ಲದೆ ಅನೇಕ ವಿದ್ಯಾರ್ಥಿಗಳು ವಾಪಸು ಹೋಗುವ ಸಂಭವ ಬಂತು. ಆದುದರಿಂದ ಸರ್ಕಾರದವರು ನಿಮ್ನ ಪಂಗಡದ ವಿದ್ಯಾರ್ಥಿಗಳು ಇತರ ಪಂಗಡಗಳ ವಿದ್ಯಾರ್ಥಿಗಳ ಮಟ್ಟಕ್ಕೆ ಬರಲು ಅವಕಾಶವಾಗುವಂತೆ ಇವರಿಗೆ ಕೊಡುವ ವೇತನಗಳನ್ನು ಹೆಚ್ಚಿಸಬೇಕೆಂದು ಹೇಳಿ ಈ ನಿರ್ಣಯವನ್ನು ಸಮರ್ಥಿಸುತ್ತೇನೆ.

Sri V. M. MASCARENHAS (Bangalore Retroceded Area-General).—Sir, I heartily support the resolution moved by the Hon'ble Member Sri Madiah. I presume, Sir, that the idea of the Government in sanctioning the scholarships is to help the students to study. But to-day we are aware that the expenses of a student in Bangalore costs at least between Rs. 40 to 50. If that be the case, I fail to understand how a student of the Depressed Class can continue in a college course with a pittance of Rs. 15 as is now given to him. If the idea of Government be that the Depressed Class students should go through the college course, I think that the figure indicated by Sri Madiah is perfectly reasonable, and I would even say that it is on the lower side. If the Hon'ble Education Minister will seriously consider the question and correspondingly raise the amount to be given to the Depressed Class and other poor class boys, I think the resolution will not be in vain.

ಶ್ರೀ ಎಂ. ಸಿ. ವೆಂಕಟೇಶ್ವರವರು (ಮಂಡ್ಯ ಜಿಲ್ಲೆ—ನಿಮ್ನ ಪಂಗಡ).—ಸ್ವಾಮಿ, ದೇಶದಲ್ಲಿ ಎದುವರೆಗೆ ಅಜ್ಞಾನವಿರುತ್ತದೆಯೋ ಅದುವರೆಗೆ ಆ ದೇಶ ಪ್ರಗತಿಯಾಗಲಾರದೆಂಬ ವಾದವನ್ನು ಎಲ್ಲರೂ ಒಪ್ಪುತ್ತಾರೆಂದು ನಂಬಿದ್ದೇನೆ. ದೇಶದ ಜನ ಸಂಖ್ಯೆಯಲ್ಲಿ ಐದನೆಯ ಒಂದು ಭಾಗದಷ್ಟು ಬಹು ಸಂಖ್ಯೆಯಲ್ಲಿರುವ ನಿಮ್ನ ಪಂಗಡದವರಲ್ಲಿ ಕೇವಲ 100ಕ್ಕೆ ಎರಡರಷ್ಟು ಕೂಡ ವಿದ್ಯಾವಂತರಾಗದೆ ಅಜ್ಞಾನದಲ್ಲಿ ತುಂಬಿತುಳುಕುತ್ತಾ ದೇಶದ ಪ್ರಗತಿಗೇ ಅಡ್ಡಿಯಾಗಿರುವುದು ತಮ್ಮೆಲ್ಲರ ಗಮನಕ್ಕೂ ಬಂದಿರುವ ವಿಚಾರ. ಈಗ ಸಮಾಜದ ನ್ಯೂನತೆಗಳನ್ನು ತೊಲಗಿಸಿ ಈಗಿರುವ ಮಾರ್ಗಗಳನ್ನು ಬದಲಾಯಿಸುವುದಕ್ಕಾಗಿ ನೂರಾರು ಕಾನೂನುಗಳನ್ನು ಮಾಡಿದ್ದರೂ ಅವುಗಳಿಂದ ನಮಗೆ ಒಂದು ಅಂಗುಲದಷ್ಟೂ ಅನುಕೂಲವಾಗುತ್ತಿಲ್ಲ. ವಿದ್ಯಾಭ್ಯಾಸ ಕೊಡುವುದರಿಂದ ನಮ್ಮ ಜನರು ಸರಿಯಾದ ತಿಳಿವಳಿಕೆಯ ಮಟ್ಟಕ್ಕೆ ಬಂದು ದೇಶದ ಪ್ರಗತಿಯಲ್ಲಿ ಅವರು ಕೂಡ ಮುಂದಾಳುಗಳಾಗಿ ಬಂದು ದೇಶವನ್ನು ಮುಂದೆ ತರಲು ಅವಕಾಶವಾಗುತ್ತದೆಂದು ನಂಬಿದ್ದೇನೆ. ಅಲ್ಲದೆ ಅವರು ವಿದ್ಯಾವಂತರಾದ ಹಾಗೆಲ್ಲಾ ಸಮಾಜದ ದೋಷಗಳು ಮಾಯವಾಗುತ್ತವೆ. ಈಗ ನಿಮ್ನ ಪಂಗಡದವರಿಗೆ ಕೊಡತಕ್ಕ ವೇತನ ಬಹಳ ಕಡಮೆ. ಇದರಿಂದ ಅವರ ವಿದ್ಯಾಭ್ಯಾಸ ಬಹಳ ಕಡಿಮೆ ದರ್ಜೆಯಲ್ಲಿದೆ. ಇವರ ಬಡತನವನ್ನು ವಿಶದವಾಗಿ ಹೇಳುತ್ತಾ ಹೋದರೆ, ತಾವು ಕಿವಿಯನ್ನು ಮುಚ್ಚಿಕೊಳ್ಳುತ್ತೀರಿ, ಅವರ ಬಡತನದ ಜೀವನ ಅಷ್ಟು ಕೀಳಾಗಿದೆ! ಹೀಗಿರುವಾಗ ತಾವು ಅವರಿಗೆ ಕೊಡತಕ್ಕ ಹತ್ತು ಹದಿನೈದು ರೂಪಾಯಿನಲ್ಲಿ ಪಟ್ಟಣಗಳಿಗೆ ಬಂದು ಅವರು ವಿದ್ಯಾಭ್ಯಾಸ ಮಾಡುವುದಕ್ಕೆ ಸಾಧ್ಯವಿಲ್ಲ. ಎದುವರೆಗೆ ಅವರ ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಟ್ಟು ಅವರನ್ನು ಮುಂದಕ್ಕೆ ತರುವುದಿಲ್ಲವೋ ಅದುವರೆಗೆ ದೇಶ ಮುಂದುವರೆಯುವುದಕ್ಕೆ, ಅವರಲ್ಲಿರುವ ಕೊರತೆಗಳನ್ನು ಸರಿಪಡಿಸುವುದಕ್ಕೆ ಸಾಧ್ಯವೇ ಇಲ್ಲ. ಆದುದರಿಂದ ತಾವು ಶ್ರೀಮಾನ್ ಮಾದಯ್ಯನವರು ತಂದಿರುವ ನಿರ್ಣಯಕ್ಕೆ ಮನ್ನಣೆ ಕೊಟ್ಟು ಅನುಕೂಲ ಮಾಡಿಕೊಡಬೇಕು. ಅಧ್ಯಕ್ಷರೂ ಕೂಡ ತಮ್ಮ ಅಭಿಮತವನ್ನು ಸೂಚಿಸಿ ಅನುಕೂಲ ಮಾಡುತ್ತಾರೆಂದು ನನ್ನ ನಂಬಿಕೆ.

ಶ್ರೀ ಡಿ. ಗೋವಿಂದ ದಾಸ್‌ರವರು (ಹಾಸನ ಜಿಲ್ಲೆ—ನಿಮ್ನ ಪಂಗಡ).—ಅಧ್ಯಕ್ಷರೆ, ಯಾವ ಕಾಲೇಜು ಹಾಸ್ಟಲಿಗೆ ಹೋದರೂ ಕೂಡ ಅಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳು ಈ ವಿಷಯವಾಗಿ ನಮ್ಮ ಪಂಗಡದ ಪ್ರತಿನಿಧಿಗಳನ್ನು ಒತ್ತಾಯ ಮಾಡುತ್ತಿದ್ದಾರೆ. ನಾನೇ ಈ ವಿಷಯದಲ್ಲಿ ಒಂದು ನಿರ್ಣಯವನ್ನು ತರಬೇಕೆಂದಿದ್ದೆ; ದುರದೃಷ್ಟವಶಾತ್ ಆಗಲಿಲ್ಲ; ನನ್ನ ಮಾನ್ಯ ಮಿತ್ರರು ತಂದಿದ್ದಾರೆ, ಇದಕ್ಕಾಗಿ ಅವರನ್ನು ವಂದಿಸುತ್ತೇನೆ, ಅಲ್ಲದೆ ಈ ವಿಚಾರದಲ್ಲಿ ನಾನೂ ಒತ್ತಾಯ ಮಾಡುತ್ತೇನೆ. ಅನೇಕರು ವ್ಯಾಸಂಗ ಮಾಡಬೇಕೆಂದು ಉತ್ಸಾಹದಿಂದ ಬರುತ್ತಾರೆ. ಹಾಗೆ ಬಂದು ಮಿಡ್ಲ್ ಸ್ಕೂಲು ಮತ್ತು ಹೈಸ್ಕೂಲು ವಿದ್ಯಾಭ್ಯಾಸ ಮುಗಿದ ನಂತರ ಅವರ ಸ್ಥಿತಿ ನಡುನೀರಿನಲ್ಲಿ ಕೈಬಿಟ್ಟಂತಾಗುತ್ತದೆ. ಡಿಗ್ರಿ ತರಗತಿಯ ವಿದ್ಯಾರ್ಥಿಗಳಿಗೆ 15 ರೂಪಾಯಿ, ಇಂಟರ್‌ಮೀಡಿಯಟ್‌ನವರಿಗೆ 10 ರೂಪಾಯಿ ವೇತನವೆಂದು ಬಹು ದಿನಗಳ ಹಿಂದೆ ಸರ್ಕಾರದವರು ಗೊತ್ತು ಮಾಡಿ ಕೊಡುತ್ತಿದ್ದಾರೆ. ಸರ್ಕಾರದವರು ಕಾಲಕ್ಕನುಗುಣವಾಗಿ ಯೋಚನೆಮಾಡಿ ಇದನ್ನು ಏತಕ್ಕೆ ಹೆಚ್ಚು ಮಾಡಲಿಲ್ಲವೋ ನನಗೆ ಅರ್ಥವಾಗುವುದಿಲ್ಲ. ಮಿಡ್ಲ್ ಸ್ಕೂಲು ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡುವವರಿಗೆ ಸರ್ಕಾರದವರು ಕೆಲವು ಜಿಲ್ಲೆಗಳಲ್ಲಿ ಫ್ರೀ ಬೋರ್ಡಿಂಗ್ ಹೋಂಗಳನ್ನು ಏರ್ಪಾಡು ಮಾಡಿದ್ದಾರೆ. ಇದರಿಂದ

ಸರ್ಕಾರದವರಿಗೆ ಹಣ ಖರ್ಚಾಗುತ್ತಿದೆ. ಆದರೆ ಅಷ್ಟಕ್ಕೇ ನಿಲ್ಲಿಸಿ ಮುಂದಕ್ಕೆ ಓದುವ ವಿದ್ಯಾರ್ಥಿಗಳಿಗೆ ಸಹಾಯ ಮಾಡದೇಹೋದರೆ ತಾವು ಅದುವರೆಗೆ ಖರ್ಚು ಮಾಡಿದ ಹಣ ಅನ್ಯಾಯವಾಗಿ ವ್ಯರ್ಥವಾಗುತ್ತದೆ. ಒಂದು ಉದಾಹರಣೆ ಕೊಡುತ್ತೇನೆ. ಬೆಟ್ಟದ ಮೇಲೆ ದೇವರ ದರ್ಶನಮಾಡು ಎಂದು ಹೇಳಿ ಕರೆದುಕೊಂಡು ಹೋಗಿ ಅರ್ಧ ದಾರಿಯಲ್ಲಿ ಕೈಬಿಟ್ಟು ಬಿಟ್ಟರೆ ಆಗ ದೇವರ ದರ್ಶನ ಮಾಡಲು ಸಾಧ್ಯವಿಲ್ಲದ ಹಾಗಾಗುತ್ತದೆ. ಇನ್ನೂ ನಮ್ಮ ಕಾಲ ಮೇಲೆ ನಾವು ನಿಲ್ಲುವುದಕ್ಕೆ ಶಕ್ತಿಯಿಲ್ಲ. ಈಗ ಹಾಸನದ ಇಂಟರ್‌ಮೀಡಿಯೇಟ್ ಕಾಲೇಜಿದೆ. ಅಲ್ಲಿ ನಮ್ಮ ಪಂಗಡದ 7–8 ಜನ ವಿದ್ಯಾರ್ಥಿಗಳಿದ್ದಾರೆ. ಅವರು ಎಷ್ಟು ಕಷ್ಟಪಡುತ್ತಿದ್ದಾರೆಂಬುದನ್ನು ಕಣ್ಣಾರ ಕಂಡು ಅದನ್ನು ಸರ್ಕಾರದವರ ಗಮನಕ್ಕೆ ತಂದು ಏನಾದರೂ ಮಾಡಿ ಅವರ ಕಷ್ಟವನ್ನು ಕಡಿಮೆಮಾಡಿ ಕಾಲೇಜು ವಿದ್ಯಾರ್ಥಿಗಳಿಗೆ ಪರಿಹಾರ ದೊರಕಿಸಿಕೊಡಬೇಕೆಂಬ ದೃಢಮನಸ್ಸಿನಿಂದ ಬಂದಿದ್ದೇವೆ. ಹರಿಜನರಲ್ಲಿ ವಿದ್ಯಾಭ್ಯಾಸ ಬಹಳ ಕೀಳು ಮಟ್ಟದಲ್ಲಿದೆ. ಕೇವಲ ಶೇಕಡ 2·9 ಎಂದು ಲೆಕ್ಕದಿಂದ ತಿಳಿದುಬಂದಿದೆ. ನನ್ನ ಮಾನ್ಯ ಮಿತ್ರರು ಈ ವಿಚಾರದಲ್ಲಿ ಆಗಲೇ ಮಾತನಾಡಿದ್ದಾರೆ. ಸರ್ಕಾರದವರು ನಮ್ಮ ಉದ್ಧಾರ ಕಾರ್ಯಗಳೆಲ್ಲಕ್ಕೂ ಒಂದು ಕಣ್ಣನ್ನು ನಮ್ಮ ಉದ್ಧಾರಕ್ಕೆ ಮುಖ್ಯವಾದ ವಿದ್ಯಾಭ್ಯಾಸದ ಮೇಲೆ ಇನ್ನೊಂದು ಕಣ್ಣನ್ನೂ ಇಡಬೇಕು. ನಾವು ಎಲ್ಲಾ ವಿಷಯಗಳಲ್ಲಿಯೂ ಹಿಂದಿರುವುದರಿಂದ ನಮಗೆ ವಿದ್ಯೆಗೆ ಸಹಾಯ ಮಾಡಿದರೆ 14 ಲಕ್ಷ ಜನರು ಬೇಗ ಮೇಲಕ್ಕೇಳಲು ಸಾಧ್ಯವಾಗುತ್ತದೆ.

ವಿದ್ಯೆಯೇ ಹರಿಜನಂಗಳ ।
ನುದ್ಧಾರಗೈದು ಬೇಗ ಮನುಜರೆಂದೆನಿಪುದಲ್ಲದೆ!
ಮಿದ್ದ ಕಾರ್ಯಂಗಳಿಂದಲಿವ ।
ರುದ್ಧಾರಕೆಳೆವುದು ಮಾತ್ರೊಂದಿಲ್ಲ ಜಗದೊಳ್ ॥

ಎಂಬಂತೆ..................

ಶ್ರೀ ಎಂ. ವಿ. ಕೃಷ್ಣಪ್ಪನವರು.—ಇದನ್ನು ಯಾರು ಬರೆದದ್ದು ?

ಶ್ರೀ ಡಿ. ಗೋವಿಂದ ದಾಸ್‌ರವರು.—ನಾನೇ ಬರೆದದ್ದು.

ಕಾಲೇಜು ವಿದ್ಯಾಭ್ಯಾಸಕ್ಕೆ ಹೋಗುವುದಕ್ಕೆ ಅನೇಕರು ಹಿಂತೆಗೆಯುತ್ತಿದ್ದಾರೆ. ಆದುದರಿಂದ ಅವರನ್ನು ಮುಂದೆ ತರುವುದಕ್ಕಾಗಿ ಶ್ರೀಮಾನ್ ಮಾದಯ್ಯನವರು ತಂದಿರತಕ್ಕ ನಿರ್ಣಯದಲ್ಲಿ ಎಷ್ಟು ಕೊಡಬೇಕೆಂದು ಕೇಳಿದ್ದಾರೋ, ಅಂದರೆ 10 ರೂಪಾಯಿನಿಂದ 20 ರೂಪಾಯಿಗೆ, 15 ರೂಪಾಯಿನಿಂದ 30 ರೂಪಾಯಿಗೆ ಹೆಚ್ಚು ಮಾಡಬೇಕೆಂದು ಕೇಳಿದ್ದಾರೆ, ಅದನ್ನು ಸರ್ಕಾರದವರು ಪರಿಶೀಲಿಸಿ ಅನುಕೂಲಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ದೇಶದಲ್ಲಿರತಕ್ಕ ಸರ್ವ ಕೋಮಿನವರೂ ಸಹ ಸಾಧ್ಯವಾದಷ್ಟು ಮಟ್ಟಿಗೂ ವಿದ್ಯಾಭ್ಯಾಸದಲ್ಲಿ ಒಂದೇ ಮಟ್ಟಕ್ಕೆ ಬಂದು ಮುಂದುವರಿಯಲು ತಕ್ಕ ಏರ್ಪಾಡು ಮಾಡತಕ್ಕ ಕಾರ್ಯಕ್ರಮ ಕೈಗೊಳ್ಳುವುದು ಅವಶ್ಯಕ. ವಿಶ್ವವಿದ್ಯಾನಿಲಯದಲ್ಲಿ ವಿದ್ಯಾಭ್ಯಾಸ ಮಾಡಬೇಕಾದರೆ ಎಷ್ಟು ಖರ್ಚಾಗುತ್ತದೆಂಬುದು ಎಲ್ಲರಿಗೂ ಗೊತ್ತಿದೆ. ಶ್ರೀಮಾನ್ ಮಾದಯ್ಯನವರು ತಂದಿರುವ ನಿರ್ಣಯದಲ್ಲಿ ಸೂಚಿಸಿರುವ 30 ರೂಪಾಯಿ ಕೇವಲ ಕಡಿಮೆ. ಮುಖ್ಯವಾಗಿ ವಿದ್ಯಾಭ್ಯಾಸದಲ್ಲಿ ಹಿಂದುಳಿದಿರುವವರಿಗೆ ಸರಿಯಾಗಿ ಇತರ ಕೋಮಿನವರಿಗೆ ದೊರಕುವ ದಾಮಾಷಾ ಪ್ರಕಾರ ವಿದ್ಯಾಭ್ಯಾಸ ಸಿಕ್ಕಬೇಕಾದುದು ಅತ್ಯಗತ್ಯ. ಅವರ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದಲ್ಲದೆ ಸಮಾಜದಲ್ಲಿ ಅವರ ಅಂತಸ್ತು ಹೆಚ್ಚಾಗಬೇಕು. ಹೀಗೆ ಮಾಡುವುದರಿಂದ ಅವರು ಇತರ ಕೋಮುಗಳವರೊಡನೆ ಯಾವ ಭೇದವೂ ಇಲ್ಲದೆ ಸರಿಸಮಾನವಾಗಿ ಹೋಗುವುದಕ್ಕೆ ಕಾರಣವಾಗುತ್ತದೆ.

ಹಿಂದೆ ವಿದ್ಯಾಭ್ಯಾಸ ಮಾಡಿಸಬೇಕೆಂದರೆ, ಈ ಪಂಗಡದ ವಿದ್ಯಾರ್ಥಿಗಳಿಗೆ ವೇತನ ಕೊಡುವುದಲ್ಲದೆ ಅವರ ತಂದೆ ತಾಯಿಗಳಿಗೂ, ಪೋಷಕರಿಗೂ ಸಹಾಯ ಮಾಡಿ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುತ್ತಿದ್ದರು. ಈ ಕಾರಣದಿಂದಲೇ ಅವರ ಕೋಮಿನಲ್ಲಿ ಅಲ್ಪಸ್ವಲ್ಪ ಜನರು ಇವತ್ತು ವಿದ್ಯಾವಂತರಾಗಿದ್ದಾರೆ. ಅವರ ಆರ್ಥಿಕ ಸ್ಥಿತಿಯಿಂದ ಅವರಿಗೇನೂ ಸಹಾಯವಾಗುತ್ತಿಲ್ಲ. ಅವರಲ್ಲಿ ಅನೇಕರು ನಿರ್ಗತಿಕರು. ಹಿಂದೆ ಅವರ ತಂದೆ ತಾಯಿಗಳಿಗೂ ಪೋಷಕರಿಗೂ ಸಹಾಯ ಕೊಟ್ಟದ್ದರಿಂದ. ಕೆಲವರು ವಿದ್ಯಾಭ್ಯಾಸ ಮಾಡುವುದಕ್ಕೆ ಸಾಧ್ಯವಾಯಿತು. ಹಾಗೆ ಕೊಡದೇಯಿದ್ದಿದ್ದರೆ ಅವರನ್ನೂ ತಮ್ಮ ಮನೆ ಗೃಹಕೃತ್ಯದ ಕೆಲಸಕ್ಕೆ ಹಾಕಿಕೊಳ್ಳುತ್ತಿದ್ದರು. ವಿಶ್ವವಿದ್ಯಾನಿಲಯದಲ್ಲಿ ತಲೆಯೊಂದಕ್ಕೆ ನಾಲ್ಕು ರೂಪಾಯಿ ಖರ್ಚಾಗುತ್ತಿದೆ. ದೇಶದಲ್ಲಿ 14 ಲಕ್ಷ ವಿರುವ ಜನರಿಗೆ ಈ ಪ್ರಕಾರ ಲೆಕ್ಕಾಹಾಕಿದರೆ ವಿಶ್ವವಿದ್ಯಾನಿಲಯಕ್ಕೆ ಖರ್ಚಾಗುವುದರಲ್ಲಿ ಹತ್ತನೆಯ ಒಂದು ಭಾಗ ಮೀಸಲಾಗಬೇಕಾಗಿರುವಲ್ಲಿ ಕೊನೆಗೆ ಒಂದು ಲಕ್ಷವೂ ಈ ಕೋಮಿನವರಿಗಾಗಿ ಖರ್ಚಾಗುತ್ತಿಲ್ಲ. ಈ ದೃಷ್ಟಿಯಿಂದ, ಇವರು ಕೇಳಿರುವುದು ನ್ಯಾಯವಾದ ಕೋರಿಕೆ. ಖಂಡಿತವಾಗಿಯೂ ಸರ್ಕಾರದವರು ಇದನ್ನು ಒಪ್ಪಿಕೊಂಡು ಮಂಜೂರು ಮಾಡುತ್ತಾರೆಂದು ನಂಬಿದ್ದೇನೆ. ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕೆ ಆಗುತ್ತಿರುವ ಖರ್ಚಿಗೆ ಹೋಲಿಸಿದರೆ ಇದೇನೂ ಹೆಚ್ಚಲ್ಲವೆಂದು ನನ್ನ ಭಾವನೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗಾ ಜಿಲ್ಲೆ).—ಅಧ್ಯಕ್ಷರೆ, ಈ ನಿರ್ಣಯಕ್ಕೆ ಬೆಂಬಲ ಕೊಡುತ್ತಾ, ದೀರ್ಘವಾದ ಭಾಷಣ ಮಾಡುವುದು ಅನಾವಶ್ಯಕವೆಂದು ಕಾಣುತ್ತದೆ. ಸರ್ಕಾರದವರು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿರತಕ್ಕ ನೀತಿಯನ್ನೇ ಮುಂದುವರಿಸಿಕೊಂಡು ಹೋಗಬೇಕು. ಸಮಾಜದಲ್ಲಿ ಬಹಳ ಹಿಂದುಳಿದ ವರ್ಗದವರಿಗೆ ತಕ್ಕಮಟ್ಟಿಗೆ ಪ್ರೋತ್ಸಾಹ ಕೊಟ್ಟು, ಅವರು ಮುಂದೆ ಬರುವುದಕ್ಕೆ ಎಲ್ಲಾ ವಿಧದಿಂದಲೂ ಎಂದರೆ ಆರ್ಥಿಕ, ನೈತಿಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ಅವರಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಬಾಕಿಯವರಿಗೆ ಕೊಡುವಂಥ ಉತ್ತೇಜನಕ್ಕಿಂತ ಸ್ವಲ್ಪ ಮಟ್ಟಿಗೆ ಹೆಚ್ಚಿನ ಉತ್ತೇಜನ ಕೊಡುವುದು ಅವಶ್ಯಕವೆಂದು ಸರ್ಕಾರದವರ ನೀತಿ ಆಗಿದೆ. ನಾವು ಒಂದು ರನ್ನಿಂಗ್ ರೇಸ್ ನೋಡಿದರೆ ಒಬ್ಬ ಸ್ವಲ್ಪ ಬಲಯುತನಾಗಿದ್ದು ಇನ್ನೊಬ್ಬ ಸ್ವಲ್ಪ ಬಲಹೀನನಾಗಿದ್ದಲ್ಲಿ ಅವನಿಗೆ handicap ಕೊಡುವುದು ಉಂಟು. ಅದೇ ರೀತಿ ಇವತ್ತು ನಿಮ್ನವರ್ಗದವರಿಗೆ ಸ್ವಲ್ಪ ಹೆಚ್ಚು ಸಹಾಯ ಮಾಡತಕ್ಕದ್ದು ಮುಖ್ಯವಾಗಿದೆ. ಈಗ ಇರುವ ನಿರ್ಣಯದಲ್ಲಿ ಅವರು ಕೇಳಿರುವುದೇನೆಂದರೆ ನಿಮ್ನ ವರ್ಗದವರಿಗೆ ಕೊಡುತ್ತಾ ಇರುವ ಸ್ಕಾಲರ್‌ಷಿಪ್ ಹಿಂದಿನ ಕಾಲದಲ್ಲಿ ಜೀವನದ ಖರ್ಚು ಕಡಿಮೆಯಾಗಿದ್ದಾಗ ನಿರ್ಧರಿಸಿದ್ದು. ಈಗಿನಕಾಲದಲ್ಲಿ ಜೀವನದ ಖರ್ಚು ಹೆಚ್ಚಾಗಿರುವಾಗ ಅಷ್ಟೇ ಮೊಬಲಗನ್ನು ಕೊಡುವುದರಿಂದ ಪಟ್ಟಣಗಳಲ್ಲಿ ವಾಸಮಾಡತಕ್ಕವರಿಗೆ ಬಹಳ ಕಷ್ಟವಾಗಿದೆ, ಅದನ್ನು ಹೆಚ್ಚು ಮಾಡಬೇಕೆಂದು ಕೇಳಿದ್ದಾರೆ. ಇದು ಬಹಳ ಸೂಕ್ತವಾಗಿದೆ. ಆದ್ದರಿಂದ ಇದನ್ನು ಅಂಗೀಕರಿಸುವುದರಲ್ಲಿ ಸರ್ಕಾರದವರಿಗೆ ಯಾವ ವಿಧವಾದ ಅಡಚಣೆ,

ಆತಂಕ ಬರುವುದಿಲ್ಲವೆಂದು ನಂಬಿ, ಈ ನಿರ್ಣಯಕ್ಕೆ ಬೆಂಬಲ ಕೊಡುತ್ತೇನೆ.

ಅಧ್ಯಕ್ಷರು.—ಶ್ರೀಮಾನ್ ಮಾದಯ್ಯನವರು ಉತ್ತರ ಕೊಡಬೇಕೆಂದು ಇಷ್ಟಪಡುತ್ತಾರೆಯೆ ?

ಶ್ರೀ ಎಂ. ಮಾದಯ್ಯನವರು.—ಕೆಲವು ವಿಷಯಗಳು ನಾನು ಹೇಳದೇ ಇರುವುದು ಇವೆ. ಅವನ್ನು ತಿಳಿಸುತ್ತೇನೆ.

ಅಧ್ಯಕ್ಷರು.—ನೀವು ಹೇಳಿರುವುದಕ್ಕೆ ಏನಾದರೂ ವ್ಯತಿರಿಕ್ತವಾದ ವಿಷಯಗಳನ್ನು ಹೇಳಿದ್ದರೆ ನೀವು ಉತ್ತರ ಕೊಡಬಹುದಾಗಿತ್ತು. ಹೊಸದಾಗಿ ಏನೂ ಹೇಳಬೇಕಾಗಿಲ್ಲ.

ಶ್ರೀ ಎಂ. ಮಾದಯ್ಯನವರು.—ಈಗ ಇತರ ಕಡೆಗಳಲ್ಲಿ, ಎಂದರೆ, ಹಾಸನ, ತುಮಕೂರು ಈ ಸ್ಥಳಗಳಲ್ಲಿ ಇಂಟರ್‌ಮೀಡಿಯಟ್ ಕಾಲೇಜುಗಳು ಇವೆ.........

ಶ್ರೀ ಎಸ್. ಆರ್. ಗುರುಲಿಂಗಯ್ಯನವರು (ಬೆಂಗಳೂರು ಜಿಲ್ಲೆ).—On a point of order, Sir. ಅವರು ಪುನಃ ಹೊಸ ವಿಷಯಗಳನ್ನೂ ಹೇಳುತ್ತಿದ್ದಾರೆ. ಅದಕ್ಕೆ ಅವಕಾಶ ಕೊಡಕೂಡದು.

ಅಧ್ಯಕ್ಷರು.—ಶ್ರೀಮಾನ್ ಮಾದಯ್ಯನವರು ಆ ರೀತಿ ಹೇಳುವುದು ಅನಾವಶ್ಯಕ.

ಶ್ರೀ ಎಂ. ಮಾದಯ್ಯನವರು.—ಸೆಂಟ್ರಲ್ ಕಾಲೇಜು ಮತ್ತು ಮಹಾರಾಜಾ ಕಾಲೇಜು ಹಾಸ್ಟೆಲುಗಳಲ್ಲಿ...

Sri S. R. GURULINGIAH.—I have raised a point of order, Sir. ಅದರ ಮೇಲೆ ರೂಲಿಂಗ್ ಕೊಟ್ಟಿಲ್ಲ.

ಅಧ್ಯಕ್ಷರು.—ತಾವು ಉತ್ತರ ಕೊಡುವುದಕ್ಕೆ ಹೊಸ ವಿಷಯವೇನೂ ಇಲ್ಲ. ಆದ್ದರಿಂದ ಬೇರೆ ಒಂದು ಭಾಷಣ ಮಾಡುವುದು ಸರಿಯಲ್ಲ.

*ಶ್ರೀ ಟಿ. ಸಿದ್ದಲಿಂಗಯ್ಯನವರು (ವಿದ್ಯಾ ಸಚಿವರು).—ಶ್ರೀಮಾನ್ ಮಾದಯ್ಯನವರ ಠರಾವಿನ ಮೇಲೆ ಯಾವ ಭಿನ್ನಾಭಿಪ್ರಾಯವೂ, ಯಾರಲ್ಲಿಯೂ ಇಲ್ಲವೇ ಇಲ್ಲ. ಅದು ಸರ್ವ ಸಮ್ಮತವಾದ ವಿಚಾರ ಎಂದು ಹೇಳಿ ನಾನು ಒಪ್ಪಿಕೊಳ್ಳುತ್ತೇನೆ. ಮೊದಲಿನಿಂದಲೂ ಸರ್ಕಾರದವರು ಬಹಳ ಸಹಾನುಭೂತಿಯುತವಾದ ಮಾರ್ಗದಲ್ಲಿಯೇ ನಡೆದುಕೊಂಡು ಬಂದಿದ್ದಾರೆಂಬುದನ್ನು ಯಾರೂ ನಿರಾಕರಿಸುವುದಿಲ್ಲ. ಶ್ರೀಮಾನ್ ಮಾದಯ್ಯನವರು ಅಪ್ಪಣೆ ಕೊಡಿಸಿದ ಒಂದು ವಿಷಯ ಬಹಳ ಆಶ್ಚರ್ಯವನ್ನುಂಟು ಮಾಡಿದೆ. ನಮ್ಮ ಸ್ನೇಹಿತರು ಅವರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟ ಹಾಗೆಲ್ಲಾ ಅವರಲ್ಲಿ ವಿದ್ಯಾವಂತರು ಕಡಿಮೆ ಆಗುತ್ತಾ ಇದ್ದಾರೆ ಎಂದು remark ಮಾಡಿದರು. ಅವರ ಅರ್ಥ ಅದಲ್ಲವೆಂದು ನಾನು ನಂಬಿದ್ದೇನೆ. ಈ ವ್ಯವಸ್ಥೆಯನ್ನು ಎಲ್ಲರೂ ಕೂಡ ಸರ್ವ ಸಮ್ಮತದಿಂದ ಒಪ್ಪಿಕೊಳ್ಳುವುದು ಏಕೆಂದರೆ ನಿಮ್ಮ ವರ್ಗದವರಲ್ಲಿ ವಿದ್ಯಾಭ್ಯಾಸದ ಮಟ್ಟ ಹೆಚ್ಚು ಆಗುತ್ತಾ ಇದೆ. ಹೆಚ್ಚು ವಿದ್ಯಾವಂತರು ಮುಂದಕ್ಕೆ ಬರುತ್ತಾ ಇದ್ದಾರೆ. ಸ್ಕೂಲು, ಕಾಲೇಜುಗಳಲ್ಲಿ, ಸರ್ಕಾರಿ ನೌಕರಿಗಳಲ್ಲಿ ಹರಿಜನರು ಜಾಸ್ತಿಯಾಗುತ್ತಾ ಇದ್ದಾರೆ ಎಂಬುದು ನಿರ್ವಿವಾದವಾದ ವಿಚಾರ. ಈಗ ತಾವು ತಂದಿರತಕ್ಕ ನಿರ್ಣಯದಲ್ಲಿ ಈಗ ಕೊಡುತ್ತಾ ಇರತಕ್ಕ ದರವನ್ನು ಎಂದರೆ ಇಂಟರ್ ಮೀಡಿಯಟ್ ಮತ್ತು ಇತರ ಯೂನಿವರ್ಸಿಟಿ ಕ್ಲಾಸುಗಳಲ್ಲಿರತಕ್ಕವರಿಗೆ 10 ರೂಪಾಯಿನಿಂದ 20 ರೂಪಾಯಿಗಳಿಗೂ, ಡಿಗ್ರಿ ಕ್ಲಾಸ್‌ನಲ್ಲಿರತಕ್ಕವರಿಗೆ 15 ರೂಪಾಯಿನಿಂದ 30 ರೂಪಾಯಿಗಳಿಗೂ ಸ್ಕಾಲರ್‌ಷಿಪ್ ಹೆಚ್ಚು ಮಾಡಬೇಕೆಂದು ಕೇಳಿದ್ದೀರಿ. ಈಗ ಸರ್ಕಾರದವರು ಅದಕ್ಕೆ ಇಷ್ಟು ಮೊಬಲಗು ಎಂಬುದಾಗಿ ತೆಗೆದು ಇಟ್ಟುಬಿಟ್ಟಿದ್ದಾರೆ ಅದು ಮೊದಲು ಇರಲಿಲ್ಲ ಕೆಲವು ವರ್ಷಗಳಿಂದ ಈಚೆಗೆ ಆ ಪ್ರಾವಿಜನ್ ಬಂದಿದೆ. ಈಗ ಸ್ಕಾಲರ್‌ಷಿಪ್ ಮೊಬಲಗನ್ನು ಜಾಸ್ತಿ ಮಾಡಬೇಕೆಂದು ಹೇಳಿದರೆ, ಸ್ಕಾಲರ್‌ಷಿಪ್ ಕೊಡತಕ್ಕ ವಿದಾರ್ಥಿಗಳ ಸಂಖ್ಯೆ ಕಡಿಮೆ ಮಾಡಬೇಕಾಗುತ್ತದೆ. ಯಾವುದು ಮಾಡಬೇಕೆಂಬುದು ಒಂದು ಲಾಜಿಕ್, Rule of Three. ಬಡ್ಜೆಟ್ ನಲ್ಲಿ ಈಗಿರತಕ್ಕ ಮೊಬಲಗನ್ನು ಜಾಸ್ತಿ ಮಾಡಬೇಕೆಂದು ಆಗಲೇ ಪ್ರಶ್ನೆಗಳ ಮೂಲಕ, ಖೋತಾ ನಿರ್ಣಯದ ಮೂಲಕ ತಿಳಿಸಿದ್ದೀರಿ. ಅದಕ್ಕೆ ಸಕ್ಕಾರದವರು ಈ ವರ್ಷ ಹೆಚ್ಚು ಮಾಡುವುದಕ್ಕಾಗುವುದಿಲ್ಲವೆಂದು ಆಗಲೇ ಉತ್ತರ ಕೊಟ್ಟಿದ್ದಾರೆ. ಅದಕ್ಕೇ ಈ simple Rule-of Three ಹೇಳುತ್ತಾ ಇದ್ದೇನೆ.

Sri M. MADIAH.—Does it not imply that the amount should be relatively increased?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ವರ್ಷದ ಪರಿಸ್ಥಿತಿ ಏನು ಎನ್ನುವುದನ್ನೂ ನಾನಾಗಲೇ ಹೇಳಿದ್ದೇನೆ. I think it is agreed that the Budget is passed. ಆ ದೃಷ್ಟಿಯಿಂದ I am clarifying the point. ಇನ್ನು ಚರ್ಚೆ ಆಗಬೇಕೆಂದು ಇದ್ದರೆ ಅಧ್ಯಕ್ಷರ ಅಪ್ಪಣೆ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಬಹಳ ಸಹಾನುಭೂತಿಯಿಂದ ವಿಚಾರಗಳನ್ನು ಹೇಳುತ್ತಾ ಇದ್ದೇನೆ, ವಿರೋಧಮಾಡಬೇಕೆಂಬ ಅಭಿಪ್ರಾಯ ನನಗೆ ಇಲ್ಲ. Clarification ಗೆ ಹೇಳುತ್ತಾ ಇದ್ದೇನೆ ಅಷ್ಟೆ. ನಮ್ಮ ಸ್ನೇಹಿತರು ಕೆಲವರು 45 ಲಕ್ಷ ರೂಪಾಯಿ ವಿಶ್ವವಿದ್ಯಾನಿಲಯಕ್ಕೆ ಖರ್ಚಾಗುತ್ತಾ ಇದೆ. ಹರಿಜನರಿಗೆ 40 ಸಾವಿರ ರೂಪಾಯಿ ಮಾತ್ರ ಪ್ರೊವೈಡ್ ಮಾಡಿದ್ದೀರಿ ಎಂದು ವಾದ ಮಾಡಿದರು. ಮನೆಯಲ್ಲಿರತಕ್ಕ ಎಲ್ಲಾ ಮಕ್ಕಳಿಗೂ ಸರಿಯಾಗಿ ಬಟ್ಟೆಕೊಟ್ಟು, ಹೊಟ್ಟೆತುಂಬಾ ಊಟ ಹಾಕಿ. ಯಾರು ದುರ್ಬಲರಾಗಿರುತ್ತಾರೋ ಅವರನ್ನು ಸ್ಪೆಷಲ್ ಆಗಿ ನೋಡಿಕೊಳ್ಳಬೇಕಾಗುತ್ತದೆ. ಆ ರೀತಿ ನಿಮ್ಮ ವರ್ಗದವರನ್ನು ಸ್ಪೆಷಲ್ ಆಗಿ ನೋಡಿಕೊಳ್ಳಲು ಈ ಮೊಬಲಗನ್ನು ಒದಗಿಸಿದ್ದಾರೆಯೇ ಹೊರತು ಬೇರೆಯಲ್ಲ. ಆದರೆ ಸದಸ್ಯರು ವಾದ ಮಾಡಿದವರು ಬರೀ ದುರ್ಬಲರಾಗಿರುವ ಮಕ್ಕಳಿಗೆಲ್ಲಾ ಈ 50 ಸಾವಿರ ರೂಪಾಯಿಗಳನ್ನು ಒದಗಿಸಲಾಗಿದೆ ಎಂಬ ಭಾವನೆ ಬರುವ ಹಾಗೆ ಮಾತನಾಡಿದರು: ಶ್ರೀಮಾನ್ ಬಿ. ಹುಚ್ಚೇಗೌಡರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ 50 ಸಾವಿರ ರೂಪಾಯಿ ಇರುವುದು, ಮಕ್ಕಳಿಗೆ ಅವಶ್ಯಕವಾದದ್ದನ್ನೆಲ್ಲಾ ಒದಗಿಸಿ, ದುರ್ಬಲರಾಗಿರತಕ್ಕ ಮಕ್ಕಳಿಗೆ ಸ್ಪೆಷಲ್ ಆಗಿ ಟಾನಿಕ್ ಕೊಡುವುದಕ್ಕೆ. ಈಗ ಕೊಡುತ್ತಾ ಇರತಕ್ಕ ಮೊಬಲಗು ತಿಂಗಳಿಗೆ 15 ರೂಪಾಯಿ ಮತ್ತು 10 ರೂಪಾಯಿ ಎಂದು ನಿರ್ದಿಷ್ಟವಾಗಿದೆ. ಆ ಮೊಬಲಗನ್ನು ಈ ವರ್ಷ ಹೆಚ್ಚು ಮಾಡುವುದಕ್ಕೆ ಅವಕಾಶವಿಲ್ಲ. ಇದರ ಜೊತೆಗೆ ಯೂನಿವರ್ಸಿಟಿ ಹಾಸ್ಟಲುಗಳು ಎರಡು ಇವೆ ಇದರಲ್ಲಿ ಅವರು ಹೊಸ ಹಾಸ್ಟಲುಗಳನ್ನು ತೆರೆಯಬೇಕೆಂದು ಸಲಹೆ ಮಾಡಿದ್ದಾರೆ.

ಶ್ರೀ ಎಂ ಮಾದಯ್ಯನವರು.—ನಾನು ಹೊಸ ಹಾಸ್ಟಲುಗಳನ್ನು ತೆರೆಯಬೇಕೆಂದೇನೂ ಹೇಳಲಿಲ್ಲ. ಆದರೆ ಈಗ ಅಲ್ಲಿಗೆ ವ್ಯಾಸಂಗ ಮಾಡಲು ಬರತಕ್ಕ ವಿದ್ಯಾರ್ಥಿಗಳಿಗೆ, ಅವರು ತಮ್ಮ ಮುಂದಿನ ವ್ಯಾಸಂಗ ಮಾಡಲಿಕ್ಕೆ ಅವಕಾಶವಿಲ್ಲದಂತಾಗಿ ತೊಂದರೆಯಾಗಿದೆಯೆಂದು ತಿಳಿಸಿದೆ.

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಾವು ಹಾಗೆಂತಿಳಿಸಿದ್ದೀರೆಂದು ನನಗೆ ಅರ್ಥವಾಯಿತು. I think if my memory is wrong, you are right.

Sri M. MADIAH.—Your memory is sharp!

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇನ್ನು ಡಿಪ್ರೆಸ್ಡ್ ಕ್ಲಾಸಿನವರಿಗೆ ಕಾಲೇಜುಗಳಲ್ಲಿ ಯಾವ ಫೀಜನ್ನೂ ಹಾಕುತ್ತಿಲ್ಲ. ಟೆಕ್ಸ್ಟ್‌ಬುಕ್ಸ್ ಇತ್ಯಾದಿ ಪುಸ್ತಕಗಳನ್ನೂ ಸಹ ಇವರಿಗೆ ಪುಕ್ಕಟ್ಟೆಯಾಗಿ ಒದಗಿಸಲಾಗುತ್ತಿದೆ. ಪರೀಕ್ಷೆಗಳಿಗಾಗಿ ಇವರು ಯಾವ ಫೀಜನ್ನೂ ಕೊಡಬೇಕಾಗಿಲ್ಲ. ಆಗಿಂದಾಗ್ಯೆ ಸದಸ್ಯರು ಕೊಡುತ್ತಿರುವ ಸಲಹೆಗಳಿಗೆ ಸರ್ಕಾರದವರು ಸಂಪೂರ್ಣ ಗಮನ ಕೊಟ್ಟು, ಡಿಪ್ರೆಸ್ಡ್ ಕ್ಲಾಸಿನವರ ವಿಷಯದಲ್ಲಿ ಸಹಾನುಭೂತಿಯಿಂದ ಎಲ್ಲಾ ಅನುಕೂಲತೆಗಳನ್ನೂ ಒದಗಿಸುತ್ತಾ ಬಂದಿದ್ದಾರೆ. ಇಷ್ಟೆಲ್ಲಾ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಾಗ್ಯೂ ಇನ್ನೂ ದೂರುಗಳು ಬರುತ್ತಲೇ ಇವೆ. ಹೀಗೆ ದೂರುಗಳು ಬರುತ್ತಿರುವುದರ ಉದ್ದೇಶ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸಿಕೊಡಲಿ ಎಂಬುದೇ ಆಗಿರುತ್ತೆ. ಆದರೆ ಈ ವಿಷಯದಲ್ಲಿ ಸರ್ಕಾರದವರು ತಮ್ಮ ಪರಿಸ್ಥಿತಿಗಳನ್ನೆಲ್ಲಾ ಆಲೋಚನೆ ಮಾಡಿ, ಅವುಗಳನ್ನು ವಿಮರ್ಶೆ ಮಾಡಿಕೊಂಡು ಸಾಧ್ಯವಾದಷ್ಟೂ ಅನುಕೂಲ ಮಾಡಲು ಆಕಾಂಕ್ಷೆಯುಳ್ಳವರಾಗಿದ್ದಾರೆ.

'ಲಾ' ಕಾಲೇಜಿನ ವ್ಯಾಸಂಗದ ಬಗ್ಗೆ ಮತ್ತೊಂದು ಅಂಶವನ್ನು ತಿಳಿಸಿದ್ದಾರೆ. ಈ ಡಿಪ್ರೆಸ್ಡ್ ಕ್ಲಾಸಿನವರು ಪದವೀಧರರಾದ ನಂತರ ಮುಂದೆ 'ಲಾ' ಕಾಲೇಜಿನಲ್ಲಿ ವ್ಯಾಸಂಗ ಮಾಡಲು ಅವಕಾಶವಿಲ್ಲ ಮತ್ತು ಅನುಕೂಲವಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಸರ್ಕಾರಿ ಆಜ್ಞೆಯಲ್ಲಿರತಕ್ಕದ್ದು ಸಾಮಾನ್ಯ ವಿದ್ಯಾಭ್ಯಾಸಕ್ಕೆ ಅಂದರೆ ಮುಖ್ಯವಾಗಿ ಪ್ರೈಮರಿ ವಿದ್ಯಾಭ್ಯಾಸಕ್ಕೆ ಎಲ್ಲಾ ಸೌಲಭ್ಯಗಳನ್ನೂ ನೀಡಬೇಕು ಎಂಬುದಾಗಿ. ಆ ಪ್ರಕಾರ ನೋಡುವುದಾದರೆ ಇದು ಬಹಳ ಹೆಚ್ಚು ದರ್ಜೆಯ ವಿದ್ಯಾಭ್ಯಾಸವಾಯಿತು. ಹೀಗೆ ಉನ್ನತ ಮಟ್ಟದ ವ್ಯಾಸಂಗಕ್ಕೂ ಎಲ್ಲಾ ಸೌಲಭ್ಯಗಳನ್ನೊದಗಿಸಬೇಕೆಂದು ಕಾನೂನು ಪೂರ್ವಕವಾಗಿ ಒತ್ತಾಯ ಪಡಿಸುವುದಕ್ಕಾಗುವುದಿಲ್ಲ. ಹೀಗೆ ಅಲ್ಪಸ್ವಲ್ಪ ಜನಗಳಿಗೆ ಇಂಥಾ ಉನ್ನತ ಮಟ್ಟದ 'ಲಾ' ಕಾಲೇಜಿನ ವ್ಯಾಸಂಗಕ್ಕೆ ಅನುಕೂಲತೆಗಳನ್ನು ಕಲ್ಪಿಸಿಕೊಡತಕ್ಕ ಬಗ್ಗೆ ಹಣವನ್ನು ವಿಶೇಷವಾಗಿ ವೆಚ್ಚಮಾಡುವ ಬದಲು ಆ ವೆಚ್ಚವನ್ನೆಲ್ಲಾ ಬಹು ಜನಗಳಿಗೆ ಉಪಯೋಗವಾಗುವ ಸಾಮಾನ್ಯ ವಿದ್ಯಾ ಪ್ರಸಾರದ ಬಗ್ಗೆ ಖರ್ಚು ಮಾಡತಕ್ಕದ್ದೇ ಶ್ರೇಷ್ಠವಾದುದೆಂಬುದನ್ನು ಮಾನ್ಯ ಮಾದಯ್ಯನವರೂ ಸಹ ಒಪ್ಪಿಕೊಳ್ಳುತ್ತಾರೆಂದು ಭಾವಿಸಿದ್ದೇನೆ. ಈಗಿನ ರಾಷ್ಟ್ರೀಯ ತತ್ವಗಳ ಪ್ರಕಾರ ಅವರಿಗೆ ಏನೇನು ಸಹಾಯಗಳನ್ನು ನೀಡಬೇಕೋ; ಸಂಸ್ಥಾನದಲ್ಲಿ ಎಲ್ಲೆಲ್ಲಿ ಅಂಥಾ ಸಹಾಯಗಳ ಅಗತ್ಯ ವಿಶೇಷವಾಗಿದೆಯೋ ಅಲ್ಲೆಲ್ಲಾ ಸಹಾಯ ನೀಡುವ ಬಗ್ಗೆ ಸರ್ಕಾರದವರಿಗಾಗಲೀ ಅಥವ ಸಾರ್ವಜನಿಕರಿಗಾಗಲೀ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಇದರ ಬಗ್ಗೆ ಎಲ್ಲರೂ ಏಕಕಂಠದಿಂದ ಇದಕ್ಕೆ ಒಪ್ಪುತ್ತಾರೆ. ಹಿಂದೆ ಈ ಬಾಬಿನಲ್ಲಿ 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದರು. ಆದರೆ ಈಗ ಆ ಬಗ್ಗೆ ಭಾಗ ಮಾಡಿ 13–14 ಲಕ್ಷ ಮಾತ್ರ ಖರ್ಚು ಮಾಡುತ್ತಿದ್ದಾರೆಂದು ವಾದ ಮಾಡಿರುವುದು ಅಷ್ಟು ಸರಿಯಾಗಿರುವಂತೆ ಕಾಣುವುದಿಲ್ಲ. ಆ ರೀತಿಯಾಗಿ ನಾವು ಭಾಗ ಮಾಡುವುದಕ್ಕಾಗುವುದಿಲ್ಲ. ಆದಷ್ಟು ಈ ಜನಾಂಗಗಳವರ ವಿದ್ಯಾಭಿವೃದ್ಧಿಗೆ ಹೆಚ್ಚಿನ ಗಮನ ಕೊಡಬೇಕೆಂಬುದೇ ಈಗಿನ ಸರ್ಕಾರದವರ ಉದ್ದೇಶವೂ ಆಗಿದೆ. ಈಗಿನ ಸ್ಥಿತಿಗತಿಗಳಿಗನುಸಾರವಾಗಿ ಎಷ್ಟನ್ನು ಈ ಬಾಬಿಗೆ ಒದಗಿಸಲು ಸಾಧ್ಯವಾಗಿರುತ್ತೋ ಅಷ್ಟನ್ನೂ ಒದಗಿಸಿದ್ದಾರೆ. ಇನ್ನೂ ಅವರು ಸ್ಕಾಲರ್‌ಷಿಪ್ ಮೊಬಲಗನ್ನು ಹೆಚ್ಚಿಸತಕ್ಕ ಬಗ್ಗೆ ಹೇಳಿರುವುದು ಅಷ್ಟು ನ್ಯಾಯವಾಗಿರುವಂತೆ ಕಾಣಲಿಲ್ಲ. ಆದ್ದರಿಂದ ಈ ನಿರ್ಣಯವನ್ನು ನಾನು ವಿರೋಧಿಸುತ್ತೇನಾದ ಕಾರಣ ಅವರು ದಯವಿಟ್ಟು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಕೇಂದ್ರ ಸರ್ಕಾರದವರು ಆ ಬಗ್ಗೆ ಒಂದು ಸ್ಪೆಷಲ್ ಸ್ಕಾಲರ್‌ಷಿಪ್ ಕೊಡುತ್ತಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಅದರಂತೆಯೇ ತಾವೂ ಏಕೆ ಮಾಡಬಾರದು ?

ಅಧ್ಯಕ್ಷರು.—ನಿರ್ಣಯದ ಸೂಚಕರು ಇದನ್ನು ವಾಪಸ್ಸು ತೆಗೆದುಕೊಳ್ಳಲು ಇಷ್ಟಪಡುತ್ತಾರೆಯೇ ಅಥವಾ ಇದನ್ನು ಒತ್ತಾಯ ಪಡಿಸುತ್ತಾರೆಯೇ ?

Sri M. MADIAH.—Sir, I am directed to withdraw the resolution.

The resolution was, by leave of the Assembly, withdrawn.

RESOLUTION No. 14

Committee to Suggest Retrenchments in State Expenditure.

ಅಧ್ಯಕ್ಷರು.—ಈಗ ಸಭೆಯ ಮುಂದೆ ಮಂಡಿಸಬೇಕಾಗಿರುವ ನಿರ್ಣಯವು ಜನಾಬ್ ಜೆ. ಮಹಮದ್ ಇಮಾಂರವರ ಹೆಸರಿನಲ್ಲಿದೆ. ಆದರೆ ಅವರು ಈಗ ಸಭೆಯಲ್ಲಿಲ್ಲದೆ ಇರುವುದರಿಂದ, ಅವರ ನಿರ್ಣಯವನ್ನು ಶ್ರೀಮಾನ್ ಎಲ್. ಸಿದ್ದಪ್ಪನವರು ಸಭೆಯ ಮುಂದೆ ಮಂಡಿಸಲು ಅವಕಾಶ ಕೇಳಿಕೊಂಡಿದ್ದರ ಪ್ರಕಾರ ಅವರಿಗೆ ಅವಕಾಶ ಕೊಡಲಾಗಿದೆ. ಆ ನಿರ್ಣಯವನ್ನು ಈಗ ಶ್ರೀಮಾನ್ ಎಲ್. ಸಿದ್ದಪ್ಪನವರು ಸಭೆಯ ಮುಂದೆ ಮಂಡಿಸುತ್ತಾರೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ನನ್ನ ಸ್ನೇಹಿತರಾದ ಜನಾಬ್ ಜೆ. ಮಹಮದ್ ಇಮಾಂರವರ ಪರವಾಗಿ ನಾನು ಸಭೆಯ ಮುಂದೆ ಈಗ ಮಂಡಿಸಬೇಕೆಂದಿರುವ ನಿರ್ಣಯವು ಈ ರೀತಿಯಾಗಿದೆ.—

"This Assembly is of the opinion that the Government of Mysore should constitute a Committee immediately to enquire into the financial position of the State and make recommendations for necessary retrenchments in expenditure so as to place the finances of the State on a sound basis."

ಸ್ವಾಮಿ, ಈ ನಿರ್ಣಯವನ್ನು ಪುಷ್ಟೀಕರಿಸುತ್ತ ಒಂದೆರಡು ವಿಷಯಗಳನ್ನು, ಈ ಮಾನ್ಯ ಸಭೆಯವರ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ವಿಷಯವಾಗಿ ಕಳೆದ ಬಡ್ಜೆಟ್ ಅಧಿವೇಶನದಲ್ಲೇ ಅಂದರೆ, ಪ್ರಜಾಪ್ರತಿನಿಧಿ ಸಭೆಯಲ್ಲಿ ಬಡ್ಜೆಟ್ ಭಾಷಣದ ಕಾಲದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ನಾನು ಹೇಳಿರತಕ್ಕದ್ದು ಈ ರೀತಿಯಾಗಿದೆ.—

"ಈಗಿನ ಆರ್ಥಿಕ ವಿಷಮ ಪರಿಸ್ಥಿತಿಯ ವಿಚಾರದಲ್ಲಿ ಸರ್ಕಾರದವರಿಗೆ ಇನ್ನೊಂದು ಸಲಹೆ ಮಾಡಲಿಚ್ಛಿಸುತ್ತೇನೆ. ಹಿಂದಿನ ಸರ್ಕಾರದವರು ನಮ್ಮ ಸಂಸ್ಥಾನದ ಆರ್ಥಿಕ ಸ್ಥಿತಿಯನ್ನು ಹತ್ತು ವರ್ಷ ಅಥವಾ 20 ವರ್ಷಗಳಿಗೊಂದು ಸಾರಿ ಕೂಲಂಕಷವಾಗಿ ಪರಿಶೀಲನೆ ಮಾಡಿ ಸರ್ಕಾರಕ್ಕೆ ಸಲಹೆ ಕೊಡುವುದಕ್ಕಾಗಿ ನಿಪುಣರುಗಳನ್ನು

ನೇಮಿಸಿ ಅವರಿಂದ ವರದಿಗಳನ್ನು ಪಡೆಯುವ ಪದ್ಧತಿಯನ್ನಿಟ್ಟುಕೊಂಡಿದ್ದರು. ಈಗ ಆ ರೀತಿ ಮಾಡಬೇಕಾದ ಸನ್ನಿವೇಶ ಒದಗಿದೆ. ಇದನ್ನು ತಾವು ಅಂಗೀಕರಿಸುತ್ತೀರೆಂದು ನಂಬಿದ್ದೇನೆ. ಈಗಲೂ ಕೇಂದ್ರಸರ್ಕಾರದಿಂದ ನಿಪುಣರನ್ನು ಕರೆಯಿಸಿ ಅವರು ಕೂಲಂಕಷವಾಗಿ, ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಪರಿಶೀಲನೆಮಾಡಿ ಯಾವ ಯಾವ ಬಾಬಿನಲ್ಲಿ ಖರ್ಚುಗಳನ್ನು ತಗ್ಗಿಸಬಹುದು ಮತ್ತು ಯಾವ ಯಾವ ಬಾಬಿನಲ್ಲಿ ಅದಾಯವನ್ನು ಹೆಚ್ಚಿಸಬಹುದೆಂಬ ಬಗ್ಗೆ ಅವರಿಂದ ಸಲಹೆಯನ್ನು ತೆಗೆದುಕೊಳ್ಳಿ, ಮಾನ್ಯ ಅರ್ಥಿಕ ಸಚಿವರು ಅವರ ಭಾಷಣದಲ್ಲಿ ಎಕಾನಮಿ ಆಫೀಸರ್ ಅದನ್ನು ಪರಿಶೀಲಿಸಿ ವರದಿ ಕೊಟ್ಟಿದ್ದಾರೆ, ಅದು ಮುದ್ರಣದಲ್ಲಿದೆ ಎಂದು ಹೇಳಿದರು. ಅವರು ಸಿವಿಲ್ ಸರ್ವಿಸ್ ಅಧಿಕಾರಿಗಳು. ಆಡಳಿತದಲ್ಲಿ ಅನುಭವವುಳ್ಳವರು ಅವರು ಆಡಳಿತದಲ್ಲಿ ಯಾವ ಯಾವ ಬಾಬಿನಲ್ಲಿ ಖರ್ಚನ್ನು ಉಳಿಸಬಹುದೆಂಬ ಸಲಹೆಗಳನು ಕೊಟ್ಟಿರುವುದೇನೋ ಸರಿ. ಈಗ ತಮಗೆ ಗೊತ್ತಿರುವ ಹಾಗೆ ಈವಿಷಯದಲ್ಲಿ ಸಲಹೆಮಾಡಲು ಮದ್ರಾಸ್ ಸರ್ಕಾರದವರು ಸರ್ ರಾಮಲಿಂಗಶೆಟ್ಟಿಯಾರ್ ಎಂಬ ಒಬ್ಬ ಖಾಸಗಿ ದೊಡ್ಡಮನುಷ್ಯರನ್ನೂ ಕೇಂದ್ರ ಸರ್ಕಾರದವರು ಶ್ರೀಮಾನ್ ಕಸ್ತೂರಿಬಾಯ್ ಲಾಲಾಬಾಯ್ ಎಂಬುವರನ್ನೂ ನೇಮಿಸಿ ಸಮಿತಿಮಾಡಿ ಪರಿಶೀಲನೆಮಾಡಿಸಿ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಲು ಏರ್ಪಾಡುಮಾಡಿದ್ದಾರೆ. ಅದೇ ರೀತಿ ಇಲ್ಲಿಯೂ ಸಹ ಕೈಗಾರಿಕೋದ್ಯಮಗಳಲ್ಲಿ ಅಥವಾ ಬೇರೆ ಅರ್ಥಿಕ ಕ್ಷೇತ್ರಗಳಲ್ಲಿ ಹೆಚ್ಚಿನ ಅನುಭವವುಳ್ಳಮಹನೀಯರನ್ನು ನೇಮಿಸಿ ನಮ್ಮ ಸಂಸ್ಥಾನದ ಆದಾಯ ಖರ್ಚಿನ ವಿಚಾರದಲ್ಲಿ ಸಲಹೆಯನ್ನು ತೆಗೆದುಕೊಳ್ಳುವುದು ಸೂಕ್ತವಾಗಿದೆ'' ಎಂದು ತಿಳಿಸಿದ್ದೇನೆ.

ಮೊನ್ನೆ ಕೂಡ ಈ ಸಭೆಯ ಮುಂದೆ ನಾನು ನನ್ನ ಬಜೆಟ್ ಭಾಷಣದ ಕಾಲದಲ್ಲಿ ಏನು ತಿಳಿಸಿರುತ್ತೇನೆಂದರೆ, ನಮ್ಮ ಮೈಸೂರು ಸರ್ಕಾರಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಒಪ್ಪಂದವಾಗಿರತಕ್ಕ ಅರ್ಥಿಕ ವಿಲೀನೀಕರಣದ ಬಗ್ಗೆ ಈಗಾಗಲೇ ಒಂದು ಒಪ್ಪಂದಕ್ಕೆ ಬಂದಿದ್ದಾರೆ. ಅದರ ಪ್ರಕಾರ ನಮ್ಮ ಸಂಸ್ಥಾನಕ್ಕೆ ಬರುತ್ತಿದ್ದ ಆದಾಯ ಈದಿವಸ ಖಚಿತವಾಗಿ ಕಡಿಮೆಯಾಗದೆ ಇದ್ದಾಗ್ಯೂ ಇನ್ನು 5ವರ್ಷಗಳ ತನಕ ಒಂದು ರೀತಿ ಯಲ್ಲಿ ನಡೆದುಕೊಂಡು ಹೋಗಿ ಅಲ್ಲಿಂದ ಮುಂದಿನ 10ವರ್ಷಗಳ ತನಕ ಸ್ವಲ್ಪ ಸ್ವಲ್ಪ ಪ್ರತಿ ವರ್ಷವೂ ಕಡಿಮೆಯಾಗುತ್ತಾ ಹೋಗಿ ಕೊನೆಗೆ ಅದು ಸಂಪೂರ್ಣವಾಗಿ ನಮಗೆ ನಿಂತುಹೋಗುತ್ತದೆಂದು ಒಂದು ಸೂಚನೆಯನ್ನು ಕೊಟ್ಟಿದ್ದೇನೆ. ಹೀಗೆ ನಮಗೆ ಈ ಅರ್ಥಿಕ ವಿಲೀನೀಕರಣದ ಒಪ್ಪಂದದ ಮೂಲಕ ಮೊದಲು ಬರುತ್ತಿದ್ದ ಉತ್ಪತ್ತಿಗಿಂತ ಈಗ ಎಷ್ಟು ಕಡಿಮೆಯಾಗಿರುತ್ತದೋ ಅಷ್ಟನ್ನು ಸರಿಪಡಿಸಿಕೊಳ್ಳಲು ಮೊದಲು ಪ್ರಯತ್ನಮಾಡಬೇಕಾಗಿರುತ್ತೆಂದು ನಾನು ಸೂಚಿಸಿದ್ದೇನೆ.

ಇನ್ನು ನಮಗೆ ಸೆಕ್ಯೂರಿಟೀಸ್‌ಗಳಿಂದ ಬರುತ್ತಿದ್ದ ಬಡ್ಡಿಯು ಸುಮಾರು 69-70ಲಕ್ಷವಿತ್ತು. ಈಗ ಅದು 29ಲಕ್ಷಕ್ಕೆ ಇಳಿದಿದೆ ನಾನು ಆ ದಿವಸವೇ ತಿಳಿಸಿರುವ ಹಾಗೆ ಇದು ಇನ್ನು ಮುಂದಿನ ವರ್ಷಗಳಲ್ಲಿ ನಮಗೆ ಇನ್ನೂ ಕಡಿಮೆಯಾಗತಕ್ಕ ಸಂಭವವಿದೆ. ಅಥವಾ ಇದೂ ಸಂಪೂರ್ಣವಾಗಿ ನಿಂತುಹೋದರೂ ಹೋಗಬಹುದು. ಅ ದಿವಸವೇ ಮಾನ್ಯ ಅರ್ಥಿಕ ಸಚಿವರು ಭಾಷಣಮಾಡುತ್ತ ಮುಂದಿನ ವರ್ಷ ಅವರು 6 ಕೋಟಿ ರೂಪಾಯಿಗಳ ಸೆಕ್ಯೂರಿಟೀಸನ್ನು ಮಾರಾಟಮಾಡತಕ್ಕ ಸಂಭವವಿರುವುದಾಗಿ ತಿಳಿಸಿದ್ದಾರೆ. ಆ ಕಾರಣದಿಂದಲೂ ನಮಗೆ ಮುಂದಿನ ವರ್ಷದಲ್ಲಿ ಅಂದರೆ 1951-52ನೆಯ ಸಾಲಿಗೆ ಈ ಬಾಬಿನಿಂದ ಯಾವ ಬಡ್ಡಿಯ ಹಣವೂ ಬರುವುದಿಲ್ಲವೆಂಬುದಾಗಿ ಖಚಿತವಾಗಿ ಕಂಡುಬರುತ್ತದೆ.

ಇನ್ನು ಎಕ್ಸೈಜ್ ಬಾಬಿನಲ್ಲಿ ಪ್ರೊಹಿಬಿಷನ್ ಪಾಲಿಸಿಯಿಂದ ನಮಗೆ ಮೊದಲು 1ಕೋಟಿ 88ಲಕ್ಷದ 90ಸಾವಿರರೂಪಾಯಿಗಳ ವರಮಾನ ಬರುತ್ತಿದ್ದದ್ದು ಈಗಾಗಲೇ ಬಹಳ ಹಣ ಕಡಿಮೆಯಾಗಿದೆ. ಇನ್ನು ಮುಂದೆಯೂ ಅಷ್ಟೇ ವರಮಾನ ಈ ಬಾಬಿನಿಂದ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಮೊನ್ನೆಯ ದಿವಸ ಪಾನನಿರೋಧದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಆ ಬಗ್ಗೆ ಮಾನ್ಯ ರೆವಿನ್ಯೂ ಸಚಿವರವರು ಉತ್ತರ ಕೊಡುತ್ತ ಈ ಪಾನನಿರೋಧದ ಪದ್ಧತಿಯನ್ನು ನಾವಿನ್ನು ಸದ್ಯಕ್ಕೆ ಮುಂದುವರಿಸುವುದಿಲ್ಲ, qualitative improvement ಗಾಗಿ ಸ್ವಲ್ಪ ಸಾವಕಾಶವಾಗಿ ಮುಂದುವರಿಯಾಗುತ್ತದೆಂದೂ ಹೇಳಿದ್ದಾರೆ. ಈ ಅಂಶವನ್ನು ಸಹ ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಇದರಿಂದ ನಮಗೆ ಬರುತ್ತಿದ್ದ 2ಕೋಟಿ ರೂಪಾಯಿಗಳು ಈಗ ನಿಂತುಹೋದಂತೆಯೇ ಆಗಿದೆ.

ಇನ್ನು ಗೋಲ್ಡ್ ಡ್ಯೂಟಿ ಆಕ್ಟನ್ನು ಬೇರೆ ತಾವು ಈಗ ರಿಪೀಲ್ ಮಾಡಿದ್ದೀರಿ. ಇದರ ಪರವಾಗಿ............

ಅಲ್ಲದೆ ಚಿನ್ನದ ಮೇಲಣ ಸುಂಕದ ಕಾನೂನನ್ನು ರದ್ದುಮಾಡಿದ್ದರಿಂದ ನಮಗೆ ಹಿಂದಿನ ಸಾಲಿನಲ್ಲಿ ಎಷ್ಟು ಬರುತ್ತಿತ್ತೋ ಆ ವರಮಾನ ಕೂಡ ಕಡಿಮೆಯಾಗಿದೆ. ಹೀಗೆ ಫೈನ್ಯಾನ್ಷಿಯಲ್ ಇಂಟಿಗ್ರೇಷನ್ ಒಪ್ಪಂದವಲ್ಲದೆ ಅನೇಕ ಬಾಬುಗಳಿಂದ ನಮ್ಮ ಸಂಸ್ಥಾನಕ್ಕೆ ಏನು ಬರುತ್ತಿತ್ತೋ ಆ ವರಮಾನ ಸುಮಾರು 3-3½ಕೋಟಿ ರೂಪಾಯಿಗಳಷ್ಟು ಕಡಿಮೆಯಾಗುವ ಸಂಭವವಿದೆ. ನಮ್ಮ ಖರ್ಚುಬಾಬು ಕೂಡ ನಾನು ಆ ದಿವಸ ಹೇಳಿದ ಹಾಗೆ ಹೆಚ್ಚಾಗುತ್ತಿದೆ. ಈ ಸರ್ಕಾರ ಹಿಂದಿನಸರ್ಕಾರಗಳು ಇದ್ದ ಹಾಗೆ ಒಂದು Police State ಅಲ್ಲ. ಜನರಲ್ಲಿ ಸುಮ್ಮನೆ ನೆಮ್ಮದಿ ಶಿಸ್ತು ಉಂಟುಮಾಡಿದರೆ ಆಯಿತೆಂದು ಹೇಳಿ ಪ್ರಜೆಗಳನ್ನು ಅಲ್ಪಸ್ವಲ್ಪದರಿಂದ ತೃಪ್ತಿ ಪಡಿಸುವ ಹಾಗಿಲ್ಲ. ಈಗ ವೈದ್ಯ ಸೌಕರ್ಯ, ವಿದ್ಯಾಭ್ಯಾಸದ ಏರ್ಪಾಡು, ಗ್ರಾಮಾಭಿವೃದ್ಧಿ ಕಾರ್ಯಕ್ರಮ ಇತ್ಯಾದಿ ಪ್ರತಿಯೊಂದರ ಬಗ್ಗೆಯೂ ಏನೇನೂ ಖರ್ಚುಮಾಡುತ್ತಿದ್ದೇವೋ ಅದನ್ನು ವರ್ಷ ವರ್ಷವೂ ಹೆಚ್ಚು ಮಾಡಬೇಕಾದ ಪ್ರಮೇಯವಿದೆ. ಹೀಗೆ ಒಂದು ಕಡೆ ಕಮ್ಮಿಯಾಗುವ ವರಮಾನ ಇನ್ನೊಂದು ಕಡೆ ಹೆಚ್ಚಾಗುತ್ತಿರುವ ಖರ್ಚು, ಇದನ್ನು ನೋಡಿದರೆ ನಾವು ಸುಮ್ಮನೆ ಕುಳಿತುಕೊಳ್ಳುವ ಹಾಗಿಲ್ಲ. ಆ ದೃಷ್ಟಿಯಿಂದ ಈಗ ಜನಾಬ್ ಇಮಾಂರವರು ನನಗೆ ಮಂಡಿಸ ಮಾಡಬೇಕೆಂದು ಕೊಟ್ಟಿರುವ ಸೂಚನೆಯನ್ನು ಸರ್ಕಾರದವರು ಅಂಗೀಕರಿಸಿ ಅದರಂತೆ ಒಂದು ಸಮಿತಿಯನ್ನು ರಚಿಸಿ ಯಾವ ಯಾವ ಬಾಬುಗಳ ವರಮಾನವನ್ನು ಹೆಚ್ಚುಮಾಡಬಹುದು ಯಾವ್ಯಾವುದರಲ್ಲಿ ಖರ್ಚನ್ನು ಕಡಿಮೆ ಮಾಡಬಹುದು ಎಂಬ ವಿಷಯದಲ್ಲಿ ನಿಪುಣರ ಸಲಹೆಯನ್ನು ಪಡೆಯುವುದಕ್ಕೆ ತಕ್ಕ ಏರ್ಪಾಡು ಮಾಡುತ್ತಾರೆಂದು ನಾನು ನಂಬಿ ಇದನ್ನು ಸಭೆಯ ಮುಂದಿಡುತ್ತೇನೆ. ಮಾನ್ಯ ಸದಸ್ಯರೆಲ್ಲರೂ ಇದನ್ನು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Resolution moved: "That this Assembly is of the opinion that the Government of Mysore should constitute a Committee immediately to enquire into the financial position of the State and make recommendations far necessary retrenchments in expenditure so as to place the finances of the State on a sound bassis."

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ. ಈಗ ಮೈಸೂರು ದೇಶದ ಆರ್ಥಿಕ ವಿಲೀನೀಕರಣದ ವಿಚಾರದಲ್ಲಿ ನಮ್ಮ ಮುಖ್ಯಮಂತ್ರಿಗಳೂ ಮತ್ತು ಆರ್ಥಿಕ ಸಚಿವರೂ ಕೂಡ ಬಹಳ ಶ್ಲಾಘನೀಯವಾದ್ದು ಒಳ್ಳೆಯದು ಎಂದು ಹೇಳಿಕೊಂಡರು. ಆದರೂ ನಾನು ಅದನ್ನು ಒಪ್ಪತಕ್ಕ ಸ್ಥಿತಿಯಲ್ಲಿಲ್ಲ. ಎಲ್ಲಾ ರೀತಿಯಲ್ಲೂ ಕೂಡ ಅದು ನಮ್ಮ ಅಭ್ಯುದಯಕ್ಕೆ ಅಡ್ಡ ಬರುತ್ತದೆಯೇ ಹೊರತು ನಮ್ಮ ಹಣಕಾಸಿನ ಸ್ಥಿತಿಯನ್ನು ಉತ್ತಮವಾಡುವಂತಿಲ್ಲ. ಏಕೆಂದರೆ ನಾವು ಬಿಟ್ಟು ಕೊಟ್ಟರತಕ್ಕ ಇಲಾಖೆಗಳೆಲ್ಲಾ ವರ್ಷ ವರ್ಷ ಹೆಚ್ಚು ಹೆಚ್ಚು ವರಮಾನ ಕೊಡುವಂಥವುಗಳು. ನಮಗೆ ಉಳಿದಿರುವುವುಗಳು ಹಾಗಲ್ಲ. ಉದಾಹರಣೆಗೆ ಭೂಗಂದಾಯ ಈಗ ಮೂವತ್ತು ವರ್ಷದಲ್ಲಿ ಎಷ್ಟಿತ್ತೋ ಈಗಲೂ ಸುಮಾರು ಅಷ್ಟೇ ಇದೆ. ಆದರೆ ಅದೇ ವರಮಾನ ತೆರಿಗೆ ನೋಡಿ. ಈಗ ನಾವು ಕೊಡುವ ತೆರಿಗೆ ದರವನ್ನು ಮುಂದೆ ಕೇಂದ್ರದ ತೆರಿಗೆಯ ದರಕ್ಕೆ ಏರಿಸಿದರೆ ಆಗ ಬರುವ ತೆರಿಗೆ ಇದಕ್ಕೆ ಎರಡರಷ್ಟಾಗುತ್ತದೆ. ಆದರೂ ಅವರು ಮಾತ್ರ ನಮಗೀಗ ಕೊಡುತ್ತಿರುವಷ್ಟು ವರಮಾನ ತೆರಿಗೆಯನ್ನು ಕೊಡುತ್ತಾರೆ ಅದೇ ರೀತಿ ರೈಲ್ವೆಯಲ್ಲಿ ಒಂದು ಕೋಟಿ ರೂಪಾಯಿಗಳು ವರಮಾನ ಬರುತ್ತಿತ್ತು. 7½ಕೋಟಿ ರೂಪಾಯಿಗಳ ಬಂಡವಾಳಕ್ಕೆ ಒಂದುಕೋಟಿ ರೂಪಾಯಿನಷ್ಟು ಉತ್ಪತ್ತಿ ತರುವ ಸಾಧನ ಇದು. ಇದೂ ಹೋಯಿತು! ಆಗಲಿ ಒಪ್ಪೋಣ. ಆದರೆ ಯಾವ ರೀತಿ ನಮ್ಮ ಆರ್ಥಿಕ ಸ್ಥಿತಿಗೆ ತೊಂದರೆ ಬರುತ್ತದೆ, ಅದಕ್ಕೆ ಯಾವ ರೀತಿ ಪರಿಹಾರ ಮಾಡುತ್ತಾರೆಂದು ನಮಗೆ ಗೊತ್ತಾಗುವುದಿಲ್ಲ. ನಮಗೆ ತೊಂದರೆಯಾಗುತ್ತದೆಂಬುದನ್ನು ಮುಚ್ಚಿ ಮಾತನಾಡುವುದರಿಂದ ಪ್ರಯೋಜನವಿಲ್ಲ. ನಮಗೆ ಈ ಏಪ್ರಿಲ್ ತಿಂಗಳಿಂದ ಪೋಸ್ಟಲ್ ಸೌಲಭ್ಯವೂ ಹೋಯಿತು. ಸುಮಾರು ½ಕೋಟಿ ರೂಪಾಯಿ ಇದರಿಂದ ಹೋಗುತ್ತದೆ.

ಶ್ರೀ ಎಚ್. ಸಿದ್ದಯ್ಯನವರು (ರೆವಿನ್ಯೂ ಸಚಿವರು).—ಮಾತ್ರ ಹೇಳುತ್ತೀರಿ. ಅತ್ತಕಡೆಯಿಂದ ಬರುವುದನ್ನು ಹೋಗುವುದನ್ನು ಹೇಳುವುದೇ ಇಲ್ಲ!!

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ) — ಹೋಗುವುದನ್ನು ಹೇಳುವುದು ನಮ್ಮ ಕರ್ತವ್ಯ.

ಶ್ರೀ ಬಿ. ಹುಚ್ಚೇಗೌಡರು —ಇಲ್ಲಿಯವರೆಗೂ ನಮಗಿದ್ದ ಪೋಸ್ಟಲ್ ಅನುಕೂಲತೆ ತಪ್ಪಿಹೋಯಿತು. ಸರ್ಕಾರಿ ಪಟೇಲನಿಗಾದರೂ ನಮ್ಮ ಸರ್ಕಾರದವರಿಗೆ ಕಾಗದ ಬರೆಯುತ್ತೇನೆಂಬ ಒಂದು ಭಾವನೆ ಇತ್ತು. ಈಗ ಹಾಗಲ್ಲ. ಅವರು ಒಬ್ಬ ಸಾಮಾನ್ಯ ಮನುಷ್ಯನಂತೆ ಪತ್ರ ವ್ಯವಹಾರಕ್ಕೆ ಕಾಸು ಕೊಡಬೇಕಾಗುತ್ತದೆ. ಆದ್ದರಿಂದ ಒಂದು ಕಮಿಟಿ ಮಾಡಿ ಆ ಮೂಲಕ ನಮ್ಮ ಸ್ಥಿತಿಗತಿಗಳಿಗೆ ಯಾವ ರೀತಿ ಧಕ್ಕೆ ಬರುತ್ತಿದೆ ಅದನ್ನು ಎಷ್ಟರ ಮಟ್ಟಿಗೆ ಸರಿಪಡಿಸಬಹುದೆಂಬುದನ್ನು ಯೋಚನೆಮಾಡಬೇಕಾಗಿದೆ. ಅಲ್ಲದೆ, ಈಗ ರಿಟ್ರೆಂಚ್‌ಮೆಂಟಿಗೆ ಎಷ್ಟೋ ಅವಕಾಶವಿದೆ. ಎಕಾನಮಿ ಆಫೀಸರ ರಿಪೋರ್ಟು ಬಂದು 1½ವರ್ಷವಾದರೂ ಏನೂ ಮಾಡಿಲ್ಲ. ಈ ಕಮಿಟಿಯನ್ನು ಮಾಡಿ ವರದಿಯನ್ನು ತರಿಸಿಕೊಂಡರೂ ಇದೂ ಅದೇ ರೀತಿ ಆಗಬಹುದೆಂದು ತಾವು ಭಾವಿಸಬಹುದು. ಆದರೆ ಹಿಂದೆ ರಿಟ್ರೆಂಚ್‌ಮೆಂಟ್ ಆಫಿಸರು ಎಂದು ಒಬ್ಬರು ಮಾತ್ರ ಇದ್ದದ್ದರಿಂದ ಏನೂ ಆಗಲಿಲ್ಲ. ಈಗಲಾದರೂ ಕಮಿಟಿ ಮಾಡಿದರೆ ಅದು ತನ್ನ ಸಲಹೆಗಳನ್ನು ಕಾರ್ಯರೂಪಕ್ಕೆ ತರುವಷ್ಟು ಅಧಿಕಾರವುಳ್ಳ ಸಮಿತಿಯಾಗಿರಬೇಕೆಂದು ಹೇಳುತ್ತೇನೆ. ಈಗಾಗಲೇ ಎಷ್ಟೋ ಇಲಾಖೆಗಳನ್ನು ತೆಗೆಯಬಹುದಾಗಿತ್ತು. ಇನ್ನೂ ಏನೂ ಮಾಡಿಲ್ಲ. ಫಾರೆಸ್ಟ್ ಇಲಾಖೆಯಲ್ಲಿ ಇವತ್ತಿಗೂ ಚೀಫ್‌ಕನ್ಸರ್ವೇಟರ್ ಎಂದು, ಕನ್ಸರ್ವೇಟರ್ ಎಂದು ಇಬ್ಬರು ಆಫೀಸರುಗಳು ಇದ್ದಾರೆ. ಇದೇ ರೀತಿ ಸರ್ವೇಆಫೀಸರುಗಳನ್ನು, ಡೆವಲಪ್‌ಮೆಂಟ್ ಆಫೀಸರುಗಳನ್ನು ತೆಗೆಯುವುದಕ್ಕೆ ಅವಕಾಶವಿತ್ತು. ಹೀಗೆ ದೇಶದ ಹಿತದೃಷ್ಟಿಯಿಂದ ಯಾವ ಯಾವ ಕಾರ್ಯಕ್ರಮಗಳನ್ನು ಅನುಸರಿಸಬೇಕೆಂಬ ಬಗ್ಗೆ ಅವಶ್ಯಕವಾದ ಸಲಹೆಗಳನ್ನು ಪರಿಶೀಲನೆಮಾಡಿ ಅದರ ಸಾಧಕ ಬಾಧಕಗಳನ್ನು ನೋಡಿ ಜಾಗ್ರತೆ ಕೈಕೊಳ್ಳಬೇಕಾದ್ದು ಸರ್ಕಾರದವರ ಕರ್ತವ್ಯ. ಆದ್ದರಿಂದ ಸರ್ಕಾರದವರು ಈ ನಿರ್ಣಯವನ್ನೊಪ್ಪಿಕೊಂಡು ಅದರಂತೆ ನಡೆಸುತ್ತಾರೆಂದು ನಂಬಿ ಈ ನಿರ್ಣಯವನ್ನು ಒತ್ತಾಯಮಾಡುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಸಂಸ್ಥಾನದ ಆದಾಯ ಜಾಸ್ತಿಯಾಗಬೇಕೆಂಬುದರಲ್ಲಿ ಮತ್ತು ಆಡಳಿತ ಖರ್ಚು ಕಡಿಮೆ ಮಾಡಬೇಕೆಂಬುದರ ವಿಷಯದಲ್ಲಿ ವಿರೋಧ ಪಕ್ಷದವರಿಗೂ ನಮಗೂ ಭಿನ್ನಾಭಿಪ್ರಾಯವಿಲ್ಲ. ಸರ್ಕಾರದವರು ಆಡಳಿತದ ಖರ್ಚು ವೆಚ್ಚಗಳನ್ನು ಯಾವ ರೀತಿ ಕಡಿಮೆಮಾಡಬೇಕೆಂಬುದರ ಬಗ್ಗೆ ವರದಿಯನ್ನು ಕಳುಹಿಸಿಕೊಡಬೇಕೆಂದು ಒಬ್ಬ ಎಕಾನಮಿ ಆಫೀಸರನ್ನು ನೇಮಿಸಿದ್ದರು. ಅದರಂತೆ ಅವರು ಈಗಾಗಲೇ ತಮ್ಮ ವರದಿಯನ್ನು ಸರ್ಕಾರದವರಿಗೆ ಕಳುಹಿಸಿಕೊಟ್ಟಿರುವುದು ಎಲ್ಲರಿಗೂ ಗೊತ್ತಿದೆ. ಆ ವರದಿಯ ಮೇಲೆ ಅನೇಕ ಕಾರ್ಯಕ್ರಮಗಳನ್ನು ಕೈಕೊಂಡು ಖರ್ಚುಗಳನ್ನು ಕಡಿಮೆ ಮಾಡುತ್ತಿದ್ದಾರೆಂಬುದೂ ನಮ್ಮ ಮುಂದಿಟ್ಟಿರುವ ಬಡ್ಜೆಟ್ಟಿನಿಂದ ಗೊತ್ತಾಗುತ್ತದೆ.

ಒಬ್ಬ ಸದಸ್ಯರು —ಇಪ್ಪತ್ತುಮೂರು ರೂಪಾಯಿಗಳಷ್ಟು ಕಡಿಮೆಮಾಡಿದ್ದಾರೆ!!

ಶ್ರೀ ಕಡಿದಾಳ್ ಮಂಜಪ್ಪನವರು.—ಹೀಗಿರುವಾಗ ಈಗ ಮತ್ತೆ ಬೇರೊಂದು ಸಮಿತಿಯನ್ನು ಏರ್ಪಾಡುಮಾಡಬೇಕು, ಅವರು ವರದಿಯನ್ನು ಮಾಡಬೇಕು, ಅದರ ಮೇಲೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳಿದರೆ ಎಷ್ಟೊಂದು ಕಾಲವಿಳಂಬಕ್ಕೆ ಕಾರಣವಾಗುತ್ತದೆಂಬುದನ್ನು ನೋಡಬೇಕು. ಸಮಿತಿಯವರು ವರದಿಯನ್ನು ತಯಾರಿಸಬೇಕಾದರೆ ಅವರು ಮುಂಚೆ ಎಲ್ಲಾ ವಿಷಯಗಳನ್ನೂ ಕೂಲಂಕಷವಾಗಿ ಪರಿಶೀಲನೆಮಾಡಿ, ಅವಶ್ಯಕ ತೋರಿದರೆ ಪ್ರವಾಸವನ್ನು ಕೈಕೊಂಡು ಎಲ್ಲಾ ಜಿಲ್ಲಾ ಆಡಳಿತವನ್ನೂ ತನಿಖೆಮಾಡಿ ಆಮೇಲೆ ಮಾಡಬೇಕು. ಇದೆಲ್ಲಾ ಆಗಬೇಕಾದರೆ ಕನಿಷ್ಠಪಕ್ಷ ಒಂದುವರ್ಷಬೇಕು. ಇದೆಲ್ಲಾ ಆ ಮೇಲೆ ನಾವು, ಸಂಸ್ಥಾನದ ಲೆಜಿಸ್ಲೇಚರ್ ಆಗಿ ಅದನ್ನು ಪರಿಶೀಲನೆ ಮಾಡುವುದಿದ್ದೇ ಇದೆ.

....

ಶ್ರೀ ಎಲ್. ಸಿದ್ದಪ್ಪನವರು.— ನಾವೇನೂ ಈಗ ಎಕನಾಮಿ ಆಫೀಸರು ಹೇಳಿರುವ ಕಾರ್ಯಕ್ರಮಗಳನ್ನು ಬಿಟ್ಟುಬಿಡಬೇಕೆಂದು ಹೇಳುತ್ತಿಲ್ಲ. ಈ ನಿರ್ಣಯದ ಮೂಲಕ ತಾವಿದನ್ನೊಪ್ಪಿ ಒಂದು ಸಮಿತಿಯನ್ನು ಮಾಡಿ, ನಮ್ಮ ಹಣಕಾಸಿನ ಸ್ಥಿತಿಯನ್ನು ಪರಿಶೀಲಿಸಿ ಅವರಿಂದ ಒಂದು ವರದಿಯನ್ನು ತೆಗೆದುಕೊಳ್ಳಬೇಕೆಂಬುದೇ ನನ್ನ ಅಭಿಪ್ರಾಯ.

ಶ್ರೀ ಕಡಿದಾಳ್ ಮಂಜಪ್ಪನವರು.—ಇಷ್ಟು ಕಾಲ ವಿಳಂಬಮಾಡುವುದು ಸರಿಯಲ್ಲ. ಎಕಾನಮಿ ಆಫೀಸರಿಂದ ಸರ್ಕಾರಕ್ಕೆ ವರದಿ ಹಿಂದೆಯೇ ಬಂದಿದೆ. ಅಲ್ಲದೆ ಮೊನ್ನೆ ಬಡ್ಜೆಟ್‌ಮೇಲೆ ಚರ್ಚೆಯಾದಾಗಲೂ ಸಹ ಯಾವರೀತಿ ಉತ್ಪತ್ತಿಯನ್ನು ಹೆಚ್ಚಿಸಿ ಖರ್ಚು ಕಡಮೆ ಮಾಡಬಹುದು ಎಂಬುದನ್ನು ವಿವರವಾಗಿ ಹೇಳಿದ್ದೇವೆ.

ಆದ್ದರಿಂದ ಅದನ್ನು ಗಮನಕ್ಕೆ ತೆಗೆದುಕೊಂಡು ಖರ್ಚು ಮಾಡುವುದನ್ನು ಕಡಿಮೆಮಾಡಿ ಆದಾಯವನ್ನು ಹೆಚ್ಚಿಸುವುದಕ್ಕೆ ಪ್ರಯತ್ನಪಡುವುದು ಸೂಕ್ತ. ಸಮಿತಿಯು ಅನಾವಶ್ಯಕ ಎಂದು ಸಲಹೆ ಮಾಡುತ್ತೇನೆ.

ಶ್ರೀ ಕೆ. ಸಂಪಂಗಿರಾಮಯ್ಯನವರು (ಕೋಲಾರ ಜಿಲ್ಲೆ).—ಈ ರೀತಿಯಲ್ಲಿರುವ ನಿರ್ಣಯವನ್ನು ಒಪ್ಪುವುದಕ್ಕಾಗುವುದಿಲ್ಲ. 'The sting is in the tail' ಎಂಬ ರೀತಿಯಲ್ಲಿರುವ ಈ ನಿರ್ಣಯವನ್ನು ಒಪ್ಪಿದರೆ ಈಗ ನಮ್ಮ ಹಣಕಾಸಿನ ಪರಿಸ್ಥಿತಿ ಭದ್ರವಾಗಿಲ್ಲ ಎಂದು ಹೇಳಿದಂತಾಗುತ್ತದೆ. ಈಗ ಹಣಕಾಸಿನ ಸ್ಥಿತಿ ಭದ್ರವಾಗಿರುವುದರಿಂದ ಕೇವಲ ಉತ್ಪ್ರೇಕ್ಷೆಯ ಭಾವನೆಯು ಇದರಿಂದ ವ್ಯಕ್ತಪಡುತ್ತದೆ. ಹೀಗೆ ಹೇಳುವುದಕ್ಕೆ ಬದಲಾಗಿ ಖರ್ಚುಮಾಡಿರುವ ಹಣಕ್ಕೆ ತಕ್ಕ ಪ್ರತಿಫಲವಿಲ್ಲ. ಆದ್ದರಿಂದ ಆಫೀಸರುಗಳನ್ನೂ, ಅನಾವಶ್ಯಕವಾದ ಇಲಾಖೆಗಳನ್ನೂ ಮತ್ತು ಸಮಿತಿಗಳನ್ನೂ ವಜಾಮಾಡಬೇಕು ಎಂದು ಹೇಳಿದ್ದರೆ ಅದನ್ನು ಸರ್ವಾನುಮತದಿಂದ ಒಪ್ಪಬಹುದಾಗಿತ್ತು. ಈಗ ಈ ನಿರ್ಣಯದ ಪ್ರಕಾರ 'ನಮ್ಮ ದೇಶದಲ್ಲ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ, ಅದನ್ನು ಕ್ರಮಪಡಿಸಲು ಒಂದು ಸಮಿತಿ ಏರ್ಪಾಡು ಮಾಡಬೇಕು' ಎಂದು ಹೇಳಿದರೆ ಪರಿಣಾಮ ಬಹಳ ವಿಪತ್ಕಾರಕವಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು.—ಇದಕ್ಕಿಂತ ರೋಗವನ್ನು ಮುಚ್ಚಿಕೊಳ್ಳುವುದು ಬಹಳ ವಿಪತ್ಕಾರಕ.

ಶ್ರೀ ಕೆ. ಸಂಪಂಗಿರಾಮಯ್ಯನವರು.—ಖಾಯಿಲೆಯೇ ಇಲ್ಲ; ಇದ್ದರೆ ಒಪ್ಪಬಹುದಾಗಿತ್ತು. ಆದ್ದರಿಂದಲೇ ದೇಶದಲ್ಲಿ ಹಣಕಾಸಿನ ಭದ್ರತೆಯನ್ನು ಹಾಳುಮಾಡುವ ಈ ನಿರ್ಣಯವನ್ನು ಒಪ್ಪುವುದು ಬಹಳ ವಿಪತ್ಕಾರಕವೆಂದು ಸೂಚಿಸುತ್ತೇನೆ. ಈ ರೂಪದಲ್ಲಿರುವ ನಿರ್ಣಯವನ್ನು ಸರ್ವಥಾ ಒಪ್ಪುವುದಕ್ಕಾಗುವುದಿಲ್ಲ.

Sri L. SIDDAPPA.—I have urged all the points in favour of the resolution in the speech I made. I do not want to add anything more.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಪ್ರಧಾನ ಸಚಿವರು).—ಮಾನ್ಯ ಅಧ್ಯಕ್ಷರೇ, ಸಂಸ್ಥಾನದ ಹಣಕಾಸಿಗೆ ಸಂಬಂಧಪಟ್ಟಹಾಗೆ ಎಲ್ಲಾ ವಿಷಯಗಳನ್ನೂ ಸಹ ವಿಂಗಡಿಸಿ ಸರ್ಕಾರದವರು ಒಂದು ವರದಿಯನ್ನು ತರಿಸಿಕೊಳ್ಳಬೇಕೆಂದೂ, ಅದಕ್ಕೆ ಒಂದು ಸಮಿತಿಯನ್ನು ಸ್ಥಾಪಿಸಬೇಕೆಂದೂ ಒಂದು ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಸಂಸ್ಥಾನದ ಹಣಕಾಸಿನ ಬಗ್ಗೆ ಆಗಲೇ ಹಲವಾರು ದಿವಸಗಳಿಂದ ದೀರ್ಘ ಚರ್ಚೆಯಾಗಿದೆ. 1950-51 ನೆಯ ಇಸವಿಯ ಬಡ್ಜೆಟ್ ಅಂದಾಜುಗಳನ್ನು ಮಂಡಿಸಿದ ಮಾನ್ಯ ಆರ್ಥಿಕ ಸಚಿವರು ಎಲ್ಲ ವಿವರಗಳನ್ನೂ ಸಹ ಸಭೆಯ ಮುಂದಿಟ್ಟಿದ್ದಾರೆ. ವಿಪುಲವಾಗಿ ಚರ್ಚೆಯಾಗಿದೆ, ಈಗ ಈ ನಿರ್ಣಯದಮೇಲೆ ಮಾನ್ಯ ಸಿದ್ದಪ್ಪನವರಾಗಲಿ ಅಥವಾ ಇತರರೇ ಆಗಲಿ ಯಾವ ಹೊಸ ಬೆಳಕನ್ನೂ ಬೀರಿಲ್ಲವೆಂದೆನಿಸುತ್ತದೆ. ಸಂಸ್ಥಾನದ ಹಣಕಾಸಿನ ಸ್ಥಿತಿಯು ಭದ್ರತೆಯಿಂದ ಕೂಡಿರಬೇಕೆನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಸರ್ಕಾರದವರು ಈ ವಿಷಯವನ್ನು ಸದಾ ಗಮನದಲ್ಲಿಟ್ಟುಕೊಂಡಿದ್ದಾರೆ. ಹಣಕಾಸಿನ ಸ್ಥಿತಿ ಯಾವ ರೀತಿಯಲ್ಲೂ ಸಹ ಕೆಡದೇ ಇರಬೇಕು. ಈ ಒಂದು ವರ್ಷವಲ್ಲ, ಅಥವಾ ಮುಂದೆ ಒಂದೆರಡು ವರ್ಷಗಳು ಮಾತ್ರವಲ್ಲ, long range point of view ನಿಂದಲೂ ಸಹ ಹಣಕಾಸಿನ ಭದ್ರತೆಯು ಚೆನ್ನಾಗಿರಬೇಕು ಎಂಬುದೇ ಸರ್ಕಾರದ ಉದ್ದೇಶ. ಆ ಉದ್ದೇಶವನ್ನು ಮನಸ್ಸಿನಲ್ಲಿಟ್ಟು ಸರ್ಕಾರದವರು ರೀತಿ ನೀತಿಗಳನ್ನು ರೂಪಿಸುತ್ತಾ ಹೋಗುತ್ತಿದ್ದಾರೆ. ಹಣಕಾಸಿನ ಸ್ಥಿತಿ ಕೆಟ್ಟು ಹೋಗಿದೆಯೆಂದು ಯಾರೂ ಭಯಪಡಬೇಕಾಗಿಲ್ಲ ಎಂದು ಈಗಾಗಲೇ ಸರ್ಕಾರದವರು ತಿಳಿಸಿದ್ದಾರೆ. ಅದನ್ನು ನಾನು ಪುನಃ ಒತ್ತಿ ಹೇಳಬೇಕಾಗಿದೆ. ಏಕೆಂದರೆ ಕ್ಯಾಪಿಟಲ್ ವರ್ಕ್ಸ್, ಯುದ್ಧಾನಂತರ ಡೆವಲಪ್‌ಮೆಂಟ್ ಯೋಜನೆಗಳು ಎಂದು ಏನು ತೆಗೆದುಕೊಳ್ಳಬೇಕಾಗಿ ಬಂತೋ, ಯಾವುದು ಪೂರ್ಣ ಮಾಡಬೇಕಾಗಿ ಬಂತೋ ಅವುಗಳಿಗೆ ಈ ಕೆಲವು ವರ್ಷಗಳಿಂದ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಬೇಕಾಗಿ ಬಂತು. ಅದೊಂದು ಕಾಲ. ಅದನ್ನು ನಿಲ್ಲಿಸುವಹಾಗಿರಲಿಲ್ಲ; ನಿಲ್ಲಿಸಲೇಬೇಕು ಎಂದು ಹೇಳುವಹಾಗಿರಲಿಲ್ಲ. ಆದ್ದರಿಂದ ಕ್ಯಾಪಿಟಲ್ ವರ್ಕ್ಸ್ ಪೂರ್ತಿಮಾಡುವುದಕ್ಕೆ ರಿಸರ್ವ್ ಹಣವನ್ನು ಉಪಯೋಗಿಸಿದ್ದಾರೆ; ಸರ್ಕಾರದ ಸೆಕ್ಯೂರಿಟಿ ಸಹ ಮಾರಲಾಗಿದೆ. ಆದರೆ ಯಾರೂ ಆ ರೂಪದಲ್ಲಿ ಆಸ್ತಿ ಕಡಮೆಯಾಯಿತೆಂದು ಭಾವಿಸಬಾರದು. ಇನ್ನೊಂದು ರೂಪದಲ್ಲಿ ಆಸ್ತಿ ಜಾಸ್ತಿಯಾಗುತ್ತಿದೆ. ಎರಿಬುದನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಕೇವಲ ಸೂಪರ್‌ಫಿಷಿಯಲ್ಲಾಗಿ ಹೇಳುತ್ತಾ ರಿಸರ್ವ್ ಇಲ್ಲ, ಸೆಕ್ಯೂರಿಟಿ ಮಾರುತ್ತಿದ್ದಾರೆ ಎಂದು ಟೀಕೆ ಮಾಡಿರುವುದಕ್ಕೆ ಸ್ವಲ್ಪವೂ ಬುಡವಿಲ್ಲ. ಅದು ಆಧಾರರಹಿತವಾದುದು ಎಂದು ಮತ್ತೊಮ್ಮೆ ಹೇಳಬೇಕಾಗಿದೆ. ಹಣವಿರುವುದನ್ನು ಸರಿಯಾದ ರೀತಿಯಲ್ಲಿ ಖರ್ಚುಮಾಡಿ ರಾಷ್ಟ್ರದ ಸಂಪತ್ತನ್ನು ಅಭಿವೃದ್ಧಿಪಡಿಸಿ ಸಂಸ್ಥಾನದ ಜನರಿಗೆ ಒಳ್ಳೆಯದನ್ನು ಮಾಡುವುದಕ್ಕೆ ಉಪಯೋಗಿಸುವುದು ಒಂದು ಉತ್ತಮವಾದ ನೀತಿ ಆ ನೀತಿಯನ್ನೇ ಈಗಿನ ಮಂತ್ರಿಮಂಡಲವು ಅನುಸರಿಸುತ್ತಿದೆ ಎಂದು ಧೈರ್ಯದಿಂದ ಮತ್ತೊಮ್ಮೆ ಇಲ್ಲಿ ತಿಳಿಸಬಯಸುತ್ತೇನೆ.

ನಾರ್ಮಲ್ ರೆವೆನ್ಯೂ ಮತ್ತು ನಾರ್ಮಲ್ ಖರ್ಚು ಇವೆಲ್ಲವನ್ನೂ ಸರಿದೂಗಿಸುವ ಅವಶ್ಯಕತೆ ಬಹಳವಾಗಿದೆ. ಯಾವುದೇ ಒಂದು ಸಂಸ್ಥಾನದ ಹಣಕಾಸಿನ ಬಡ್ಜೆಟ್ ಆಗಲಿ ಅದನ್ನೇ ಆಧಾರವಾಗಿಟ್ಟುಕೊಂಡು ವರ್ತಿಸಬೇಕಾಗಿದೆ. ಈ ಒಂದು ಮುಖ್ಯ ವಿಷಯವನ್ನು ಸರ್ಕಾರದವರು ಗಮನಿಸಿ ಬಡ್ಜೆಟ್ ಅಂದಾಜನ್ನು ತಯಾರುಮಾಡಿದ್ದಾರೆ ಎಂದು ಹೇಳಲಿಚ್ಛಿಸುತ್ತೇನೆ.

ಒಂದು ವಿಷಯವನ್ನು ಶ್ರೀ ಎಲ್. ಸಿದ್ದಪ್ಪನವರು ಹೇಳಿದ್ದಾರೆ. ಅದು ಬಹಳ ಮುಖ್ಯವಾದ ವಿಷಯ. ಈಗ ವರಮಾನದ ಬಾಬುಗಳು ಹೋಗಿವೆ, ಕೆಲವು ಮಾಯವಾಗುವ ಸಂದರ್ಭವೂ ಇದೆ ಎಂದು ಹೇಳಿದ್ದಾರೆ. ಉದಾಹರಣೆಗೆ ಮದ್ಯಪಾನ ನಿರೋಧವು ಸಂಪೂರ್ಣವಾಗಿ ಜಾರಿಗೆ ಬಂದರೆ ಸುಮಾರು ಎರಡು ಕೋಟಿ ರೂಪಾಯಿಗಳ ವರಮಾನ ಖೋತಾ ಆಗುತ್ತದೆಂದೂ, ಹಾಗೆಯೇ ಚಿನ್ನದ ಸುಂಕದ ರಿಪೀಲ್ ಆಕ್ಟು ಮಾಡಿರುವುದರಿಂದ ವರಮಾನ ಕಡಮೆಯಾಗುತ್ತದೆಂದೂ ಹೇಳಿದ್ದಾರೆ.

Sri L. SIDDAPPA.—And interest on securities also.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೀಗೆ ಮೂರು ಬಾಬುಗಳನ್ನು ಉದಹರಿಸಿ ವರಮಾನ ಕಡಮೆ ಎಂದು ಹೇಳಿದ್ದಾರೆ. ಆದರೆ ಸರ್ಕಾರದವರು ಅದನ್ನು ಮನಸ್ಸಿನಲ್ಲಿಟ್ಟೇ ವರ್ತಿಸುತ್ತಿದ್ದಾರೆಂದು ಹೇಳುತ್ತೇನೆ. ಚಿನ್ನದ ಸುಂಕದ ರದ್ದಿಯಾತಿ ವಿಚಾರದಲ್ಲಿ ಒಂದು ಮಾತು. ಹಿಂದೆ ಇದ್ದಂಥ ಆಕ್ಟಿನಿಂದ ಕೇವಲ ಸುಮಾರು ಹತ್ತು ವರ್ಷದಲ್ಲೇ ಬರುವ ವರಮಾನ ನಿಲ್ಲುತ್ತಿತ್ತು. ಈಗ ಏನು ಒಂದು ಪದ್ಧತಿಯನ್ನು ಜಾರಿಗೆ ತಂದಿದೆಯೋ

ಅದರ ದೆಶೆಯಿಂದ ಚಿನ್ನದ ಗಣಿಯು ಇನ್ನೂ 20 ವರ್ಷಗಳಾದರೂ ಇರುವುದಕ್ಕೆ ಅನುಕೂಲವಾಗಿದೆ. ಆ ಒಂದು ದೃಷ್ಟಿಯಿಂದ ಈಗಿನ ಮಂತ್ರಿಮಂಡಲವು ಒಂದು ಅನುಕೂಲವನ್ನು ಮಾತ್ರ ನೋಡಿ 5-6ವರ್ಷಗಳು ಜಾಸ್ತಿಬರುತ್ತದೆಂಬುದನ್ನು ಗಣನೆಗೆ ತೆಗೆದುಕೊಂಡಿಲ್ಲ. ಅದನ್ನು ಮುಂದೆ ಕೊಡಬೇಕೆಂದು ಹೇಳಬಹುದು. ಆವರೆ ಕೇವಲ 5-6ವರ್ಷ ಜಾಸ್ತಿ ಬಂದು ಆಮೇಲೆ 10-15 ವರ್ಷ ಏನೂ ಇಲ್ಲದೇ ಹೋಗುವುದು ಸರಿಯಲ್ಲ. ರಾಷ್ಟ್ರದ ಅಭ್ಯುದಯಕ್ಕೆ ಅನುಕೂಲವಾಗಲಿ ಎಂದು ಹೊಸ ನೀತಿಯನ್ನನುಸರಿಸಿ ಕೇವಲ ವರಮಾನ ಈಗ ಕಡಮೆಯಾದರೂ 15-2) ವರ್ಷಗಳು ಒಂದೇ ರೀತಿಯಾಗಿ ಬರಲಿ ಎಂದು ಉತ್ತೇಜನ ಕೊಟ್ಟಿದ್ದೇವೆ. ಆದ್ದರಿಂದ ನಾವು short range point of view ನಿಂದ.ಮಾಡಿಲ್ಲ; long range point of view ನಿಂದ ಮಾಡಿದ್ದೇವೆ ಎಂದು ತಿಳಿಸಬೇಕಾಗಿದೆ.

ಇನ್ನೊಂದು ವಿಷಯ. ಗೋಲ್ಡ್ ಮೈನಿಂಗ್ ಕ್ಯಾಪಿಟಲೈಜೇಷನ್ ಫಂಡ್ ವಿಚಾರ ಬಂದಿತ್ತು. ಅದು intact ಆಗಿದೆ. ಅದರಮೇಲೆ ಏನೂ ಮಾಡಿಲ್ಲ. ಈ ಚಿನ್ನದ ಗಣಿಯಿಂದ ಬರುವ ವರಮಾನ ಹೋಗುವುದಾದರೆ ಆಗ ಆ ಫಂಡು ಉಪಯೋಗವಾಗಿ ಅದರ ಮೂಲಕ ಬರುವ ವರಮಾನ ಸ್ವಲ್ಪಮಟ್ಟಿಗೆ ಸರಿತೂಗುವ ಅವಕಾಶವಿರಬೇಕು ಎಂದು ಯೋಚಿಸಿದೆ.

ಪಾನನಿರೋಧ ನೀತಿಯನ್ನು ಅನುಸರಿಸಿದುದರಿಂದ ಆಗತಕ್ಕ ನಷ್ಟವನ್ನು ಹೇಗೆ ಸರಿಮಾಡುತ್ತಾರೆಂದು ಕೇಳಿದರು. ಇದೂ ನಮ್ಮ ಗಮನದಲ್ಲಿದೆ. ಈಗ ಮಾರಾಟ ತೆರಿಗೆಯೆಂದು ವಿಧಾಯಕ ಮಾಡಿದ್ದೇವೆ. ಇದರಿಂದ ಬರಬಹುದಾದ ಪ್ರತಿಫಲವನ್ನೆಲ್ಲಾ ಸಂಪೂರ್ಣವಾಗಿ explore ಮಾಡಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಇದು ಇನ್ನೂ ಬೆಳೆಯುತ್ತದೆ. ಇದರಿಂದ ಬರತಕ್ಕ ಆದಾಯ ಇನ್ನುಮುಂದೆ ಹೆಚ್ಚಾಗುತ್ತದೆ. ಪೂರ್ಣ ಪಾನನಿರೋಧವನ್ನು ಜಾರಿಗೆ ತರುವುದರಿಂದ ಕಡಮೆಬೀಳುವ ವರಮಾನ ಇದರಿಂದ ಬರುತ್ತದೆಂಬ ನಂಬಿಕೆಯಿದೆ; ಇದರಲ್ಲಿ ಅನುಮಾನವಿಲ್ಲ.

ಇನ್ನು, ಹೊಸ ತೆರಿಗೆಗಳನ್ನು ಹಾಕಬೇಕಾಗುತ್ತದೆ. ಮಾನ್ಯ ಶ್ರೀಮಾನ್ ಸಿದ್ದಪ್ಪನವರು ಹೇಳಿದಹಾಗೆ ಡೆವಲಪ್‌ಮೆಂಟ್ ಯೋಜನೆಗಳನ್ನು ನಿಲ್ಲಿಸುವದಕ್ಕಾಗುವುದಿಲ್ಲ. ವಿದ್ಯಾಭ್ಯಾಸ, ವೈದ್ಯಸಹಾಯ, ಆರೋಗ್ಯ, ಕೈಗಾರಿಕಾಭಿವೃದ್ಧಿ ಇವುಗಳಿಗೆ ತಕ್ಕಷ್ಟು ಹಣವನ್ನೊದಗಿಸಬೇಕಾಗುತ್ತದೆ. ಇವನ್ನು ನಿಲ್ಲಿಸುವುದರಿಂದ ದೇಶಕ್ಕೆ ಒಳ್ಳೆಯದಲ್ಲವಾದಕಾರಣ ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಈ ದೃಷ್ಟಿಯಿಂದ ಹೊಸ ತೆರಿಗೆಗಳನ್ನು ಹಾಕಬೇಕಾಗಿ ಬರುತ್ತದೆ. ಎಲ್ಲಿ ವಿಧಿಯಿಲ್ಲದೆ ಹಾಕಬೇಕಾಗಿ ಬರುತ್ತದೆಯೋ ಅಲ್ಲಿ ಹಾಕಬೇಕಾಗುತ್ತದೆ. ಯಾವ ಸರ್ಕಾರವೇ ಆಗಲಿ ಹಣವನ್ನು mint ಮಾಡಿ ಉಪಯೋಗಿಸುವುದಕ್ಕಾಗುವುದಿಲ್ಲ. ಯಾವ ಯಾವ ಕಾಲದಲ್ಲಿ ಹೊಸ ತೆರಿಗೆಯನ್ನು ಹಾಕಬೇಕಾಗುತ್ತದೆಯೋ ಯಾವುದನ್ನು ಹಾಕಿದರೆ equitable taxation ಆಗುತ್ತದೆಯೋ ಅದನ್ನು ನೋಡಿಕೊಂಡು ಮುಂದುವರಿಯಬೇಕಾಗುತ್ತದೆ. ಯಾವ ಸಮಿತಿಯೇ ಆಗಲ ಈ ವಿಷಯದಲ್ಲಿ ಖಚಿತವಾದ ಸಲಹೆಗಳನ್ನು ಕೊಡುವ ಸ್ಥಿತಿಯಲ್ಲಿಲ್ಲ. ಫೈನಾನ್ಸ್ ಅಂಡ್ ಕೋಆರ್ಡಿನೇಷನ್ ಸಮಿತಿಯವರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಎಕಾನಮಿ ಆಫೀಸರ್‌ರವರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಕೇಂದ್ರ ಸರ್ಕಾರದವರೂ ನಮ್ಮ ಸರ್ಕಾರದವರೂ ಯಾವ ತೆರಿಗೆಗಳನ್ನು ಹೊಸದಾಗಿ ಹಾಕಬಹುದೆಂಬ ಬಗ್ಗೆ ಅನೇಕ ಸಲಹೆಗಳಿವೆ. ಈ ವಿಷಯ ಹೊಸದೇನೂ ಅಲ್ಲ. ಈಗಾಗಲೇ ಚರ್ಚೆಯಲ್ಲಿ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಹೋಟೇಲುಗಳ ಲೈಸೆನ್ಸ್ ಕೊಡುವುದರಲ್ಲಿ ವರಮಾನ ಬರುವಂತೆ ಮಾಡುವುದು, ಬಸ್ ಲೈಸೆನ್ಸ್, ಬಸ್ ಸರ್ವಿಸ್ ಲೈನ್‌ಗಳನ್ನು ಹರಾಜುಮಾಡುವುದು ಇವೆಲ್ಲವುಗಳಿಂದಲೂ ವರಮಾನವನ್ನು ಹೆಚ್ಚಿಸಬೇಕೆಂದು ಸಲಹೆಗಳು ಬಂದಿವೆ. ಸಾಧಕ ಬಾಧಕಗಳನ್ನು ಯೋಚನೆಮಾಡಿ ಮುಂದುವರಿಯುವುದಕ್ಕೆ ಸಾಕಷ್ಟು ಸಲಕರಣೆಗಳಿವೆ. ಹೀಗಿರುವಾಗ ಈ ವಿಚಾರವನ್ನು ಪರಿಶೀಲನೆಮಾಡಿ ಶಿಫಾರಸು ಮಾಡುವುದಕ್ಕೆ ಒಂದು ಸಮಿತಿ ಅನಾವಶ್ಯಕವೆಂದು ಕಾಣುತ್ತದೆ. ಒಂದು ಕಡೆ ವರಮಾನ ಕಡಿಮೆಯಾಗುವ ಸಂಭವವಿದೆ. ಇನ್ನೊಂದುಕಡೆ ಡೆವಲಪ್‌ಮೆಂಟ್ ಕೆಲಸಗಳಿಗೆ ಹೆಚ್ಚು ಹಣವನ್ನೊದಗಿಸಿ ಮಾಡುವ ಅವಶ್ಯಕತೆಯಿದೆ. ಆದಕಾರಣ ನಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳಬೇಕೆಂಬುದನ್ನು ಒಪ್ಪಬಹುದಾದರೂ ಇದಕ್ಕಾಗಿ ಒಂದು ಸಮಿತಿಯನ್ನು ರಚನೆಮಾಡುವ ಅವಶ್ಯಕತೆಯಿಲ್ಲ.

ಇನ್ನು ರಿಟ್ರೆಂಚ್‌ಮೆಂಟ್ ವಿಚಾರದಲ್ಲಿ ಒಂದು ಸಮಿತಿಯನ್ನು ಮಾಡಬೇಕೆಂದು ಶ್ರೀಮಾನ್ ಸಿದ್ದಪ್ಪನವರು ಸೂಚಿಸಿದ್ದಾರೆ. ಕಳೆದ ಅಕ್ಟೋಬರ್ ಅಧಿವೇಶನದಲ್ಲಿ ಅವರು ಸಮಿತಿ ಬೇಕೆಂದು ಹೇಳಲಿಲ್ಲ. ಒಬ್ಬರು expert ನ್ನು ನೇಮಕಮಾಡಬೇಕೆಂದು ಸೂಚಿಸಿದ್ದರು.........
....

ಶ್ರೀ ಎಲ್. ಸಿದ್ದಪ್ಪನವರು.—ನಿಪುಣರಿಂದ ಕೂಡಿದ ಸಮಿತಿಯನ್ನು ಮಾಡಬೇಕೆಂದು ಹೇಳಿದೆ.

Sri K. CHENGALARAYA REDDY.—I have got a copy of it. The wording of Resolution No. 65 was "to appoint an expert................"

Sri L. SIDDAPPA.—That resolution was not moved.

Sri K. CHENGALARAYA REDDY.—Whether it was moved or not, it does not matter.

Sri L. SIDDAPPA.—I quoted it from my budget speech...............

Sri K. CHENGALARAYA REDDY.—I am just inviting the kind attention of the Hon'ble Member and the House to the fact that the Mover of this resolution had given notice in the October Session of 1949, "that an expert of outstanding reputation in public finance be appointed, etc."

ಹೀಗೆ ಅವರಲ್ಲೇ ಭಿನ್ನಾಭಿಪ್ರಾಯವಿದೆ. ಒಂದುಸಾರಿ ಒಬ್ಬರು expert ನ್ನು ನೇಮಕಮಾಡಬೇಕೆಂದು ಅವರ ಮನಸ್ಸಿಗೆ ಹೊಳೆಯುತ್ತದೆ. ಇನ್ನೊಂದು ಸಾರಿ experts ನ್ನು ನೇಮಕಮಾಡಬೇಕೆಂದು ತೋಚುತ್ತದೆ. ಸಮಿತಿಯನ್ನು ಮಾಡಬೇಕೆಂದು ಜನಾಬ್ ಇಮಾಂರವರು ಹೇಳಿದರೆ, ಅದರಂತೆ ಮನಸ್ಸಿಗೆ ಬರುತ್ತದೆ. ಹೀಗೆ ವ್ಯತ್ಯಾಸವಾಗುತ್ತಿದೆ.

ಶ್ರೀ ಎಲ್. ಸಿದ್ದಪ್ಪನವರು.—ಅದರಲ್ಲಿ ತಪ್ಪೇನೂ ಇಲ್ಲವಲ್ಲ!

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮಾನ್ಯ ಸದಸ್ಯರು ಏಕೆ ಹೀಗಾಗುತ್ತಿದ್ದಾರೋ ನನಗೆ ಗೊತ್ತಿಲ್ಲ! ತಪ್ಪು ಎಂದು ನಾನು ಹೇಳಲೇ ಇಲ್ಲ.

ರಿಟ್ರೆಂಚ್‌ಮೆಂಟ್‌ನ ಅವಶ್ಯಕತೆ ಇದೆ. ಇದನ್ನು ಸರ್ಕಾರದವರು ಮನಗಂಡಿದ್ದಾರೆ. ಯಾವ ಯಾವ ಬಾಬಿನಲ್ಲಿ ರಿಟ್ರೆಂಚ್‌ಮಾಡಬೇಕೆಂಬ ವಿಷಯದಲ್ಲಿ ಸಲಹೆಮಾಡಲು ಒಂದು ಸಮಿತಿಯನ್ನು ನೇಮಕಮಾಡಬೇಕೆಂದು ವಾದಮಾಡಿದ್ದಾರೆ. ಹಿಂದೆ ನಮ್ಮ ದೇಶದಲ್ಲಿ ಬೇಕಾದಷ್ಟು ರಿಟ್ರೆಂಚ್‌ಮೆಂಟ್ ಸಮಿತಿಗಳು ರಚನೆಯಾಗಿವೆಯೆಂಬುದು ಗೊತ್ತೇ ಇದೆ. ಅವುಗಳ ವರದಿಗಳೂ ಇವೆ. ಈಗ ಎಕಾನಮಿ ಆಫೀಸರ ವರದಿ ಸರ್ಕಾರದವರ ತೀವ್ರಾಲೋಚನೆಯಲ್ಲಿದೆ. ಅವರ ಈ ವರದಿ ಬಂದಾಗಿನಿಂದಲೂ ಸಹ ಅದರಲ್ಲಿ ಅಡಕವಾಗಿರುವ ವಿಚಾರಗಳನ್ನು ವಿಮರ್ಶಿಸಿ ಅವರ ಸಲಹೆಗಳಲ್ಲಿ ಕೆಲವನ್ನು ಕಾರ್ಯಗತಮಾಡುತ್ತಾ ಬಂದಿದ್ದೇವೆ. ಮಾನ್ಯ ಸದಸ್ಯರಿಗೆ ನಾನು ಬಡ್ಜೆಟ್ ಚರ್ಚೆಗೆ ಉತ್ತರ ಕೊಡುವಾಗ ಹೇಳಿದುದು ಮನವರಿಕೆಯಾಗದಿದ್ದರೆ ಮತ್ತೊಮ್ಮೆ ಹೇಳುತ್ತೇನೆ. ಕಳೆದ ಆರು ತಿಂಗಳಿಂದೀಚೆಗೆ ಅನೇಕ ಹುದ್ದೆಗಳನ್ನು ಕಡಿಮೆಮಾಡಿರುವುದು ಮಾನ್ಯಸದಸ್ಯರೆಲ್ಲರಿಗೂ ಗೊತ್ತಿದೆ. ಉದಾಹರಣೆಗೆ, ಐ. ಜಿ. ಆಫ್ ಪ್ರಿಸನ್ಸ್ ಹುದ್ದೆಯನ್ನು ವಜಾ ಮಾಡಿದ್ದೇವೆ. ಸಹಕಾರ ಸಂಘಗಳಿಗೆ ಪ್ರತ್ಯೇಕವಾಗಿ ರಿಜಿಸ್ಟ್ರಾರ್ ಇದ್ದುದನ್ನು ವಜಾಮಾಡಿ ರೂರಲ್ ಡೆವಲಪ್‌ಮೆಂಟ್ ಕಮಿಷನರವರೇ ಎಕ್ಸ್-ಅಫಿಷಿಯೋ ರಿಜಿಸ್ಟ್ರಾರ್ ಆಗಿರಬೇಕೆಂದು ಮಾಡಿದ್ದೇವೆ. ಆಹಾರ ಇಲಾಖೆಯ ಡೈರೆಕ್ಟರು, ಅಡಿಷನಲ್ ಡೈರೆಕ್ಟರು ಮತ್ತು ಇನ್ನಿಬ್ಬರು—ಹೀಗೆ ಮೂರು ಜನರಿದ್ದರು. ಈಗ ಒಬ್ಬರನ್ನು ಮಾತ್ರ ಇಟ್ಟುಕೊಳ್ಳಲಾಗಿದೆ. ಸೇಲ್ಸ್ ಟ್ಯಾಕ್ಸ್ ಕಮಿಷನರ್ ಬೇರೆಯಾಗಿದ್ದುದು ಈಗ ಇದನ್ನು ಎಕ್ಸೈಜು ಕಮಿಷನರೇ ನೋಡಿಕೊಳ್ಳಬೇಕೆಂದು ಮಾಡಿದೆ. ಬೆಂಗಳೂರು ಅರ್ಬನ್ ಮತ್ತು ರೂರಲ್ ಎಂದು ಎರಡು ಡಿಸ್ಟ್ರಿಕ್ಟುಗಳಾಗಿದ್ದುದನ್ನು ಈಗ ಒಂದೇ ಡಿಸ್ಟ್ರಿಕ್ಟಾಗಿ ಮಾಡಿದ್ದೇವೆ. ಕಮಿಷನರ್ ಆಫ್ ಲ್ಯಾಂಡ್ ರಿಕಾರ್ಡ್ಸ್ ಹುದ್ದೆಯನ್ನು ವಜಾಮಾಡಿದ್ದೇವೆ. ಹೀಗೆ ಹಲವಾರು ಉನ್ನತ ಹುದ್ದೆಗಳನ್ನು ವಜಾ ಮಾಡಿದ್ದೇವೆ. ಅಲ್ಲದೆ ಇನ್ನೂ ಕೆಲವು ಹುದ್ದೆಗಳನ್ನು ವಜಾ ಮಾಡುವ ವಿಚಾರ ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ. ಸಬ್‌ಡಿವಿಜನ್ ಆಫೀಸರುಗಳಿದ್ದಾರೆ. ಡೆವಲಪ್‌ಮೆಂಟ್ ಆಫೀಸರುಗಳೂ ಇದ್ದಾರೆ. ಕೆಲವರು ಇವರನ್ನು ವಜಾ ಮಾಡಬೇಕೆಂತಲೂ, ಇನ್ನು ಕೆಲವರು ಅವರನ್ನು ವಜಾ ಮಾಡಕೂಡದೆಂತಲೂ ಹೇಳುತ್ತಿದ್ದಾರೆ. ಪ್ರಾಯಶಃ ಡೆವಲಪ್‌ಮೆಂಟ್ ಅಧಿಕಾರಿಗಳನ್ನು ವಜಾ ಮಾಡುವುದು ಸೂಕ್ತವೆಂದು ಸರ್ಕಾರದವರಿಗೆ ಕಾಣುತ್ತದೆ. ಇನ್ನು ಹತ್ತು ಹದಿನೈದು ದಿನಗಳಲ್ಲಿ ಈ ವಿಚಾರವನ್ನು ತೀರ್ಮಾನಮಾಡುತ್ತೇವೆ.

ಈ ವರ್ಷದ ಬಡ್ಜೆಟ್ಟು ಅಂದಾಜು ಅಂಗೀಕೃತವಾಗಿದೆಯಷ್ಟೆ. ಅದರಲ್ಲಿ ಪ್ರತಿ ಇಲಾಖೆಯಲ್ಲಿಯೂ ಸಹ ಹೋದ ವರ್ಷದ ಅಂದಾಜುಗಳ ಆಧಾರದ ಮೇಲೆ ರಿಟ್ರೆಂಚ್‌ಮೆಂಟ್ ಮಾಡಬೇಕೆಂದು ಹಣವನ್ನು ಕಡಿಮೆಯಾಗಿ ಒದಗಿಸಿದ್ದೇವೆ. ಉದಾಹರಣೆಗೆ ರೆವಿನ್ಯೂ ಇಲಾಖೆಯ ಖರ್ಚಿನಲ್ಲಿ 2 ಲಕ್ಷ, ಫಾರೆಸ್ಟ್ ಇಲಾಖೆಯಲ್ಲಿ 2 ಲಕ್ಷ, ಎಕ್ಸೈಜು ಇಲಾಖೆಯಲ್ಲಿ 2 ಲಕ್ಷ, ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ 2 ಲಕ್ಷ, ಪೋಲೀಸ್ ಇಲಾಖೆಯಲ್ಲಿ 6–7 ಲಕ್ಷ, ಹೀಗೆ ಕಡಿಮೆಮಾಡಿದ್ದೇವೆ. ಹೋದ ವರ್ಷವೂ ಪೋಲೀಸ್ ಇಲಾಖೆಯ ಖರ್ಚು ಕಡಿಮೆಮಾಡಿದ್ದೇವೆ. Establishment and Contingencies ನಲ್ಲಿಯೂ ಒಂದು ಲಕ್ಷ ರೂಪಾಯಿ ಉಳಿಸಬೇಕೆಂದು ಮಾಡಿದ್ದೇವೆ. ಹೀಗೆಯೇ ಅನಿಮಲ್ ಹಸ್‌ಬೆಂಡ್ರಿ ಇಲಾಖೆಯಲ್ಲಿ 2 ಲಕ್ಷ, ರೂರಲ್ ಡೆವಲಪ್‌ಮೆಂಟ್‌ನಲ್ಲಿ 2 ಲಕ್ಷ, ಆರ್ಮಿಯಲ್ಲಿ 8 ಲಕ್ಷ, ಹೀಗೆ ಒಟ್ಟು 23 ಲಕ್ಷ ರೂಪಾಯಿಗಳಷ್ಟು ಖರ್ಚನ್ನು ಕಡಿಮೆಮಾಡಿದ್ದೇವೆ. ಮುಂದೆ ಕಂಟಿಂಜೆನ್ಸಿ, ಪ್ರಯಾಣಭತ್ಯ ಮುಂತಾದ ಬಾಬುಗಳಲ್ಲಿ ಹೇಗೆ ಖರ್ಚು ಕಡಿಮೆಮಾಡಬೇಕೆಂಬ ವಿಚಾರವನ್ನೂ ಜಾಗ್ರತೆ ಯೋಚನೆಮಾಡಿ ತೀರ್ಮಾನಿಸುತ್ತೇವೆ. ಇದುವರೆಗಾಗಲೇ ಸ್ವಲ್ಪಮಟ್ಟಿಗೆ ಈ ವಿಚಾರದಲ್ಲಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈ ವರ್ಷ ಮಾಡಿರುವುದನ್ನು ಮುಂದುವರಿಸಿಕೊಂಡು ಹೋಗುತ್ತೇವೆ.

ಇಷ್ಟೇ ಅಲ್ಲದೆ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಈ ವಿಷಯದಲ್ಲಿ ಹಣಕಾಸಿನ ಸಚಿವರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಒಂದು ಎಸ್ಟಿಮೇಟ್ಸ್ ಕಮಿಟಿ ಮಾಡುತ್ತೇವೆ; ಎಕಾನಮಿ ಆಫೀಸರು ಮಾಡಿರುವ ವರದಿಯನ್ನು ಪರಿಶೀಲನೆಮಾಡಿ ಅದರ ಜೊತೆಗೆ ಇನ್ನೂ ಯಾವ ಯಾವ ಖರ್ಚುಗಳನ್ನು ಕಡಿಮೆ ಮಾಡಬೇಕೆಂಬುದನ್ನೂ ಯಾವ ಯಾವ ಹೊಸ ತೆರಿಗೆಗಳನ್ನು ಹಾಕಬಹುದೆಂಬುದನ್ನೂ ಪರಿಶೀಲಿಸಿ ಸಲಹೆ ಮಾಡಲು ಅವರಿಗೆ ಅವಕಾಶವಿದೆ. ಹೀಗೆ ಯಾವ ಕೆಲಸಕ್ಕೆ ಈ ಸಮಿತಿ ಬೇಕೆಂದು ಇದರಲ್ಲಿ ಹೇಳಿದ್ದಾರೋ ಆ ಕೆಲಸವನ್ನು ಈ ಎಸ್ಟಿಮೇಟ್ಸ್ ಸಮಿತಿಯವರೇ ಮಾಡಬಹುದೆಂದು ನನಗೆನ್ನಿಸುತ್ತದೆ.

Sri L. SIDDAPPA.—It could not be an expert body.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಎಕ್ಸ್‌ಪರ್ಟ್ ಎಂದರೆ ಏನು ಎಂದು ಕೇಳಬೇಕಾಗುತ್ತದೆ. ಎಕ್ಸ್‌ಪರ್ಟ್ ಸಮಿತಿ ಎಂದು ಹೇಳುವುದರಲ್ಲಿ ಏನೂ ಅನುಮಾನವಿಲ್ಲ. ಈ ಪ್ರಜಾಪ್ರಭುತ್ವದ ಒಂದೇ ವ್ಯವಸ್ಥೆ ಏನೆಂದರೆ ಹೇಳಿದ್ದನ್ನೇ ಪದೇ ಪದೇ ವಿಧಿ ಇಲ್ಲದೇ ಹೇಳಬೇಕಾಗುತ್ತದೆ. ಏಕೆಂದರೆ ಟೀಕೆಮಾಡುವವರಿಗೆ ಎಷ್ಟು ಹೇಳಿದರೂ ಅರ್ಥವಾಗದೆ ಟೀಕೆ ಮಾಡುತ್ತಲೇ ಬಂದರೆ ವಿವರಣೆ ಕೊಡಲೇ ಬೇಕಾಗುತ್ತದೆ. ಹೇಳಿದ್ದನ್ನೇ ಹೇಳಬೇಕಾಗುತ್ತದೆ.

Sri L. SIDDAPPA.—A weak case

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮಾನ್ಯ ಸದಸ್ಯರಿಗೆ ಅದು ಅನ್ವಯಿಸುವುದಿಲ್ಲ. ಶ್ರೀಮಾನ್ ಬಿ. ಹುಚ್ಚೇಗೌಡರು ಆರ್ಥಿಕ ವಿಲೀನೀಕರಣದಿಂದ ನಮಗೆ ಬಹಳ ತೊಂದರೆಯಾಗುತ್ತದೆ, ಬಹಳ ನಷ್ಟವಾಗುತ್ತದೆ, ಮುಖ್ಯಮಂತ್ರಿಗಳೂ ಮತ್ತು ಹಣಕಾಸಿನ ಸಚಿವರೂ ಎಷ್ಟೇ ಹೇಳಿದರೂ ಒಪ್ಪುವ ಸ್ಥಿತಿಯಲ್ಲಿಲ್ಲ ಎಂದು ಹೇಳಿದರು. ಅವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಗೊತ್ತು. ಅವರಿಗೆ ಸ್ವಲ್ಪ ಔಷಧಿ ಕೊಡಬೇಕೆಂದು ನನಗೆ ಅನ್ನಿಸುತ್ತಾ ಇದೆ. ನಾನೂ ತಿಳಿಸಿದ್ದೇನೆ. ಆರ್ಥಿಕ ಸಚಿವರೂ ಹೇಳಿದ್ದಾರೆ. ಈ 5 ವರ್ಷದಲ್ಲಂತೂ ನಮ್ಮ ಹಣಕಾಸಿನ ಸ್ಥಿತಿ ಹಿಂದೆ ಇದ್ದುದಕ್ಕಿಂತ ಏನೂ ಅನಾನುಕೂಲವಾಗಿರುವುದಿಲ್ಲ. ಅದರಲ್ಲಿ ಭಿನ್ನಾಭಿಪ್ರಾಯವೇ ಬರಲಾರದು. ಏಕೆಂದರೆ ಈ 5 ವರ್ಷಗಳಲ್ಲಿ ಯಾವ ಯಾವ ಬಾಬುಗಳಿಂದ ಎಷ್ಟೆಷ್ಟು ವರಮಾನ ಹೋಗುತ್ತದೆಯೋ ಅದೆಲ್ಲವನ್ನೂ ಭಾರತ ಸರ್ಕಾರದವರು ಕಟ್ಟಿಕೊಡುತ್ತಾರೆ.

Rajamantrapravina H. B. GUNDAPPA GOWDA (Hassan District–General).—The increasing aspect has been forgotten. ಐದು ವರ್ಷದ ಕಾಲದಲ್ಲಿ ವರಮಾನ ಹೆಚ್ಚುವುದು ಹೋಗುತ್ತದೆ ಎಂದು ಅಷ್ಟೆ.

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದಕ್ಕೆ ಬರುತ್ತೇನೆ. Increase ಆಗುತ್ತಾ ಇದ್ದ ಬಾಬಿಗೆ

ಒಂದು ಉದಾಹರಣೆ ಕೊಟ್ಟು ಶ್ರೀಮಾನ್ ಬಿ. ಹುಚ್ಚೇಗೌಡರು ವರಮಾನ ತೆರಿಗೆ ವಿಚಾರ ಹೇಳಿದರು. ಒಂದು ವೇಳೆ ನಮ್ಮ ಹತೋಟಿಯಿಲ್ಲದಿದ್ದರೆ ಸರ್ಕಾರ ಜಾಸ್ತಿಮಾಡಬೇಕೆಂದಾಗ—ಎಷ್ಟುಮಟ್ಟಿಗೆ ಬೆಂಬಲ ಸಿಕ್ಕುತ್ತಾ ಇತ್ತೋ, ಇಲ್ಲವೋ ಅದು ಬೇರೆ ವಿಷಯ. ಊಹಾಪೋಹ ಆಗುತ್ತದೆ. ಹೆಚ್ಚು ಪ್ರಯೋಜನವಿಲ್ಲ—ಇನ್ನು ಎರಡು ವರ್ಷದಲ್ಲಿ ಎಷ್ಟು ಆಗುತ್ತಾ ಇತ್ತು ಎಂದು ಕಲ್ಪನಾ ಸ್ಥಿತಿ ಚರ್ಚೆಮಾಡಿದ ಹಾಗಾಗುತ್ತದೆ. ಐದು ವರ್ಷ ಆದಮೇಲಾದರೂ ಆ ಬಾಬಿನಲ್ಲಿ Indian rate of income-tax, standard ಗೆ ಹೋಗಿ ಹೆಚ್ಚು ವರಮಾನ ಬರುತ್ತಾ ಇದ್ದದ್ದನ್ನು ಈ ರೀತಿ ಏರ್ಪಾಡು ಬಂದದ್ದರಿಂದ ಕಳೆದುಕೊಳ್ಳುತ್ತೇವೆ ಎಂದು ವಾದ ಹೂಡಬಹುದು. ಆ ರೀತಿ ಈ 5 ವರ್ಷದಲ್ಲಿ ವರಮಾನ ತೆರಿಗೆಯಿಂದ ಹೆಚ್ಚು ವರಮಾನ ಸಂಪಾದಿಸಿ ನಮ್ಮ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಲು ಆಗುತ್ತಾ ಇರಲಿಲ್ಲ. ಈಗ ಏನು ಒಂದು ಭಾವನೆ ಜನರಲ್ಲಿ ಮೂಡಿದೆಯೋ ಅದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಹಣಕಾಸಿನ ವಿಷಯದಲ್ಲಿ ಅರಿತು ನುರಿತವರು ಎಲ್ಲವನ್ನೂ ಚೆನ್ನಾಗಿ ವಿಮರ್ಶೆಮಾಡಿರತಕ್ಕಂಥವರೊಬ್ಬರು ಒಂದು ಪ್ರಶ್ನೆಯನ್ನು ಮೂರು ದಿನಗಳ ಕೆಳಗೆ ಕೇಳಿದರು. ಐದು ವರ್ಷ ಆದಮೇಲೆ ಮೂರು ಕೋಟಿ ರೂಪಾಯಿ ಹೋಗುತ್ತದೆಯಲ್ಲಾ ಅದನ್ನು ಹೇಗೆ ಸರಿಸಡಿಸುವುದು ಎಂದು ಕೇಳಿದರು. ಬಹಳ ಆಶ್ಚರ್ಯವಾಯಿತು. ಆ ರೀತಿ ಹೋಗುವುದಿಲ್ಲ. ಅದಕ್ಕೆ gap fill up ಮಾಡತಕ್ಕ ಪ್ರೊಸೀಜರ್ ಇದೆ. ಅದನ್ನು ಯೋಚನೆಮಾಡುವುದಿಲ್ಲ. ಒಂದು ಆಧಾರದ ಮೇಲೆ ಬೇರೆ ಸಂಸ್ಥಾನಗಳಿಗೆ 65%, 70%, 75% ಕೊಡುತ್ತಾರೆ. ನಮಗೆ ಈಗ 50% ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ 60% ಆದರೂ ಆಗಬಹುದು. ವರಮಾನದ ತೆರಿಗೆ ಮತ್ತು ಎಕ್ಸೈಜು ಡ್ಯೂಟಿ ಯಾವ ಪ್ರಮಾಣದಲ್ಲಿ ಹಂಚಬೇಕು ಎಂಬುದನ್ನು ಆಗ ಶಿಫಾರಸ್ಸು ಮಾಡಿದ್ದರು. ಬೇರೆ ಸಂಸ್ಥಾನಗಳಿಗೆ 75% ಕೊಡಬೇಕೆಂದು ಹೇಳಿದ್ದಾರೆ. ನಮ್ಮ ಸಂಸ್ಥಾನಕ್ಕೆ 56-60% ವರೆಗೂ ಕೊಡಬಹುದೆಂದು ಶಿಫಾರಸ್ಸು ಮಾಡಿದ್ದರೆ. ಒಂದು ಫಿಸ್‌ಕಲ್ ಸಮಿತಿ ಆಗುತ್ತದೆ. ಅವರು ವರಮಾನದ ತೆರಿಗೆ ಬಾಬಿನಲ್ಲಿ ಎಷ್ಟು ಹಣ ವಸೂಲಾಗುತ್ತಿದೆ ಎಷ್ಟೆಷ್ಟು ಭಾಗ ಸಂಸ್ಥಾನಗಳಿಗೆ ಕೊಡಬೇಕೆಂಬುದನ್ನು ವಿಮರ್ಶೆಮಾಡುತ್ತಾರೆ. ಆದ್ದರಿಂದ ಈ ರೀತಿ ಹೊಸದಾಗಿ ಬರುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಎಕ್ಸೈಜ್ ಡ್ಯೂಟಿ ಜಾಸ್ತಿಮಾಡಿದರೆ ಅದರಲ್ಲಿ ಒಂದು ನಿರ್ದಿಷ್ಟವಾದ ಭಾಗ ಮೈಸೂರು ಸಂಸ್ಥಾನಕ್ಕೆ ಬರುತ್ತದೆ. ಎರಡು ಮುಖ್ಯವಾದ ಬಾಬುಗಳಲ್ಲಿ ಮೈಸೂರು ಸಂಸ್ಥಾನಕ್ಕೆ ಬರಬಹುದಾದ ಷೇರು ಏನಿದೆಯೋ ಅದು ಬಹುಮಟ್ಟಿಗೆ net gap ನ್ನು cover ಮಾಡುತ್ತದೆ ಎಂಬ ವಿಷಯವನ್ನು ಮರೆಯಬಾರದು.

Sri H B. GUNDAPPA GOWDA.—Will it be within the period of five years ?

Sri K. CHENGALARAYA REDDY.—After five years. If the Fiscal Commission functions earlier we can have definite results even before. ಇನ್ನೊಂದು ವಿಷಯ ಎಂದರೆ ಈ 5 ವರ್ಷದಲ್ಲಿ ನಮ್ಮ ಸ್ಥಿತಿ ಭದ್ರವಾಗಿದೆ ಎಂದು ಪದೇ ಪದೇ categorical ಆಗಿ ಹೇಳಿದ್ದೇನೆ. ಅದನ್ನು ಈಗಲೂ ಸಹ ಸಂಶಯಾತ್ಮಕವಾದ ದೃಷ್ಟಿಯಿಂದ ನೋಡುತ್ತಾ ಇದ್ದೀರಿ. ಎಲ್ಲರೂ ಸುಖವಾಗಿ ಇರಬೇಕು ಎಂಬುದೇ ನನ್ನ ಭಾವನೆ. ಸುಮಾರು ಈ 5 ವರ್ಷದಲ್ಲಿ net gap ಸಂಪೂರ್ಣವಾಗಿ make up ಮಾಡುತ್ತಾರೆ. ಕೆಲವು ಬಾಬುಗಳಲ್ಲಿ ಇತರ ಸಂಸ್ಥಾನಗಳಿಗೆ ಯಾವ ರೀತಿ ಗ್ಯಾರಂಟಿ ಕೊಡುತ್ತಾರೆಯೋ ಅದೇ ರೀತಿ ನಮಗೂ ಸಹ ಒಂದು ಗ್ಯಾರಂಟಿ ದೊರೆಯುತ್ತದೆ. ಹೆಚ್ಚು ಆಹಾರ ಬೆಳೆಗಾಗಿ ಹೋದ ವರ್ಷ 10 ಲಕ್ಷ ರೂಪಾಯಿ ಸರ್ಕಾರದವರು ಕೊಟ್ಟರು. ಈ ವರ್ಷ ನಾವು ನಮ್ಮ ರಿಸರ್ವ್‌ನಿಂದ ಖರ್ಚುಮಾಡುತ್ತೇವೆ. ಆದರೆ ಒಂದು ಲಿಮಿಟ್ ಇದೆ. ಆದ್ದರಿಂದ ಅದಕ್ಕೆ ಪ್ರೊವಿಷನಲ್ ಆಗಿ ಸೇಕಡ 50ರಷ್ಟು ಕೆಲವು ಬಾಬುಗಳಿಗೆ 30 ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಈ ಒಂದು ಹೊಸ ವರಮಾನ ಇಂಡಿಯಾ ಸರ್ಕಾರದಿಂದ ಬರುತ್ತದೆ ಎಂಬುದನ್ನು ಮರೆಯಬಾರದು. ಇನ್ನೂ ಕೆಲವು ಬಾಬುಗಳಲ್ಲಿ ಗ್ರಾಂಟ್ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಹೀಗಿರುವುದರಿಂದ ಈ 5 ವರ್ಷದಲ್ಲಿ ಆರ್ಥಿಕ ವಿಲೀನೀಕರಣವಾದರೂ ಖಂಡಿತವಾಗಿಯೂ ನಮ್ಮ ಆರ್ಥಿಕಸ್ಥಿತಿ ಉತ್ತಮವಾಗಿರುತ್ತದೆ ಎಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಇದರಿಂದ ಬಹಳ ತೊಂದರೆಯಾಗುತ್ತಿದೆ ಅಥವಾ ಪೆಟ್ಟು ಬಿದ್ದಿದೆ ಎಂಬ ಭಾವನೆ ಅನೇಕರಿಗೆ ಇದೆ. ಅಂಕಿ ಅಂಶಗಳ ಆಧಾರದ ಮೇಲೆ ಆ ಅಭಿಪ್ರಾಯವನ್ನು ಬಿಟ್ಟುಬಿಡಬೇಕೆಂದು ಮಾನ್ಯಸದಸ್ಯರಿಗೆ ಸೂಚಿಸುತ್ತೇನೆ.

ಇನ್ನೂ ಅನೇಕ ಅಂಶಗಳಿವೆ. ಅವುಗಳೆಲ್ಲವನ್ನೂ ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ಈಗ ಸರ್ಕಾರದವರು ಅನುಸರಿಸುತ್ತಾ ಇರತಕ್ಕ ಪ್ರೊಸೀಜರ್ ಸರಿಯಾಗಿದೆ. ಇದಕ್ಕೆ ಒಂದು ಸಮಿತಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಸರ್ಕಾರದವರು ಈ ವಿಷಯದಲ್ಲಿ ಯಾವ್ಯಾವ ಅಭಿಪ್ರಾಯವನ್ನು ಪಡೆಯಬೇಕೋ ಅದನ್ನು ಅನ್‌ಅಫಿಷಿಯಲ್ ಆಗಿ ಪಡೆದು ಸಂಸ್ಥಾನದ ಹಣಕಾಸಿನ ಸ್ಥಿತಿಯನ್ನು ಹದಗೆಡದಂತೆ ಒಳ್ಳೆಯರೀತಿಯಲ್ಲಿಟ್ಟುಕೊಂಡು ಹೋಗಲು ಸರ್ವಪ್ರಯತ್ನ ಮಾಡುತ್ತಾರೆ. ಈಗ ಏನು ಒಂದು ಸಮಿತಿಯನ್ನು ರಚನೆಮಾಡಬೇಕೆಂದು ಸೂಚನೆಮಾಡಿದ್ದಾರೋ ಅದರ ಆವಶ್ಯಕತೆ ಕಂಡು ಬಂದಿರುವುದಿಲ್ಲ. ಅಂಥ ಸಮಿತಿಯನ್ನು ಮಾಡಿದರೆ ಆಗಲೇ ಒಬ್ಬ ಮಾನ್ಯಸದಸ್ಯರು ಸೂಚಿಸಿದಂತೆ ಕೆಲಸ ತಡವಾಗುತ್ತದೆಯೇ ಹೊರತು ಜಾಗ್ರತೆ ಆಗುವುದಿಲ್ಲ. ಆದ್ದರಿಂದ ಈ ಸಮಿತಿಮಾಡಬೇಕೆಂಬ ಸಲಹೆ ಏನು ಬಂದಿದೆಯೋ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಒಂದು ವೇಳೆ ಈ ನಿರ್ಣಯವನ್ನು ಒತ್ತಾಯಪಡಿಸುವುದಾದರೆ ವಿರೋಧಿಸಬೇಕಾಗುತ್ತದೆ. ಮಾನ್ಯಸದಸ್ಯರಿಗೆ ಕೊಟ್ಟಂಥ ವಿವರಣೆಯನ್ನು ಗಮನಿಸಿ ಈ ನಿರ್ಣಯವನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri L. SIDDAPPA.—As the reply does not satisfy me, I press the resolution.

Mr. SPEAKER.—The question is :

"That this Assembly is of the opinion that the Government of Mysore should constitute a committee immediately to enquire into the financial position of the State and make recommendations for necessary retrenchments in expenditure so as to place the finances of the State on a sound basis."

The motion was negatived.

RESOLUTION No. 15.

Enforcement of compuslory primary education throughout the State.

Sri B. HUTCHE GOWDA.—(Tumkur District-General).—Sir, I beg to move:

"This Assembly is of the opinion that universal compulsory primary education should be enforced within the next two years throughout the State."

ಸ್ವಾಮಿ, ಈ ನಿರ್ಣಯವನ್ನು ಈ ಸಭೆಯ ಅವಗಾಹನೆಗೆ ತರುತ್ತಾ ನಾನು ಈ ವಿಚಾರವಾಗಿ ಹೆಚ್ಚು ಹೇಳಬೇಕಾಗಿಲ್ಲವೆಂದು ಭಾವಿಸುತ್ತೇನೆ. ಇದನ್ನು ಆಗಲೇ ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಮತ್ತು ಈಸಭೆಯ ಎಲ್ಲಾ ಸದಸ್ಯರೂ ಸಹ ಈ ವಿಚಾರದಲ್ಲಿ ಕಿವಿ ಕೊರೆಯುವ ಹಾಗೆ ಮಾತನಾಡಿದ್ದಾರೆ. ಆದ್ದರಿಂದ ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. ಈಗ ದೇಶದಲ್ಲಿ ಪ್ರಜಾ ಪ್ರಭುತ್ವ ತತ್ವ ಜಾರಿಯಲ್ಲಿದೆ. ಪ್ರತಿಯೊಬ್ಬನಿಗೂ ಕೂಡ ಒಂದೇ ಸಮಾನವಾದ ಅವಕಾಶ ದೊರೆಯಬೇಕೆಂದು ಹೇಳುತ್ತಿರುವ ನಮ್ಮ ಧ್ಯೇಯವು ಮುಖ್ಯವಾದದ್ದು. ಅದು ಕಾರ್ಯರೂಪಕ್ಕೆ ಬರಬೇಕಾಗಿದ್ದರೆ ಪ್ರತಿಯೊಬ್ಬನೂ ಕೂಡ ವಿದ್ಯಾವಂತನಾಗಬೇಕಾದ್ದು ಮೊದಲನೆಯ ಕರ್ತವ್ಯ. ಎಲ್ಲರಿಗೂ ಸಮಾನವಾದ ಅವಕಾಶ, ಸಮಾನವಾದ ವಿದ್ಯಾಭ್ಯಾಸ ಎಂದರೆ ಅದರಲ್ಲೂ ಪ್ರಾಥಮಿಕ ವಿದ್ಯಾಭ್ಯಾಸ ಬಹಳಮುಖ್ಯವಾದದ್ದು ಎಂಬುದು ಪ್ರಪಂಚದಲ್ಲೇ ಒಪ್ಪಿಗೆ ಆಗಿರತಕ್ಕ ವಿಚಾರ. ಈಗ ನಮ್ಮ ದೇಶದಲ್ಲಿ ಶೇಕಡ 13 ಮಾತ್ರ ವಿದ್ಯಾವಂತರು ಎಂದು ಹೇಳುತ್ತಾ ಇದ್ದಾರೆ. ಅಲ್ಲದೆ ದೇಶದಲ್ಲಿರತಕ್ಕವರಲ್ಲಿ ಶಾಲೆಗೆ ಹೋಗತಕ್ಕವರ ವಯಸ್ಸಿನವರಾದ ಸುಮಾರು 13 ಲಕ್ಷ ಜನರಲ್ಲಿ 4½ ಲಕ್ಷ ಜನ ಮಾತ್ರ ಪಾಠಶಾಲೆಗೆ ಹೋಗುತ್ತಾ ಇದ್ದಾರೆ.

ಈ ರೀತಿಯಾಗಿ ತಾವು ಯಾವುದನ್ನೂ ಪ್ರಯತ್ನ ಮಾಡದಿರುವ ಕಾರಣ ಈ ವಿದ್ಯಾಭ್ಯಾಸದ ಸೌಲಭ್ಯಗಳನ್ನು ಇನ್ನು 50 ಅಲ್ಲ 100 ವರ್ಷಗಳಾದರೂ ಎಲ್ಲಾ ಜನರಿಗೂ ಒದಗಿಸಲು ತಮಗೆ ಖಂಡಿತ ಸಾಧ್ಯವಾಗುವುದಿಲ್ಲ. ಸರ್ಕಾರದವರು ಈ ವಿಚಾರದಲ್ಲಿರುವ ತೊಡರುಗಳನ್ನು ಯಾವ ರೀತಿ ಎದುರಿಸುತ್ತಾರೆಂಬುದೇ ತಿಳಿಯದಾಗಿದೆ. ಏನೇ ಇರಲಿ, ಈ ಬಗ್ಗೆ ತಕ್ಷಣ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಕೂಡಲೇ ಜಾರಿಗೆ ತರತಕ್ಕದ್ದು ಸರ್ಕಾರದವರ ಕರ್ತವ್ಯ. ಈ ಬಗ್ಗೆ ಪ್ರತಿಯೊಂದು ವರ್ಷವೂ ತಪ್ಪದಂತೆ ಒಬ್ಬರಲ್ಲ ಒಬ್ಬ ಸದಸ್ಯರಿಂದ ಈ ಸಂಬಂಧವಾಗಿ ಒಂದೊಂದು ವಿಚಾರವನ್ನು ಪ್ರಜಾ ಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ತರುತ್ತಲೇ ಇದ್ದಾರೆ. ಇದನ್ನು ಆಲೋಚಿಸಿ ನೋಡುವುದಾದರೆ ಸಂಸ್ಥಾನಾದ್ಯಂತ ಇರತಕ್ಕ ಗ್ರಾಮಾಂತರ ಪ್ರದೇಶಗಳವರಿಗೆ ಈ ವಿದ್ಯಾಸೌಕರ್ಯಗಳು ಏನೇನೂ ಒದಗಿಸಿರುವುದಿಲ್ಲವಾಗಿ ಕಂಡುಬರುತ್ತಿದೆ.

ಈಗಾಗಲೇ ಪ್ರಜಾ ಸರ್ಕಾರ ಬಂದು ಎರಡು ವರ್ಷಗಳಾದವು. ಈ ಬಾಬಿಗೆ ಬಡ್ಜೆಟ್ಟಿನಲ್ಲಿ ತಾವು ಒದಗಿಸಿರುವುದನ್ನು ನೋಡಿದರೆ ತುಂಬಾ ಅನ್ಯಾಯ ಮಾಡಿರುವಂತೆ ಕಾಣುತ್ತಿದೆ. ತಾವು ಹೋದ ವರ್ಷ ಈ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಎಷ್ಟು ಮೊಬಲಗನ್ನು ಒದಗಿಸಿದ್ದೀರೋ ಅದಕ್ಕಿಂತಲೂ 1½ ಲಕ್ಷ ರೂಪಾಯಿಗಳನ್ನು ಈಗ ಕಡಿಮೆ ಮಾಡಲಾಗಿದೆ. ಇದನ್ನು ನೋಡಿದರೆ ತಾವು ಮುಂದಕ್ಕೆ ಹೋಗುತ್ತಿದ್ದೀರೋ ಅಥವಾ ಹಿಂದಕ್ಕೆ ಹೋಗುತ್ತಿದ್ದೀರೋ ಎಂಬುದು ಗೊತ್ತಾಗುತ್ತಿದೆ. ಈ ವಿದ್ಯಾಭ್ಯಾಸವು ನಮ್ಮ ಅತಿ ಮುಖ್ಯವಾದ ಪ್ರಗತಿದಾಯಕದ ಅಳತೆಯ ಕೋಲಾಗಿರಬೇಕು. ಇದನ್ನು ಮುಂದುವರಿಸತಕ್ಕದ್ದು ತಮ್ಮ ಮುಖ್ಯ ಕರ್ತವ್ಯ. ಹಿಂದೆ ಶ್ರೀಮಾನ್ ಟಿ. ಸುಬ್ರಹ್ಮಣ್ಯರವರು ಇದು ಯುದ್ಧದ ವೇಗದಲ್ಲಿ ಹೋಗಬೇಕೆಂದು ತಿಳಿಸಿದರು. ಅದನ್ನೂ ನಾನು ಒಪ್ಪುತ್ತೇನೆ. ಈ ಬಗ್ಗೆ ಯಾವ ಸದಸ್ಯರೂ ಭಿನ್ನಾಭಿಪ್ರಾಯ ಪಡುವುದಿಲ್ಲವೆಂದು ನಾನು ಭಾವಿಸಿದ್ದೇನೆ. ದಯವಿಟ್ಟು ಸರ್ಕಾರದವರು ಈ ಒಂದು ನಿರ್ಣಯಕ್ಕಾದರೂ ಒಪ್ಪಿಕೊಂಡು ವಿದ್ಯಾ ಸೌಕರ್ಯಗಳನ್ನು ಕಲ್ಪಿಸಿಕೊಡಲು ಒಂದು ಕಾರ್ಯ ನೀತಿಯನ್ನು ಪ್ರಾರಂಭಮಾಡಿದ್ದರೆ ಕಳೆದ ವರ್ಷ 5 ತಾಲ್ಲೂಕುಗಳಲ್ಲಿ ಇದು ಮುಗಿದು ಈ ಹೊಸ ವರ್ಷದಲ್ಲಿ ಇನ್ನೂ 5 ತಾಲ್ಲೂಕುಗಳಲ್ಲಿ ಈ ಕಾರ್ಯ ಈಗಾಗಲೆ ನಡೆದಿರಬೇಕಾಗಿತ್ತು. ಹೀಗೆ ಮಾಡಿದ್ದರೆ 4–5 ವರ್ಷಗಳೊಳಗಾಗಿ ಸಂಸ್ಥಾನಾದ್ಯಂತವೂ ಇದನ್ನು ಜಾರಿಗೆ ತರಬಹುದಾಗಿತ್ತು.

ಅಧ್ಯಕ್ಷರು.—ಹಾಗೆ ವರ್ಷ ಒಂದಕ್ಕೆ 4–5 ತಾಲ್ಲೂಕುಗಳಂತೆ ಜಾರಿಗೆ ತಂದಾಗ್ಯೂ ಇನ್ನು 4–5 ವರ್ಷಗಳಲ್ಲಿ ಸಂಸ್ಥಾನಾದ್ಯಂತವೂ ಜಾರಿಗೆ ಬರಲು ಹೇಗೆ ಸಾಧ್ಯವಾಗುತ್ತದೆ!

ಶ್ರೀ ಬಿ. ಹುಚ್ಚೇಗೌಡರು.—ಹಿಂದಿನ ಸಾಲಿಗೆ 5 ತಾಲ್ಲೂಕ ಗಳು ಸೇರಬೇಕಾಗಿತ್ತು. ಈ ಸಾಲಿಗೆ ಹೊಸದಾಗಿ ಇನ್ನೈದು ತಾಲ್ಲೂಕುಗಳಲ್ಲಿ ಇದನ್ನು ಜಾರಿಗೆ ತಂದಿದ್ದರೆ ಆ ಪ್ರದೇಶದಲ್ಲಾದರೂ ಪ್ರತಿಯೊಬ್ಬ ಬಾಲಕನಿಗೂ ಈ ವಿದ್ಯಾ ಕೊರತೆ ಇರುತ್ತಿರಲಿಲ್ಲ. ಆದಕಾರಣ ಇದನ್ನು ಆದಷ್ಟು ಬೇಗ ಒದಗಿಸಬೇಕಾದುದು ಸರ್ಕಾರದವರ ಕರ್ತವ್ಯ. ಈ ಬಗ್ಗೆ ತಾವೀಗ ಒಂದು ಭರವಸೆಯನ್ನು ಕೊಡಬೇಕಾಗಿದೆ. ಈಗಾಗಲೇ ನಾವು ಬಹಳ ಹಿಂದೆ ಬಿದ್ದಿದ್ದೇವೆ. ಆದಕಾರಣ ತಕ್ಷಣವೇ ಇದನ್ನು ಜಾರಿಗೆ ತಂದು ಮುಂದಿನ ವರ್ಷ ದೇಶಾದ್ಯಂತವೂ ಈ ಕಾನೂನು ಮೂಲಕ ಒತ್ತಾಯ ಶಿಕ್ಷಣ ಪದ್ಧತಿಯನ್ನು ಜನಗಳಿಗೆ ಒದಗಿಸುವಂತೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—Resolution moved:

"That this Assembly is of the opinion that universal compulsory primary education should be enforced within the next two years throughout the State".

* ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಸ್ವಾಮಿ, ಈ ಹಿಂದಿನ ನಿರ್ಣಯಕ್ಕೆ ಉತ್ತರ ಕೊಡುತ್ತ ಮಾನ್ಯ ಮುಖ್ಯಮಂತ್ರಿಗಳವರು ಸರ್ಕಾರಕ್ಕೆ ಅಂಥ ಯಾವ ರೋಗವೂ ಬಂದಿಲ್ಲವಾದ ಕಾರಣ ವೈದ್ಯರ ಸಲಹೆಯನ್ನು ತೆಗೆದುಕೊಳ್ಳಬೇಕಾದ ಅವಕಾಶವೇ ಇಲ್ಲವೆಂದು ತಿಳಿಸಿದರು.

ಆದರೆ ಹಿಂದಿದ್ದ ಸರ್ಕಾರ ಸಾರ್ವತ್ರಿಕ ಒತ್ತಾಯ ಶಿಕ್ಷಣ ಪದ್ಧತಿಯನ್ನು adopt ಮಾಡಿಕೊಂಡಿರಲಿಲ್ಲ. ಆದಾಗ್ಯೂ ಅದು ಯಾವ ರೀತಿ ನೀತಿಗಳನ್ನು ಅನುಸರಿಸಿಕೊಂಡು compulsory attendance ಮತ್ತೂ ಒತ್ತಾಯದ ಪ್ರಾಥಮಿಕ ವಿದ್ಯಾಭ್ಯಾಸ ಇತ್ಯಾದಿಗಳನ್ನು ಕೊಡಲಾಗುತ್ತಿತ್ತೋ ಆ ಪದ್ಧತಿಗಳನ್ನೇ ಈಗಲೂ ಅನುಸರಿಸುತ್ತಾ ಅದಕ್ಕೆ ಬೇರೆ ಒಂದು ಪದವನ್ನು ಉಪಯೋಗಿಸಿ qualitative improvement ಗೋಸ್ಕರ quantitative expansion ಕಡಿಮೆ ಮಾಡಲಾಗಿದೆಯೆಂದು ಹೇಳಿರುತ್ತಾರೆ. ಇದನ್ನು ನೋಡಿದರೆ ಈಗಿನ ಸರ್ಕಾರಕ್ಕೆ ರೋಗವಿದೆ

ಯೆಂಬುದು ಖಚಿತವಾಗಿ ಗೊತ್ತಾಗುತ್ತಿದೆ. ಆದಾಗ್ಯೂ ಈಗಿನ ಸರ್ಕಾರ ಅದನ್ನು ಮುಚ್ಚಿಟ್ಟುಕೊಂಡು ಅದಕ್ಕೆ ಯಾವ ಔಷಧೋಪಚಾರವನ್ನು ತೆಗೆದುಕೊಳ್ಳಲೂ ತಯಾರಾಗಿಲ್ಲವೆಂದು ತಿಳಿದುಬರುತ್ತಿದೆ. ಸರ್ಕಾರದವರು ಯಾವ ಅಭ್ಯಂತರವೂ ಇಲ್ಲದೆ ಈ ನಿರ್ಣಯನ್ನು ಅನುಮೋದಿಸುತ್ತಾರೆಂದು ಭಾವಿಸಿ ನಾನು ಇದಕ್ಕೆ ಸಂಪೂರ್ಣ ಬೆಂಬಲ ಕೊಡುತ್ತೇನೆ.

* ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ನನ್ನ ಅಭಿಪ್ರಾಯದಲ್ಲಿ ಈಗಿನ ಸರ್ಕಾರಕ್ಕೆ ರೋಗ ಬಂದಿದೆಯೆಂದು ಶ್ರೀ ಎಲ್. ಸಿದ್ದಪ್ಪನವರು ವಾದ ಮಾಡಿರುವುದು ಅಷ್ಟು ಸಮಂಜಸವಾದುದಲ್ಲ. ಸರ್ಕಾರಕ್ಕೆ ಆ ರೋಗ ಬಂದಿದ್ದು ಈ ದಿವಸವಲ್ಲ.. ರೋಗ ಗ್ರಸ್ತವಾದ ಸರ್ಕಾರವೇ ನಮ್ಮ ಕೈಗೆ ಬಂದಿದ್ದು ಅದಕ್ಕೆ ನಾವು ಈಗ ಸ್ವಲ್ಪ ಔಷಧೋಪಚಾರಗಳನ್ನು ಕೊಟ್ಟು ಅದನ್ನು ಗುಣ ಮುಖ ಮಾಡುತ್ತಿದ್ದೇವೆ. ಅಂದರೆ convalescent ಸ್ಟೇಜಿನಲ್ಲಿರುತ್ತೆ. ಆದರೆ ಈಗ ತಾನೆ ಖಾಯಿಲೆಯಿಂದ ವಿಮುಕ್ತವಾಗುತ್ತಿರುವುದರಿಂದ ಅಂಥ ಗುಣವಾಗುತ್ತಿರುವ ರೋಗಿಗೆ ಆಹಾರದ ವಿಷಯದಲ್ಲಿ ಅಷ್ಟು ಹೆಚ್ಚಿಗೆ ಆಹಾರ ಹಾಕುವುದು ಉಚಿತವಲ್ಲವೆಂದು ಆರೋಗ್ಯ ದೃಷ್ಟಿಯಿಂದ ಕಡಿಮೆ ಹಾಕಲಾಗುತ್ತಿದೆ. ಅಷ್ಟೇ ಹೊರತಾಗಿ ಈಗ ಸರ್ಕಾರಕ್ಕೆ ಆ ರೀತಿ ಯಾವ ರೋಗವೂ ಇರುವುದಿಲ್ಲವೆಂಬುದು ಖಚಿತವಾಗಿ ನಮಗೆಲ್ಲ ಗೊತ್ತಿದೆ.

ಶ್ರೀ ಎಲ್. ಸಿದ್ದಪ್ಪನವರು.—ರೋಗಿಷ್ಟವಾಗಿದ್ದ ಹಳೆ ಸರ್ಕಾರ ನಿಮ್ಮ ಕೈಗೆ ಬಂದಿದ್ದರೆ, ಅದಕ್ಕಾದರೂ ಒಬ್ಬ ನಿಪುಣನಾದ ವೈದ್ಯನಿಂದ ತಕ್ಕ ಔಷಧೋಪಚಾರಗಳನ್ನು ಮಾಡಿಸಿ ಎಂದು ಹೇಳುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಆ ಖಾಯಿಲೆಯೆಲ್ಲಾ ಪರಿಹಾರವಾಗಿರುವುದರಿಂದ ನಾವೀಗ ಆ ಆಲೋಚನೆ ಮಾಡಬೇಕಾದ ಅವಶ್ಯಕತೆಯಿಲ್ಲ.

ಆ ತೊಂದರೆಗಳಿಗೆಲ್ಲಾ ಕಾರಣವಿಷ್ಟೆ. ಅನೇಕ ಸ್ಥಳಗಳಲ್ಲಿ ಸರಿಯಾದ ನುರಿತ ಉಪಾಧ್ಯಾಯರುಗಳು ಸಿಕ್ಕುತ್ತಿಲ್ಲ. ಇನ್ನು ಅನೇಕ ಕಡೆ ಸಾಕಷ್ಟು ಕಟ್ಟಡಗಳಿಲ್ಲ. ಈ ಎರಡು ತೊಂದರೆಗಳನ್ನೂ ಅಷ್ಟು ಬೇಗ ತಾವು ತಿಳಿಸಿದಂತೆ ಒಂದೆರಡು ದಿನಗಳಲ್ಲಿ ಸರಿಪಡಿಸುವುದಕ್ಕೆ ಆಗುವುದಿಲ್ಲ. ಈಗಲೂ ಹಳ್ಳಿಗಳಲ್ಲಿರತಕ್ಕವರಿಗೆ ಆ ಹಿಂದನಿಂದ ಬಂದಿರುವಂಥ ಮೂಢ ನಂಬಿಕೆ ಹೋಗಿರುವುದಿಲ್ಲ. ಜುಲ್ಮಾನೆ ಹಾಕುತ್ತೇವೆಂದು ನಾವು ಒತ್ತಾಯಪಡಿಸಬಹುದು. ಆದರೆ ಅದರ ಪರಿಣಾಮವೇನಾಗುತ್ತದೆಂಬುದು ಶ್ರೀಮಾನ್ ಹುಚ್ಚೇಗೌಡರಿಗೂ ಗೊತ್ತಿದೆ. ಹೀಗೆ ಸರಿಯಾದ ಉಪಾಧ್ಯಾಯರುಗಳಿಲ್ಲದೆ ಸ್ಕೂಲುಗಳಿಗೆ ಬರುತ್ತಿರುವ ಹುಡುಗರಿಗೆ ಎಷ್ಟು ಕಾಲಹರಣಯಾಗುತ್ತಿದೆ ಮತ್ತು ಅವರಿಗೆ ಎಷ್ಟು ತೊಂದರೆಯಾಗುತ್ತಿದೆ ಎಂಬುದು ಅನೇಕರಿಗೆ ಗೊತ್ತಿರುವ ವಿಷಯವಾಗಿದೆ. ಇಂಥಾ ತೊಂದರೆಗಳನ್ನೆಲ್ಲಾ ಸ್ವಲ್ಪಸ್ವಲ್ಪವಾಗಿ ಸರಿಪಡಿಸಿಕೊಳ್ಳುತ್ತಾ ಹೋಗಬೇಕೇ ಹೊರತು ಅದೆಲ್ಲವನ್ನೂ 2 ವರ್ಷಗಳಲ್ಲೇ ಕಡ್ಡಾಯವಾಗಿ ಮಾಡಬೇಕೆಂದು ಹೇಳಿರುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಆದಕಾರಣ ನಾನು ಇದನ್ನು ವಿರೋಧಿಸುತ್ತೇನೆ.

(Sri H. M. Channabasappa rose to speak.)

Sri Kadidal MANJAPPA (Shimoga District-General). —It is now nearing One of the Clock.

Mr. SPEAKER.—Shall we continue discussion on this resolution to-morrow?

SOME VOICES.—Yes.

Sri K. CHENGALARAYA REDDY.—I want to just suggest that the Resolutions which have been passed over to-day owing to the absence of the Members may be taken up to-morrow so that we may be ready with our replies.

ಅಧ್ಯಕ್ಷರು.—ಈ ದಿವಸದ ಕಾರ್ಯಕ್ರಮದ ಪಟ್ಟಿಯಲ್ಲಿ ನಿರ್ಣಯಗಳ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳಲಾಗುತ್ತದೆಂದು ಸದಸ್ಯರಿಗೆ ತಿಳಿಸಿರುವುದಿಲ್ಲ. ಆದುದರಿಂದ ಕೆಲವು ಸದಸ್ಯರು ಈ ಬಗ್ಗೆ ಚರ್ಚೆ ನಡೆಸಲು ನಾವು ತಯಾರಾಗಿ ಬಂದಿಲ್ಲವೆಂದು ತಿಳಿಸಬಹುದು. ಆದಕಾರಣ ಇದರ ಮೇಲಿನ ಚರ್ಚೆಯನ್ನು ನಾಳೆಗೆ ಮುಂದುವರಿಸಬಹುದೆಂದು ತೋರುತ್ತದೆ.

Sri K. CHENGALARAYA REDDY.—It is better that we are distinct about it, because we have to know whether we have to come prepared to answer them. I think, in view of the fact that there was no previous announcement regarding Resolutions being taken up to-day, the Members may be allowed an opportunity to take up their resolutions tomorrow.

Sri L. SIDDAPPA.—I may bring to your kind notice this rule:

> "If the Member when called on is absent, the resolution standing in his name shall be considered to have been withdrawn;
>
> Provided that the Speaker in his discretion, may allow another member to move such resolution, or may postpone it."

ಅಧ್ಯಕ್ಷರು.—ನಾನೀಗ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ.

Statements by Mr. Speaker on the Point of Order raised by the Chief Minister.

Mr. SPEAKER (Sri V. Venkatappa).—Hon'ble Members will remember that tomorrow morning a few hours have been set apart for a discussion of the point of order raised by the Hon'ble Chief Minister. It was first raised on a cut motion tabled by *Mushir-ul-Mulk* J. Mahomed Imam to raise a debate on the exchange of enclaved villages between the States of Mysore and Madras. Without deciding on the general issues involved, I ruled that the cut motion could be discussed. Again, when the same Member wanted to move

a cut motion to raise a debate on the recommendation of the Mysore Government to the States Ministry regarding the termination of the services of Sri Puttaraj Urs, the Hon'ble Chief Minister raised a point of order and wanted me to decide the scope of debate in this House on matters which were, under the Constitution, the subject of orders by the Government of India or the President of the Indian Republic. As this general issue was of the greatest importance and as several Members wanted to be heard on this subject, I postponed my ruling but requested Janab Imam not to move his cut motion as any discussion on the same would embarrass the enquiry into this matter which has been reported to have been referred to the Chief Justice of the Supreme Court. The Hon'ble Member accordingly did not move his cut motion.

The House will thus see that the question on which a ruling is wanted is one of the greatest importance. It not only affects the scope of debate in this House but any ruling to be given will directly affect its powers as well. I am therefore anxious to have the benefit of the considered views of the Members on this question before I give my ruling. In order, however, to help the Members to concentrate on what I consider the more important points which would require examination, I should like to offer a few remarks. I should however not be understood by any Hon'ble Member as either having made up my mind or as having a bias in any way on this question. If, apart from the points I am suggesting, there are any others which any Member considers relevant to the issue, I should welcome such help from him.

The main question is, whether this House is competent to debate upon matters which are the subject of orders of the Government of India or the President under the Constitution of India. In this connection it may not be inappropriate to remember that in the governance of India, there are two governments and two legislatures in respect of each State which have jurisdiction over it. There is the Government of India and Parliament on the one side and there is the State Government and the State Legislature on the other, each of them acting within the limits of the authority conferred by the Constitution. But whether the field of debate in a State Legislature is co-extensive with its powers of legislation is the point which requires decision just now. We have to remember that the Constitution of India for the first time provides for a Council of Ministers collectively responsible to the Legislative Assembly. Whether such collective responsibility does not involve that, generally speaking, every act or omission of the Ministry can be legitimately the subject of debate; whether in such a case we should look to the Constitution not for the extent of powers of discussion, but only for limitations if any; whether subject to such express limitations, every act or omission of the Government can be canvassed on the floor of the House, are all matters on which I should welcome the opinion of the Hon'ble Members. By way of example I may refer to Article 203, which precludes a vote on the estimates which relate to expenditure charged upon the consolidated fund of the State and to Article 211 which precludes any discussion with respect to any Judge of the Supreme Court or of a High Court in the discharge of his duties. These are limitations imposed by the Constitution and to these limitations this House is undoubtedly subject.

I should also request the Hon'ble Members to enlighten me on the question, whether any distinction can be drawn between an act or omission of the Government of India and any act or omission of the Government of Mysore which precedes or is required by the Constitution to precede such act or omission of the Government of India. In this respect I am sure that the Hon'ble Members will have noticed that the Constitution of India itself appears to make a distinction between three categories of cases. There are certain acts of the Government of India or of Parliament which require a prior consent of the State Government concerned.

By way of example only, I would refer to Articles 133 (2), 239, 258, 278 and 306. On the other hand certain articles provide for consultation; for example, Articles 217, 341 and 342. Thirdly, there is the category of cases which was referred to by the Hon'ble Chief Minister the other day. They are cases where the Constitution does not provide for consent of or consultation with the State, but where as a matter of fact there has been consultation with the State Government by the Government of India before that Government has taken action in a matter which affects this State. It may be that the Government of India has consulted this Government or that this Government has *suo moto* made its recommendations or offered its suggestion.

Finally I would like to refer to Articles 73 and 162 which relate to the extent of the executive power of the Union and the State, respectively. Proviso to 73 (1) and 73 (2) indicate that in certain cases even where Parliament has power to make laws, the executive power may be that of the State and the Officers and authorities of the State may exercise executive power or functions.

Article 258 is also relevant in this connection. The Government of a State or its Officers may be entrusted with functions in relation to matters to which the executive power of the Union extends. I should also like to refer to Article 282 which empowers a State to make grants for purposes with respect to which the Legislature cannot make laws, indicating, as I observed already, that the power of debate may not be co-terminus with the powers of legislation.

If Hon'ble Members have any other matters to bring to my notice which have a bearing on this question, they are welcome to do so. I am sure that all Members will give their considered views and assistance in coming to a satisfactory and correct decision on this vital question.

Statement by the Speaker *re* setting up of a Rules Committee to revise the Legislative Assembly Rules of Procedure.

Mr. SPEAKER (Sri V. Venkatappa).—Some time earlier during this session I indicated that I would consider the question of revising our Rules of Procedure. The Hon'ble Leader of the House and Janab Mahomed Imam also desired that this should be taken on hand.

Article 208 of the Constitution likewise provides for it. The article primarily requires that the House should make rules for regulating its procedure and conduct of its business, subject of course to the provisions of the Constitution. Until this is done, existing rules with such modifications and adaptations as the Speaker may make are to apply and it is under this provision that I made certain changes in the Legislative Council Rules of Procedure and we are now working under these revised rules.

It is usual and it is also desirable that a set of draft rules should be first prepared by a small committee of the House. These rules will then come up before the House for its consideration and acceptance. I propose that we should also proceed on the same lines. This Committee may consist of the following members:—

1. Sri K. T. Bhashyam
2. Janab Mahomed Imam
3. Sri D. H. Chandrasekharaiya
4. Sri M. Govinda Reddy
5. Sri Kadidal Manjappa
6. Sri A. G. Ramachandra Rao.

I shall be the Chairman of the Committee. I have no doubt that taking note of the changed constitutional set-up and examining the rules in other State legislatures and the Parliament, as well as the rules to which the legislatures in Mysore are accustomed, and keeping in view the need for a satisfactory and quick despatch of business, the Committee will evolve a set of rules which will be eminently suitable to this House.

Statement by the Speaker *re* Privileges Committee to report on the Powers, Privileges and Immunities of the Legislative Assembly.

MR. SPEAKER (Sri V. Venkatappa). — The Constitution of India contains certain provisions regarding the powers, privileges and immunities of Legislatures and of members and committees thereof. Clause (1) of Article 194 secures freedom of speech ; clause (2) of the same article states that no member shall be liable in respect of anything said or any vote given by him in the Legislature or any committee thereof and no person shall be so liable in respect of the publication by or under the authority of a House of such a Legislature of any report, paper, votes or proceedings. Clause 3 of the article reads as follows :—

> " In other respects, the powers, privileges and immunities of a House of the Legislature of a State, and of the members and the committees of a House of such Legislature, shall be such as may from time to time be defined by the Legislature by law, and, until so defined, shall be those of the House of Commons of the Parliament of the United Kingdom, and of its members and committees, at the commencement of this Constitution " .

It will thus be seen that it is left to the legislature to define by law these powers, privileges and immunities, but until so defined, the powers, privileges and immunities of the House of Commons of the Parliament of England shall be the powers, privileges and immunities of a House of Legislature.

A conference of presiding officers of legislative bodies held in New Delhi in September last year considered this point and it was decided at that Conference that a preliminary survey should be made by the States with a view to finding out what should be the privileges of members and on what points legislation may be necessary.

In respect of the Mysore Legislative Assembly we have made provisions in the rules for the appointment of a Committee of Privileges, to consider and advise on matters relating to privileges of the members collectively, privileges of the members individually and the privileges of the Speaker and such a Committee has been already set up.

I think that the question of undertaking a preliminary survey of the privileges which should be defined by legislation may well be examined in the first instance by the Committee of Privileges. The Assembly could consider this subject in detail later when considering the report of the Committee.

I therefore refer to the Committee of Privileges the following question.

> " That a preliminary survey be made with a view to finding out what should be the powers, privileges and immunities of the Legislative Assembly of Mysore and of the members and the committees thereof " .

I shall be the Chairman of this Committee.

ಶ್ರೀ ಎಂ. ಮಾದಯ್ಯನವರು.—ತಾವು ಓದಿದ ಸ್ಟೇಟ್‌ಮೆಂಟಿನ ಕಾಪಿಯನ್ನು ಸದಸ್ಯರಿಗೆ ಈ ದಿವಸ ಸಾಯಂಕಾಲದೊಳಗೇ ಕಳುಹಿಸಿದರೆ ಉತ್ತಮ.

ಅಧ್ಯಕ್ಷರು.—ಎಲ್ಲರಿಗೂ ಅದನ್ನು ಈ ದಿನ ಸಾಯಂಕಾಲದೊಳಗೇ ಕಳುಹಿಸಲು ಸಾಧ್ಯವೇ ಎಂಬುದನ್ನು ಯೋಚನೆಮಾಡಬೇಕಾಗಿದೆ.

SRI L. SIDDAPPA.—At least to the Leaders of the Parties.

MR. SPEAKER.—That, I think, can be done.

The House will now adjourn.

The Assembly adjourned at Fifteen Minutes past One of the Clock to meet again at Thirty Minutes past Eight of the Clock on Tuesday, 4th April 1950.